06 September 2026 Sunday

SINCE 1957

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

# ವರ್ತಮಾನ

ಸಂಪಾದಕ: ಕೆ.ಎನ್.ರವಿ

ಭವಿಷ್ಯದ ಮುನ್ನುಡಿ

**ಭಾವನಾಂತರಂಗ**

ಒಳ್ಳೆಯ ಕೆಲಸ ಮಾಡಲು ಯಾವ ಸಮಯವೂ ಶೀಘ್ರವಲ್ಲ ಅಥವಾ ವಿಳಂಬವೂ ಅಲ್ಲ!

-ಸ್ನೇಹಾ ಆನಂದ್

info.varthaman@gmail.com



ರಾಮನಗರ: ಪ್ರಜಾಸೇವೆ ಆಂದೋಲನಕ್ಕೆ ಸಚಿವರಿಂದ ಚಾಲನೆ — ಪುಟ ಸಂ. 2



ಮೈಸೂರು: 500 ಮಂದಿಗೆ ಸ್ಥಳದಲ್ಲೇ ಉದ್ಯೋಗ — ಪುಟ ಸಂ. 3



ಹೈನುಗಾರಿಕೆಯಿಂದ ರೈತರ ಬದುಕಿಗೆ ದಾರಿಯಾಗಿದೆ — ಪುಟ ಸಂ. 4

9742504916 | ಮೈಸೂರು | ಮಂಡ್ಯ | ಬೆಂಗಳೂರು | ಹಾಸನ | ಚಾಮರಾಜನಗರ | ರಾಮನಗರ | ಬೆಂಗಳೂರು | ಗ್ರಾಮಾಂತರ ಕೊಡಗು | ಕಾರ್ಯನಿರ್ವಾಹಕ ಸಂಪಾದಕ – ಕೆ.ಆರ್.ಮಿಹಿರ್ ಆಕಾಶ್

VARTHAMAN | Volume: 69 | Issue: 263 | Pages: 06 | KA/SK/MYS/1098/2023-2025 | R.N.I. No.3577/1957 | www.varthaman.in | Price-3

# ಸರ್ಕಾರಿ ಆಡಳಿತವೇ ಜನರ ಬಳಿಗೆ

## 'ಪ್ರಜಾಸೇವಾ ಇಲಾಖೆ'ಗೆ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಲನೆ

**ಬಳ್ಳಾರಿ:** ಜನರ ಸೇವೆಯೇ ಜನಾರ್ದನ ಸೇವೆ. ದೊರೆಗಳ ಆಡಳಿತ ಮುಗಿದು ಈಗ ಪ್ರಜೆಗಳ ಆಡಳಿತ ಬಂದಿದೆ. ಹೀಗಾಗಿ ನನ್ನನ್ನು ನಾಡಿನ ದೊರೆ ಎಂದು ಕರೆಯುವ ಬದಲು ಪ್ರಜಾಸೇವಕ ಎಂದು ಕರೆದರೆ ಅದು ನನಗೆ ಅತ್ಯಂತ ಸಂತೋಷ ತರುತ್ತದೆ ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು.

ವಿಜಯನಗರ ಜಿಲ್ಲೆಯ ಕೂಡ್ಲಿಗಿಯಲ್ಲಿ ಶನಿವಾರ ನೂತನ 'ಪ್ರಜಾಸೇವಾ ಇಲಾಖೆ'ಗೆ ಚಾಲನೆ ನೀಡಿ ಅವರು ಮಾತನಾಡಿದರು. ಸಾರ್ವಜನಿಕರು ತಮ್ಮ ಕೆಲಸಗಳಿಗಾಗಿ ಸರ್ಕಾರಿ ಕಚೇರಿಗಳು ಹಾಗೂ ಅಧಿಕಾರಿಗಳ ಬಳಿ ಅಲೆಯುವ ಕಾಲ ಈಗ ಮುಗಿದಿದೆ. ಸರ್ಕಾರದ ಆಡಳಿತವೇ ನೇರವಾಗಿ ಜನರ ಮನೆ ಬಾಗಿಲಿಗೆ ತಲುಪಬೇಕು ಎನ್ನುವ ಪವಿತ್ರ ಉದ್ದೇಶದಿಂದ ಈ ಇಲಾಖೆ ಆರಂಭಿಸಲಾಗಿದೆ ಎಂದು ಅವರು ವಿವರಿಸಿದರು.

ರಾಜ್ಯದ ಜನತೆ 136 ಶಾಸಕರನ್ನು ಗೆಲ್ಲಿಸಿ, ಇಡೀ ದೇಶಕ್ಕೇ ಮಾದರಿ ಆಗುವಂತಹ ಹೊಸ ದಾರಿಯಲ್ಲಿ ಸಾಗಲು ನಮ್ಮ ಸರ್ಕಾರಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಹೀಗಾಗಿ ಆಡಳಿತವೇ ಜನರ ಬಳಿಗೆ ಹೋಗಬೇಕೆಂಬುದು ಸರ್ಕಾರದ ಆಶಯ ಎಂದು ಹೇಳಿದರು.

ವಿಧಾನಸೌಧ, ಡಿಸಿ ಕಚೇರಿ ಅಥವಾ ತಾಲ್ಲೂಕು ಕಚೇರಿಗಳಲ್ಲಿ ಕುಳಿತು ಜನರಿಂದ ದೂರವಿದ್ದು ಆಡಳಿತ ನಡೆಸುವುದು ಇನ್ಮುಂದೆ ನಡೆಯಲ್ಲ. ಪ್ರತಿಯೊಬ್ಬ ನಾಗರಿಕನಿಗೂ ಸಚಿವರು, ಶಾಸಕರು ಅಥವಾ ಅಧಿಕಾರಿಗಳನ್ನು ನೇರವಾಗಿ ಭೇಟಿ ಮಾಡಲು ಸಾಧ್ಯವಾಗುವುದಿಲ್ಲ. ಹೀಗಾಗಿ, ಜನರ ಸಮಸ್ಯೆಗಳನ್ನು ಆಲಿಸಿ, ಸ್ಥಳದಲ್ಲೇ ನೇರ ಪರಿಹಾರ ಒದಗಿಸುವ ನಿಟ್ಟಿನಲ್ಲಿ ಪ್ರಜಾಸೇವಾ ಇಲಾಖೆ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಇದು ಕೇವಲ ಒಂದು ಸರ್ಕಾರಿ ಇಲಾಖೆಯಾಗದೆ, ಜನರ ಬದುಕಿನಲ್ಲಿ ಸಕಾರಾತ್ಮಕ ಬದಲಾವಣೆ ತರುವ ಜನಪರ ವ್ಯವಸ್ಥೆಯಾಗಿ ಹೊರಹೊಮ್ಮಲಿದೆ ಎಂದು ಅವರು ಭರವಸೆ ನೀಡಿದರು.

### ಗ್ರಾಮೀಣ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಮೀಸಲಾತಿ

ಗ್ರಾಮೀಣ ಭಾಗದಲ್ಲಿ ಓದುವ ಮಕ್ಕಳಿಗೆ ಪ್ರೋತ್ಸಾಹ ನೀಡಲು ಶೇ.15ರಷ್ಟು ಗ್ರಾಮೀಣ ಮೀಸಲಾತಿ ಈಗಾಗಲೇ ಜಾರಿಯಲ್ಲಿದೆ. ಸರ್ಕಾರಿ ಶಾಲೆಗಳಲ್ಲೇ ಮಕ್ಕಳು ವಿದ್ಯಾಭ್ಯಾಸ ಮಾಡುವುದನ್ನು ಉತ್ತೇಜಿಸಲು ಗ್ರಾಮೀಣ ಸರ್ಕಾರಿ ಶಾಲೆಗಳಲ್ಲಿ ಮಾತ್ರ ವಿದ್ಯಾಭ್ಯಾಸ ಮಾಡಿದವರಿಗೆ ಈ ಶೇ.15 ಮೀಸಲಾತಿಯಲ್ಲಿ ಶೇ.7.5ರಷ್ಟು ಆಂತರಿಕ ಮೀಸಲಾತಿ ನೀಡಲು ಸರ್ಕಾರ ಚಿಂತನೆ ನಡೆಸಿದೆ ಎಂದು ಸಿಎಂ ಡಿಕೆಶಿ ಘೋಷಿಸಿದರು.

### ಮನೆ ಬಾಗಿಲಿಗೆ ಇ-ಖಾತೆ

ಭೂಮಿ ಗ್ಯಾರಂಟಿ ಯೋಜನೆಯಡಿ ಆಸ್ತಿಗಳ ಅಳತೆ ಮಾಡಿ, ಮಾಲೀಕರ ಭಾವಚಿತ್ರದೊಂದಿಗೆ ಇ-ಖಾತೆ ದಾಖಲೆಗಳನ್ನು ನೇರವಾಗಿ ಮನೆ ಬಾಗಿಲಿಗೆ ತಲುಪಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ನಿಮ್ಮ ಸರ್ಕಾರ, ನಿಮ್ಮ ಬಾಗಿಲಿಗೆ ಬಂದಿದೆ. ಸೇವೆಗಿರಲಿ ನಿಮ್ಮ ಸಹಕಾರ ಎಂಬ ಧ್ಯೇಯವಾಕ್ಯದೊಂದಿಗೆ ಈ ಅಭಿಯಾನವನ್ನು ಪ್ರಾರಂಭಿಸಲಾಗಿದೆ. ಬಡವರು ಮತ್ತು ಶಕ್ತಿ ಇಲ್ಲದವರಿಗೆ ನೆರವಾಗಲು ಉಚಿತ ಸರ್ಕಾರಿ ವಕೀಲರ ಸೌಲಭ್ಯ ಸೇರಿದಂತೆ ಕಾನೂನು ನೆರವು ನೀಡುವ ತೀರ್ಮಾನವನ್ನು ಸರ್ಕಾರ ಕೈಗೊಂಡಿದೆ ಎಂದು ಸಿಎಂ ತಿಳಿಸಿದರು.

ಜನಸಾಮಾನ್ಯರು, ಶಾಸಕರು, ಮಂತ್ರಿಗಳು ಅಥವಾ ತಾಲ್ಲೂಕು ಅಧಿಕಾರಿಗಳನ್ನು ಹುಡುಕಿಕೊಂಡು ಬರುವುದು ತಪ್ಪಬೇಕು. ಅಧಿಕಾರಿಗಳೇ ನೇರವಾಗಿ ಜನರ ಬಳಿಗೆ ತೆರಳಿ ಅವರ ಕುಂದುಕೊರತೆಗಳನ್ನು ಆಲಿಸಿ ಬಗೆಹರಿಸಬೇಕು ಎಂಬ ಉದ್ದೇಶದಿಂದ ಪ್ರಜಾಸೇವಾ ಇಲಾಖೆಗೆ ಚಾಲನೆ ನೀಡಲಾಗಿದೆ ಸಿಎಂ ಶಿವಕುಮಾರ್ ತಿಳಿಸಿದರು.




### ಮೊದಲ, 3ನೇ ಶನಿವಾರ ಜನರ ಬಳಿಗೆ ಅಧಿಕಾರಿಗಳು

ರಾಜ್ಯದ ಎಲ್ಲಾ 224 ಕ್ಷೇತ್ರಗಳಲ್ಲಿಯೂ ಈ ಪ್ರಜಾಸೇವಾ ವ್ಯವಸ್ಥೆ ಅನುಷ್ಠಾನಗೊಳ್ಳಲಿದೆ. ಪ್ರತಿ ತಿಂಗಳ ಮೊದಲನೇ ಮತ್ತು ಮೂರನೇ ಶನಿವಾರ ಜನಪ್ರತಿನಿಧಿಗಳು ಹಾಗೂ ಅಧಿಕಾರಿಗಳು ಜನರ ಮಧ್ಯದಲ್ಲಿದ್ದು ಕೆಲಸ ಮಾಡಬೇಕು. ಸಚಿವರು ತಾಲ್ಲೂಕು, ಹೋಬಳಿ ಮಟ್ಟದಲ್ಲಿ ಹಾಗೂ ಶಾಸಕರು ಪಂಚಾಯಿತಿ ಮಟ್ಟದಲ್ಲಿ ಈ ಕಾರ್ಯಕ್ರಮವನ್ನು ಮುನ್ನಡೆಸಲಿದ್ದಾರೆ ಎಂದು ಸಿಎಂ ಡಿ.ಕೆ.ಶಿವಕುಮಾರ್ ತಿಳಿಸಿದರು.

ಶಾಸಕರು ಉಪಸ್ಥಿತರಿಲ್ಲದಿದ್ದರೆ ಅಧಿಕಾರಿಗಳೇ ನೇರವಾಗಿ ಪಂಚಾಯಿತಿ ಕೇಂದ್ರಗಳಿಗೆ ತೆರಳಿ, ಸಣ್ಣ ಸಭೆಗಳನ್ನು ನಡೆಸಿ, ಸಾರ್ವಜನಿಕರಿಂದ ಬಂದ ಅಹವಾಲುಗಳನ್ನು ಸ್ವೀಕರಿಸಿ ಪರಿಹರಿಸಬೇಕು ಎಂದು ಮುಖ್ಯಮಂತ್ರಿ ಡಿಕೆಶಿ ನಿರ್ದೇಶನ ನೀಡಿದರು.

ಸರ್ಕಾರದ ಯೋಜನೆಗಳು ಹಾಗೂ ಸೌಲಭ್ಯಗಳು ಪ್ರತಿಯೊಬ್ಬರಿಗೂ ತಲುಪಬೇಕು ಎಂಬುದು ನಮ್ಮ ಮುಖ್ಯ ಉದ್ದೇಶವಾಗಿದೆ. ತಿಂಗಳಿಗೆ ಎರಡು ದಿನ ಅಧಿಕಾರಿಗಳು ಸ್ಥಳಕ್ಕೇ ಭೇಟಿ ನೀಡಿ ಪಿಂಚಣಿ, ಭೂಮಿ ವ್ಯಾಜ್ಯ, ಸರ್ಕಾರದ ಸೌಲಭ್ಯಗಳು, ಖಾತೆ ಬದಲಾವಣೆ, ಗ್ಯಾರಂಟಿ ಯೋಜನೆಗಳು ಹಾಗೂ ಮನೆ-ನಿವೇಶನಕ್ಕೆ ಸಂಬಂಧಿಸಿದ ಅರ್ಜಿಗಳನ್ನು ಪರಿಶೀಲಿಸಿ ಪರಿಹಾರ ಒದಗಿಸಲಾಗುವುದು. ಬಡವರು ಹಾಗೂ ಶೋಷಿತರಿಗೆ ತಹಶೀಲ್ದಾರ್, ಎಸಿ ಅಥವಾ ಡಿಸಿ ಮಟ್ಟದ ವ್ಯಾಜ್ಯಗಳಲ್ಲಿ ಹೋರಾಡಲು ಉಚಿತವಾಗಿ ವಕೀಲರ ಸೇವೆ ಒದಗಿಸಿ ಕಾನೂನು ನೆರವು ನೀಡಲಾಗುವುದು. ಅರ್ಜಿ ತಿರಸ್ಕೃತಗೊಂಡರೆ ಅದಕ್ಕೆ ಕಾರಣವನ್ನು ಸ್ಪಷ್ಟಪಡಿಸಲಾಗುವುದು. ಅರ್ಜಿದಾರರಿಗೆ

ಪುಟ 2ಕ್ಕೆ

### 2ನೇ ಹಂತದ ಬರ ಘೋಷಣೆ

ರಾಜ್ಯದ ಬರಪೀಡಿತ ತಾಲ್ಲೂಕುಗಳ ಘೋಷಣೆಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರದ ಮಾರ್ಗಸೂಚಿ ಮತ್ತು ನಿಯಮಗಳ ಚೌಕಟ್ಟಿನಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಾಗುವುದು. ಈಗಾಗಲೇ ರಾಜ್ಯದಲ್ಲಿ ಬರ ಪರಿಸ್ಥಿತಿ ಕುರಿತು ಎರಡನೇ ಹಂತದ ವರದಿ ಲಭ್ಯವಾಗಲಿದೆ. ಇನ್ನು 50ಕ್ಕೂ ಹೆಚ್ಚು ತಾಲ್ಲೂಕುಗಳ ಸಮೀಕ್ಷೆ ಪ್ರಗತಿಯಲ್ಲಿದೆ. ನಿಯಮಗಳ ಪ್ರಕಾರ 21 ದಿನಗಳ ಮಳೆಯ ಪ್ರಮಾಣ ಹಾಗೂ ನಿಗದಿತ ಮಾನದಂಡಗಳನ್ನು ಪರಿಶೀಲಿಸಿ ಈ ತಿಂಗಳ ಅಂತ್ಯದ ವೇಳೆಗೆ ಅಭಾವ ಎದುರಿಸುತ್ತಿರುವ ಎಲ್ಲಾ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

### ಶಿಕ್ಷಕರಿಗೆ 'ಟಿಆರ್ ಗೌರವ'

ದೇಶದ ಅಭಿವೃದ್ಧಿಗೆ ಸೈನಿಕ, ಕಾರ್ಮಿಕ ಹಾಗೂ ಕೃಷಿಕರಷ್ಟೇ ಶಿಕ್ಷಕರ ಕೊಡುಗೆಯೂ ಪ್ರಮುಖ. ಆದ್ದರಿಂದ ಮುಂಬರುವ ದಿನಗಳಲ್ಲಿ ಶಿಕ್ಷಕರ ಹೆಸರಿನ ಮುಂದೆ ಟಿಆರ್ (ಟೀಚರ್) ಎಂದು ಸೇರಿಸಿ ಗೌರವಿಸುವ ಸಂಪ್ರದಾಯವನ್ನು ಪ್ರತಿಯೊಬ್ಬರೂ ಮಾಡಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಕರೆ ನೀಡಿದರು. ಶಿಕ್ಷಕರ ದಿನಾಚರಣೆಯ ಮಹತ್ವವನ್ನು ಸ್ಮರಿಸಿದ ಅವರು, ರಾಜ್ಯದಲ್ಲಿ ನಾಲ್ಕೂವರೆ ಲಕ್ಷಕ್ಕೂ ಹೆಚ್ಚು ಶಿಕ್ಷಕರಿದ್ದಾರೆ. ಜನ್ಮ ನೀಡಿದ ತಾಯಿ ಮತ್ತು ಅಕ್ಷರ ಕಲಿಸಿದ ಶಿಕ್ಷಕರಿಬ್ಬರೂ ನಮಗೆ ದೇವರು ಇದ್ದಂತೆ. ವೈದ್ಯರು, ಎಂಜಿನಿಯರ್‌ಗಳಿಗೆ ಸಿಗುವಂತೆ ಶಿಕ್ಷಕರಿಗೂ ಗೌರವ ನೀಡಲು, ಅವರ ಹೆಸರಿನ ಮುಂದೆ 'ಟೀಚರ್' ಎಂಬ ಬಿರುದು ಬಳಸುವ ಕುರಿತು ಸಂಪುಟ ಸಭೆಯಲ್ಲಿ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು ಎಂದು ತಿಳಿಸಿದರು.

ಜನರ ಹತ್ತಿರಕ್ಕೆ ಆಡಳಿತವನ್ನು ಒಯ್ಯುವುದೇ ಸರ್ಕಾರದ ಮೂಲ ಉದ್ದೇಶವಾಗಿದೆ. ಹೆಲಿಕಾಪ್ಟರ್ ಪ್ರವಾಸದ ಕುರಿತು ಬರುವ ಟೀಕೆಗಳಿಗೆ ತಲೆಕೆಡಿಸಿಕೊಳ್ಳುವುದಿಲ್ಲ. ಟೀಕೆಗಳು ಸಾಯುತ್ತವೆ. ಆದರೆ ನಾವು ಮಾಡಿದ ಕೆಲಸಗಳು ಮಾತ್ರ ಉಳಿಯುತ್ತವೆ ಎಂದು ಅವರು ಪ್ರತಿಪಾದಿಸಿದರು.

ಸಾರ್ವಜನಿಕರ ಅರ್ಜಿಗಳಿಗೆ ಕೇವಲ ಸ್ವೀಕೃತಿ ನೀಡುವುದು ಮುಖ್ಯವಲ್ಲ; ಅವರಿಗೆ ಸೂಕ್ತ ಪರಿಹಾರ ತಲುಪಿದಾಗ ಮಾತ್ರ ಯೋಜನೆಯ ನೈಜ ಯಶಸ್ಸು ಸಾಧ್ಯ ಎಂದು ಹೇಳಿದರು.

ಸಮಾಜದ ಪ್ರತಿಯೊಂದು ವರ್ಗಕ್ಕೂ ಅಂಬೇಡ್ಕರ್ ಅವರ ಚಿಂತನೆಯಂತೆ ಸಮಾನ ಗೌರವ ಸಿಗಬೇಕು ಎಂಬುದು ಸರ್ಕಾರದ ಆಶಯ. ಸರ್ಕಾರ ನೀಡಿದ ಐದು ಗ್ಯಾರಂಟಿ ಯೋಜನೆಗಳನ್ನು ಟೀಕಿಸಿದ್ದ ವಿರೋಧ

ಪುಟ 2ಕ್ಕೆ

# ರಾಗಾಗೆ ಮಾತು ಕೊಟ್ಟಂತೆ ಸಿಎಂ ಸ್ಥಾನಕ್ಕೆ ರಾಜೀನಾಮೆ

**ಚಿಕ್ಕಮಗಳೂರು:** ಮುಖ್ಯಮಂತ್ರಿ ಸ್ಥಾನಕ್ಕೆ ಯಾವುದೇ ಕಾರಣಕ್ಕೂ ರಾಜೀನಾಮೆ ಕೊಡಬೇಡಿ ಸರ್ ಅಂಥ ಬಹಳ ಜನ ನನಗೆ ಹೇಳಿದ್ದರು. ಆದರೆ ನಾನು ಮಾತು ಕೊಟ್ಟಂತೆ ರಾಜೀನಾಮೆ ಕೊಟ್ಟಿದ್ದೇನೆ ಎಂದು ಮಾಜಿ ಸಿಎಂ ಸಿದ್ದರಾಮಯ್ಯ ತಿಳಿಸಿದರು.

ಕಡೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಸಿದ್ದರಾಮಯ್ಯ ಅವರು, ಮುಖ್ಯಮಂತ್ರಿ ಸ್ಥಾನದ ರಾಜೀನಾಮೆ ಹಿಂದಿನ ರಹಸ್ಯವನ್ನು ಈಗ ಬಹಿರಂಗಪಡಿಸಿದರು. ರಾಹುಲ್ ಗಾಂಧಿ ಅವರಿಗೆ ನಾನು ಮಾತು ಕೊಟ್ಟಿದ್ದೆ. ಹೀಗಾಗಿ ಅವರು ಹೇಳಿದ ತಕ್ಷಣ ರಾಜೀನಾಮೆ ಕೊಟ್ಟೆ ಎಂದು ಹೇಳಿದರು. ನಾನು ಯಾವುದೋ ದೇವಸ್ಥಾನಕ್ಕೆ ಹೋದಾಗ ಮೋದಿ...ಮೋದಿ... ಅಂತಿದ್ರು. ಮೋದಿ ಏನು ಸ್ವಾತಂತ್ರಕ್ಕೆ ಹೋರಾಡಿದ್ದಾರೆಯೇ? ಸಂಗೊಳ್ಳಿ ರಾಯಣ್ಣ ರೀತಿ ಹೋರಾಡಿದ್ರಾ? ಜನ ಸುಮ್ನೆ ಮೋದಿ, ಮೋದಿ ಅಂತಾರೆ. ಮೋದಿ ಕೊಡಬೇಕಾಗಿದ್ದ 2 ಕೋಟಿ ಉದ್ಯೋಗ ಎಲ್ಲಿ? ಅಚ್ಚೇ ದಿನ್ ಎಲ್ಲಿ, ರೈತರ ಆದಾಯ ದುಪ್ಪಟ್ಟು ಮಾಡ್ತೀನಿ ಅಂದ್ರು ಮಾಡಿದ್ರಾ? 12 ವರ್ಷ ಆಯ್ತು ಪ್ರಧಾನಿ ಆಗಿ, ಕಪ್ಪು ಹಣ ತಂದು



ಪ್ರತಿಯೊಬ್ಬರ ಖಾತೆಗೆ 15 ಲಕ್ಷ ಹಾಕ್ತೀನಿ ಅಂದಿದ್ರು, ಹಾಕಿದ್ರಾ? ಪಾರ್ಲಿ ಮೆಂಟ್ ಚುನಾವಣೆಯಲ್ಲಿ ಬಿಜೆಪಿಗೆ ಏಕೆ ಮತ ಹಾಕಬೇಕು? ಜನರಗೆ ತಪ್ಪು ಮಾಹಿತಿ ನೀಡಿ ತಪ್ಪು ದಾರಿಗೆ ಎಳೆದಿದ್ದಾರೆ ಎಂದು ವಾಗ್ದಾಳಿ ನಡೆಸಿದರು.

ರಾಹುಲ್ ಗಾಂದಿಗೆ ಮಾತು ಕೊಟ್ಟಿದ್ದೆ. ಅವರು ರಾಜೀನಾಮೆ ಕೊಡು ಅಂದ್ರು ಕೊಟ್ಟೆ. ಬಹಳ ಜನ ನನಗೆ ಕೊಡಬೇಡಿ ಸರ್ ಅಂದ್ರು. ಇಲ್ಲ ಮಾತು ಕೊಟ್ಟಿದ್ದೇನೆ ಕೊಡಬೇಕು ಅಂತ ಕೊಟ್ಟೆ. ರಾಜಕೀಯದಲ್ಲಿ

ಪುಟ 2ಕ್ಕೆ

### 'ಲೂಟಿ ರವಿ' ಅಂಥಾರೆ!

ತಮ್ಮಯ್ಯಾ ಯಾರಯ್ಯಾ ಅವ್ನು, ನಿನ್ನ ಮೇಲೆ ಸೋತದ್ದು? ಹ್ಞಾ, ಸಿ.ಟಿ.ರವಿ. ಸಿ.ಟಿ.ರವಿ ಮೊನ್ನೆ ಹೇಳ್ತಿದ್ನಂತೆ. ಗೃಹಲಕ್ಷ್ಮಿ ಯೋಜನೆ ಕೊಡ್ಲಿಲ್ಲ ಅದಕ್ಕೆ ಸಿಎಂ ಸ್ಥಾನ ಹೋಯ್ತು ಅಂದನಂತೆ. ಅವನನ್ನು ನಮ್ಮ ಕಡೆ ಲೂಟಿ ರವಿ ಅಂಥ ಕರೆಯುತ್ತಾರೆಂದು ಸಿದ್ದರಾಮಯ್ಯ ಲೇವಡಿ ಮಾಡಿದರು.

# ನಂಬರ್ ಪ್ಲೇಟ್ ಇಲ್ಲದ ವಾಹನದಲ್ಲಿ ಎಚ್‌ಡಿಕೆ ಓಡಾಟ!

## ಕೇಂದ್ರ ಸಚಿವರ ವಿರುದ್ಧ ಮಾಜಿ ಸಚಿವ ಮಾಧುಸ್ವಾಮಿ ಆಡಿಯೋ ವೈರಲ್

**ಬೆಂಗಳೂರು:** ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಲೋಕಸಭೆ 2019ರ ಚುನಾವಣೆ ವೇಳೆ ಕುಮಾರಸ್ವಾಮಿ ಬಗ್ಗೆ ಮಾತನಾಡಿದ್ದ ಹಳೆಯ ವಿಡಿಯೋ ಈಗ ವೈರಲ್ ಆಗಿದೆ.

ಕೆಪಿಎಸ್ ಸಿ ಹಗರಣ ಸಂಬಂಧ ಚಲುವರಾಯಸ್ವಾಮಿ ಮತ್ತು ಕುಮಾರಸ್ವಾಮಿ ನಡುವಿನ ಕೆಸರೆರಚಾಟದ ನಡುವೆಯೇ ಈ ವಿಡಿಯೋ ವೈರಲ್ ಆಗಿರುವುದು ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿದೆ.

ವಿಧಾನಸಭೆಯಲ್ಲಿ ಸಭಾ ನಾಯಕರಿಲ್ಲದೇ ಏಕೆ ಅಧಿವೇಶನವನ್ನು ಕರೆದಿರಿ ಎಂದು ಅಂದು ಸ್ಪೀಕರ್ ಆಗಿದ್ದ ರಮೇಶ್ ಕುಮಾರ್ ಅವರನ್ನು ಪ್ರಶ್ನಿಸಿದ್ದೆ. ಆದರೆ ಅವರು ಕುಮಾ



ರಸ್ವಾಮಿ ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ ಎಂದು ಹೇಳಿದ್ದರು.

ಆದರೆ ಆ ಸಮಯದಲ್ಲಿ ಮುಖ್ಯಮಂತ್ರಿ ಕುಮಾರಸ್ವಾಮಿ ನಂಬರ್ ಇಲ್ಲದ ಹೊಸ ಅಂಬಾಸಿಡರ್ ಕಾರಿನಲ್ಲಿ ಮಂಗಳೂರಿನಲ್ಲಿ ಓಡಾಡುತ್ತಿದ್ದರು. ಏಕೆಂದರೆ ಶಾಸ್ತ್ರ ಕೇಳಿ ರಾಧಿಕಾಗೆ ಅಬಾರ್ಷನ್ ಮಾಡಿಸಲು ಮುಂದಾಗಿದ್ದರು. ಆದರೆ ಆಕೆ ಒಪ್ಪಲಿಲ್ಲ. ಹೀಗಾಗಿ ಆಕೆಯ ಮನವೊಲಿಸಲು ಯಾರ್ಯಾರ ಮನೆ ಬಾಗಿಲಿಗೆ ಹೋಗಿದ್ದಾರೆ ಎಂಬುದು ನನಗೆ ಗೊತ್ತು. ನಾನು ಸುಳ್ಳು ಹೇಳುತ್ತಿಲ್ಲ. ನನ್ನ ಬಳಿ ಅಧಿಕೃತ ಮಾಹಿತಿ ಇದೆ. ನನಗೆ ಯಾವುದೇ ಭಯ ಇಲ್ಲ. ಮುಖ್ಯಮಂತ್ರಿ ಸ್ಥಾನದಲ್ಲಿದ್ದುಕೊಂಡು ಮೊದಲನೆ ಹೆಂಡತಿಗೆ ಹೇಳದೆ ಎರಡನೇ ಮದುವೆಯಾಗಿರುವ ಇವರಿಗೆ ನೈತಿಕತೆ ಇದೆಯಾ? ಎಂದು ಕುಮಾರಸ್ವಾಮಿ ವಿರುದ್ಧ ಮಾಧುಸ್ವಾಮಿ ಮಾತನಾಡಿರುವ ಹಳೇ ವಿಡಿಯೋ ಈಗ ವೈರಲ್ ಆಗಿದೆ.

# ರಂಗನತಿಟ್ಟು ದೋಣಿ ವಿಹಾರ ಸ್ಥಗಿತ

**ಮಂಡ್ಯ:** ತಮಿಳುನಾಡಿಗೆ ಕೆಆರ್‌ಎಸ್ ಜಲಾಶಯದಿಂದ ಕಾವೇರಿ ನೀರು ಹರಿಸುತ್ತಿರುವುದರಿಂದ ಪ್ರಸಿದ್ಧ ಪ್ರವಾಸಿ ತಾಣ ರಂಗನತಿಟ್ಟು ಪಕ್ಷಿಧಾಮದ ಮೇಲೂ ತೀವ್ರ ಪರಿಣಾಮ ಬೀರಿದೆ. ಸುರಕ್ಷತಾ ದೃಷ್ಟಿಯಿಂದ ಪಕ್ಷಿಧಾಮದಲ್ಲಿ ಕಳೆದ 10 ದಿನಗಳಿಂದ ದೋಣಿ ವಿಹಾರವನ್ನು ಸಂಪೂರ್ಣವಾಗಿ ಸ್ಥಗಿತಗೊಳಿಸಲಾಗಿದೆ.

ಸಾಮಾನ್ಯವಾಗಿ ಮುಂಗಾರು ಹಂಗಾಮಿನಲ್ಲಿ ನದಿಯಲ್ಲಿ ಪ್ರವಾಹ ಪರಿಸ್ಥಿತಿ ಉಂಟಾದಾಗ ಮಾತ್ರ ಮುನ್ನೆಚ್ಚರಿಕಾ ಕ್ರಮವಾಗಿ ಇಲ್ಲಿ ಬೋಟಿಂಗ್ ಬಂದ್ ಮಾಡಲಾಗುತ್ತಿತ್ತು. ಆದರೆ ಪ್ರಸ್ತುತ ಬರಗಾಲದ ನಡುವೆಯೂ ತಮಿಳುನಾಡಿಗೆ ಕೆಆರ್‌ಎಸ್‌ನಿಂದ ನಿತ್ಯ 9,000 ಕ್ಯೂಸೆಕ್ ನೀರು ಹರಿಸಲಾಗುತ್ತಿದೆ. ನದಿಯಲ್ಲಿ ನೀರಿನ ಹರಿವಿನ ವೇಗ ಹಾಗೂ ಮಟ್ಟದಲ್ಲಿ ದಿಢೀರ್ ಏರುಪೇರಾಗುತ್ತಿರುವು




ದರಿಂದ ಪ್ರವಾಸಿಗರ ಸುರಕ್ಷತಾ ದೃಷ್ಟಿಯಿಂದ ಅರಣ್ಯ ಇಲಾಖೆ ದೋಣಿ ವಿಹಾರವನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದೆ.

ಪುಟ 2ಕ್ಕೆ

# ಪಾದಯಾತ್ರೆಯಿಂದ ಬಿಜೆಪಿಗರ ಬಿಪಿ, ಶುಗರ್ ಕಡಿಮೆ ಆಗುತ್ತೆ!

**ಕಾರವಾರ:** ಬಿಜೆಪಿ ಪಾದಯಾತ್ರೆಯಿಂದ ಸರ್ಕಾರಕ್ಕೆ ಆತಂಕ ಎನ್ನುವುದು ಸುಳ್ಳು. ಪಾದಯಾತ್ರೆಯಿಂದ ನಮಗೆ ನಷ್ಟ ಇಲ್ಲ. ಬಿಜೆಪಿಯವರ ಬಿಪಿ, ಶುಗರ್ ಕಾಯಿಲೆ ಕಡಿಮೆ ಆಗುತ್ತದೆ ಎಂದು ಸಚಿವ ಲಕ್ಷ್ಮಣ್ ಸವದಿ ಲೇವಡಿ ಮಾಡಿದರು.

ಮಾಧ್ಯಮಗಳ ಜೊತೆ ಶನಿವಾರ ಮಾತನಾಡಿದ ಸವದಿ, ಬಿಜೆಪಿಗರಿಗೆ ಪಾದಯಾತ್ರೆಯಿಂದ ಬಿಬಿ-ಶುಗರ್ ಕಡಿಮೆ ಆದರೆ, ಅವರನ್ನ ನೋಡುವ ವೈದ್ಯರಿಗೆ ಆದಾಯಕ್ಕೆ ನಷ್ಟ ಆಗುತ್ತದೆ. ಕಾಂಗ್ರೆಸ್‌ನವರಿಗೆ ಯಾವುದೇ ನಷ್ಟ ಇಲ್ಲ. ಬಿಜೆಪಿಗರ ಬಿಪಿ-ಶುಗರ್ ಕಾಯಿಲೆ ಕಡಿಮೆ ಆಗುತ್ತೆ ಅನ್ನೋದೆ ಒಂದು ದೊಡ್ಡ ಹೈಲೆಟ್ ಎಂದು ತಿರುಗೇಟು ನೀಡಿದರು.

ರಾಜ್ಯದಲ್ಲಿ ನಿಗಮ ಮಂಡಳಿ ನೇಮಕ ಕುರಿತು

ಪುಟ 2ಕ್ಕೆ



# ತುಮಕೂರು ವಿವಿಯಲ್ಲೂ 'ಕನ್ನಾಳೆ ಕರಾಮತ್ತು'

## ಸಿಂಡಿಕೇಟ್ ಸದಸ್ಯ, ವಿವಿ ಬಜೆಟ್ ಜಾರಿಯಲ್ಲಿ ಪ್ರಮುಖ ಪಾತ್ರ

**ತುಮಕೂರು:** ಕೆಪಿಎಸ್‌ಸಿ ಹಗರಣದ ಬೇರು ತುಮಕೂರಿಗೂ ವ್ಯಾಪಿಸಿದೆ. ಕೆಪಿಎಸ್‌ಸಿ ಪಶುವೈದ್ಯರ ನೇಮಕಾತಿ ಹಗರಣದ ಪ್ರಮುಖ ಆರೋಪಿ ಬಸವರಾಜ ಕನ್ನಾಳೆಯಿಂದ ತುಮಕೂರು ವಿವಿಯಲ್ಲೂ ಹಲವು ಅವ್ಯವಹಾರ ನಡೆಸಿದ ಅನುಮಾನ ವ್ಯಕ್ತವಾಗಿದೆ. ಆ ದಿಕ್ಕಿನಲ್ಲೂ ಸಿಐಡಿ ಪೊಲೀಸರು ತನಿಖೆಗೆ ಮುಂದಾಗಿದ್ದಾರೆ.

ಕೆಪಿಎಸ್‌ಸಿ ನೇಮಕಾತಿ ಮಧ್ಯವರ್ತಿ, ಬಂಧಿತ ಬಸವರಾಜ ಕನ್ನಾಳೆ ತುಮಕೂರು ವಿಶ್ವವಿದ್ಯಾಲಯದ ಸಿಂಡಿಕೇಟ್ ಸದಸ್ಯನಾಗಿದ್ದಾನೆ. ಅಲ್ಲಿಯೂ ತನ್ನ ಕರಾಮತ್ತು ತೋರಿಸಿದ್ದಾನೆ ಎನ್ನಲಾಗಿದೆ. ವಿವಿಯ ನಾಮನಿರ್ದೇಶಿತ ಸಿಂಡಿಕೇಟ್ ಸದಸ್ಯ ಬಸವರಾಜ ಕನ್ನಾಳೆ ಹಲವು ಭ್ರಷ್ಟಾಚಾರ ಪ್ರಕರಣದಲ್ಲಿ ಪಾತ್ರ ವಹಿಸಿರುವ ಶಂಕೆ ವ್ಯಕ್ತವಾಗಿದೆ. ತುಮಕೂರು ವಿವಿ ಸಿಂಡಿಕೇಟ್ ಸದಸ್ಯನಾಗಿ ಬಸವರಾಜ

ಪುಟ 2ಕ್ಕೆ




### ಕುಲಪತಿ ಹುದ್ದೆಗೆ 'ವ್ಯವಹಾರ'

ತುಮಕೂರು ವಿವಿಯಲ್ಲಿ ಖಾಲಿಯಾಗಿರುವ ಕುಲಪತಿ ಹುದ್ದೆಗೆ ಅರ್ಜಿ ಸಲ್ಲಿಸಿರುವ ಸಾಕಷ್ಟು ಹಿರಿಯ ಪ್ರಾಧ್ಯಾಪಕರ ಸಂಪರ್ಕ ಸಾಧಿಸಿದ್ದ ಕನ್ನಾಳೆ. ಕುಲಪತಿ ಹುದ್ದೆ ಕೊಡಿಸುತ್ತೇನೆ ಎಂದು ಅವರೆಲ್ಲರೊಂದಿಗೆ ವ್ಯವಹಾರಕ್ಕೆ ಇಳಿದಿದ್ದ ಎಂಬ ಮಾತು ವಿವಿ ಆವರಣದಲ್ಲಿ ಬಹಿರಂಗವಾಗಿ ಚರ್ಚೆ ಆಗುತ್ತಿದೆ.

ಅನಂತಪುರಂ ಕೇಂದ್ರೀಯ ವಿವಿಯಲ್ಲಿ ಖಾಲಿರುವ ಕುಲಪತಿ ಹುದ್ದೆಗೆ ನೇಮಕ ಮಾಡಿಸುತ್ತೇನೆ ಎಂದು ತುಮಕೂರು

ಪುಟ 2ಕ್ಕೆ

# ರೆಸಾರ್ಟ್‌ನಲ್ಲಿ ತರಬೇತಿ



**ಬೆಂಗಳೂರು:** ಕರ್ನಾಟಕ ಲೋಕಸೇವಾ ಆಯೋಗದ ಪಶುವೈದ್ಯಕೀಯ ನೇಮಕಾತಿಯಲ್ಲಿ ನಡೆದಿರೋ ಕರ್ಮಕಾಂಡ ಬಗೆದಷ್ಟೂ ಬಯಲಾಗ್ತಿದೆ. ಪರೀಕ್ಷೆಯಲ್ಲಿ ಪಾಸಾಗಲು ದುಡ್ಡು ಕೊಟ್ಟಿದ್ದವರಿಗೆ ಬೆಂಗಳೂರಿನ ದೇವನಹಳ್ಳಿ ಬಳಿ ಇರುವ ಆರ್ಕಿಡ್ ನಿರ್ವಾಣ್ ವಿಲ್ಲಾ ಕಂ ರೆಸಾರ್ಟ್ನಲ್ಲಿ ಕೆಪಿಎಸ್‌ಸಿ ಪ್ರಶ್ನೆಪತ್ರಿಕೆಯ ತರಬೇತಿ ನೀಡಲಾಗಿತ್ತು ಎಂಬುದು ಬಹಿರಂಗಗೊಂಡಿದೆ.

ಪರೀಕ್ಷೆಗೆ ಒಂದು ವಾರ ಮುಂಚಿತವಾಗಿ ಈ ವಿಲ್ಲಾ ಕಂ ರೆಸಾರ್ಟ್ನಲ್ಲಿ ಅಭ್ಯರ್ಥಿಗಳಿಗೆ ಪ್ರಶ್ನೆಪತ್ರಿಕೆಗಳ ತರಬೇತಿ ನೀಡಲಾಗಿತ್ತು. ಈ ರೆಸಾರ್ಟ್ ಮೇಲೆ ದಾಳಿ ನಡೆಸಿದ್ದ ಇ.ಡಿ. ಅಧಿಕಾರಿಗಳು ರಹಸ್ಯವನ್ನ ಬಯಲು ಮಾಡಿದ್ದರು.

ಈ ಬೆನ್ನಲ್ಲೇ ಸಿಐಡಿ ಅಧಿಕಾರಿಗಳೂ ರೆಸಾರ್ಟ್ ಮೇಲೆ ದಾಳಿ ನಡೆಸಿ ಹಲವಾರು ಸಾಕ್ಷ್ಯಗಳನ್ನ ಕಲೆಹಾಕಿದ್ದಾರೆ. ಅಲ್ಲದೇ ಕಿಂಗ್‌ಪಿನ್ ಬಸವರಾಜ್ ಕನ್ನಾಳೆ ಕರೆತಂದು ಸ್ಥಳ ಮಹಜರು ನಡೆಸಿದರು. ಸಿಐಡಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ.

# ಪ್ರಜಾಸೇವೆ ಆಂದೋಲನಕ್ಕೆ ಸಚಿವರಿಂದ ಚಾಲನೆ

## ಜನಸಾಮಾನ್ಯರ ಕುಂದುಕೊರತೆಗಳನ್ನು ಸಕಾಲದಲ್ಲಿ ಬಗೆಹರಿಸುವ ವಿಭಿನ್ನ ಕಾರ್ಯಕ್ರಮ

ರಾಮನಗರ: ಸಾಮಾನ್ಯ ಜನರು ಎದುರಿಸುತ್ತಿರುವ ಕುಂದು ಕುರಿತೆಗಳ ಪರಿಹಾರಕ್ಕಾಗಿ ಮುಖ್ಯಮಂತ್ರಿಗಳು ಪ್ರಜಾಸೇವೆ ಎಂಬ ಇಲಾಖೆಯನ್ನೇ ಹುಟ್ಟು ಹಾಕಿದ್ದಾರೆ. ಇಲಾಖೆಯ ಮೂಲಕ ಕುಂದು ಕೊರತೆಗಳ ಪರಿಹಾರಕ್ಕಾಗಿ ಜನ ಸಾಮಾನ್ಯರ ಮನೆ ಬಾಗಿಲಿಗೆ ಆಡಳಿತ ತಲುಪಿಸುವ ಉದ್ದೇಶ ಇದಾಗಿದೆ. ಪ್ರತಿ ತಿಂಗಳು ಪ್ರಜಾ ಸೇವಾ ಅಂಧೋಲನಾ ಸಭೆಗಳು ನಡೆಯಲಿವೆ ಎಂದು ಜಿಲ್ಲಾ ಉಸ್ತುವಾರಿ ಸಚಿವರೂ ಆಗಿರುವ ಪೌರಾಡಳಿತ ಸಚಿವ ಎಚ್.ಸಿ.ಬಾಲಕೃಷ್ಣ ತಿಳಿಸಿದರು.

ಜಿಲ್ಲೆಯ ಚನ್ನಪಟ್ಟಣ ನಗರದ ಡಾ.ಬಿ.ಆರ್.ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಚೊಚ್ಚಲ ಪ್ರಜಾಸೇವಾ ಆಂದೋಲನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಪ್ರಜಾಸೇವೆ ಆಂದೋಲನಾ ಸಭೆಯ ಯಶಸ್ವಿಗೆ ಸ್ಥಳೀಯ ಜನಪ್ರತಿನಿಧಿಗಳು, ಅಧಿಕಾರಿಗಳು ಜವಾಬ್ದಾರಿಯಿಂದ ಕೆಲಸ ನಿರ್ವಹಿಸಬೇಕೆಂದು ಹೇಳಿದರು.

**ಆನ್‌ಲೈನ್, ಖುದ್ದು ಅಹವಾಲು ಸಲ್ಲಿಸಿ**

ಸಾರ್ವಜನಿಕರು ತಮ್ಮ ಸಮಸ್ಯೆಯನ್ನು ಜಿಪಿಆರ್‌ಎಸ್ ಪೋರ್ಟಲ್‌ನಲ್ಲಿ ನೇರವಾಗಿ ಅರ್ಜಿ ಮೂಲಕ ತಿಳಿಸಬಹುದು, ಇಲ್ಲದಿದ್ದಲ್ಲಿ ಮೊದಲನೇ ಹಾಗೂ ಮೂರನೇ ಶನಿವಾರದಂದು ತಾಲ್ಲೂಕು ಮಟ್ಟದಲ್ಲಿ ನಡೆಯಲಿರುವ ಮತ್ತು ಎರಡನೇ ಹಾಗೂ ನಾಲ್ಕನೇ ಶನಿವಾರದಂದು ಹೋಬಳಿ ಮಟ್ಟದಲ್ಲಿ ಶಾಸಕರ ನೇತೃತ್ವದಲ್ಲಿ ನಡೆಯಲಿರುವ ಪ್ರಜಾಸೇವೆ ಆಂದೋಲನಾ ಸಭೆಯಲ್ಲಿ ಕುಂದು ಕೊರತೆ ಅಹವಾಲುಗಳ ಅರ್ಜಿ ಸಲ್ಲಿಸಬಹುದು. ಈ ಅರ್ಜಿಗಳಿಗೆ ಹಿಂಬರಹ ನೀಡಲಾಗುತ್ತದೆ. ಅರ್ಜಿ ಪರಿಶೀಲನೆಯ ಹಂತವನ್ನು ಜನರು ಪರಿಶೀಲಿಸಬಹುದಾಗಿದೆ. ಇಲಾಖಾವಾರು ಸುಲಲಿತವಾಗಿ ಸಮಸ್ಯೆಗಳನ್ನು ಒಳಗೊಂಡ ಅರ್ಜಿಗಳ ಪರಿಶೀಲನೆ ನಡೆಸಿ ಬಗೆಹರಿಸಲಾಗುತ್ತದೆ. ಇದರ ಮೇಲ್ವಿಚಾರಣೆ ಹಾಗೂ ಜವಾಬ್ದಾರಿಯನ್ನು ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ನಡೆಸಲಿದ್ದಾರೆ. ತಾಲ್ಲೂಕು ಕಚೇರಿಗಳಲ್ಲಿ, ಸರ್ಕಾರದ ಕುರಿತು ಜನರ ಬಾಯಲ್ಲಿ ಒಳ್ಳೆ ಮಾತುಗಳು ಬಂದಾಗ ಮಾತ್ರ ಆ ಸರ್ಕಾರ ಉತ್ತಮ ಸರ್ಕಾರ ಎಂದಾಗುತ್ತದೆ ಎಂದು ಕರ್ನಾಟಕ ವಿಧಾನಸಭೆಯ ಮಾಜಿ ಅಧ್ಯಕ್ಷರಾದ ಕೃಷ್ಣ ಅವರು ಹೇಳುತ್ತಿದ್ದರು, ಅದರಂತೆ ಅರ್ಹ ಫಲಾನುಭವಿಗಳಿಗೆ, ಬಡವರಿಗೆ ಸರ್ಕಾರದ ಯೋಜನೆಗಳು, ಸೌಲಭ್ಯಗಳನ್ನು ತಲುಪಿಸುವ ಮೂಲಕ ಉತ್ತಮ ಸರ್ಕಾರವಾಗಿಸೋಣ ಎಂದರು.





### ಅಧಿಕಾರಿಗಳು ಮುಜುವರ್ಜಿವಹಿಸಿದರೆ, ಪರಿಹಾರ ಸಾಧ್ಯ

ಕಾರ್ಯಕ್ರಮದಲ್ಲಿ ಅಧ್ಯಕ್ಷತೆ ವಹಿಸಿದ್ದ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಶಾಸಕರಾದ ಸಿ.ಪಿ. ಯೋಗೇಶ್ವರ್ ಅವರು ಮಾತನಾಡಿ, ಪ್ರಜಾಸೇವಾ ಆಂದೋಲನಾ ಕಾರ್ಯಕ್ರಮ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮವಾಗಿದೆ, ಸಾರ್ವಜನಿಕರ ಸಮಸ್ಯೆಗಳನ್ನು ನೋಂದಾಯಿಸಿಕೊಂಡು ಅದಕ್ಕೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ರೂಪಿಸಲಾಗಿದೆ, ಎಲ್ಲಾ ಇಲಾಖೆ ಅಧಿಕಾರಿಗಳು ಪ್ರಾಮಾಣಿಕವಾಗಿ ಜನರ ಸಮಸ್ಯೆಗಳಿಗೆ ಸ್ಪಂದಿಸಿದರೆ ಬಹಳಷ್ಟು ಸಮಸ್ಯೆಗಳಿಗೆ ಪರಿಹಾರ ನೀಡಿದಂತಾಗುತ್ತದೆ ಎಂದರು. ಜನಸಾಮಾನ್ಯರು ದಿನನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಅಧಿಕಾರಿಗಳ ಮಟ್ಟದಲ್ಲಿ ಬಗೆಹರಿಸಬೇಕು. ಸರ್ಕಾರದ ಯೋಜನೆಗಳಿಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಜನಪ್ರತಿನಿಧಿಗಳು ಬಗೆಹರಿಸುತ್ತಾರೆ. ಅಧಿಕಾರಿಗಳು ಮುತುವರ್ಜಿ ವಹಿಸಿ ಕೆಲಸ ಮಾಡಿದರೆ ಸಮಸ್ಯೆಗಳು ಬಗೆಹರಿಯುತ್ತವೆ ಎಂದರು.

**ಗ್ಯಾರಂಟಿ ಬಗ್ಗೆಯೂ ಅಹವಾಲಿಗೆ ಅವಕಾಶ**

ಗ್ಯಾರಂಟಿ ಯೋಜನೆಯ ಸೌಲಭ್ಯಗಳ ವಿತರಣೆಯಲ್ಲೂ ಸಮಸ್ಯೆಗಳಲ್ಲಿದ್ದಲ್ಲೀ ಪ್ರಜಾ ಸೇವೆ ಆಂದೋಲನದಲ್ಲಿ ಅರ್ಜಿ ಸಲ್ಲಿಸಿ ಪರಿಹರಿಸಿಕೊಳ್ಳಬಹುದು ಎಂದರು. ಪ್ರಜಾ ಸೇವೆ ಆಂದೋಲನವು ನಿರಂತರವಾಗಿ ಸಮಸ್ಯೆ ಬಗೆಹರಿಸುವ ಕಾರ್ಯಕ್ರಮವಾಗಿದೆ. ಕಾನೂನು ಚೌಕಟ್ಟಿನಲ್ಲಿ ಸಮಸ್ಯೆ ಬಗೆಹರಿಸುವುದಾಗಿದೆ. ಸರ್ಕಾರದ ಬದ್ಧತೆಯೊಂದಿಗೆ ಪ್ರಾರಂಭಿಸಲಾಗಿರುವ ಈ ಕಾರ್ಯಕ್ರಮದ ಮೂಲಕ ಧ್ವನಿಯಿಲ್ಲದವರಿಗೆ ಧ್ವನಿ ಆಗಿಸುವ ಕೆಲಸ ಮಾಡೋಣ. ಸಾರ್ವಜನಿಕರು ಈ ಕಾರ್ಯಕ್ರಮದ ಸದುಪಯೋಗ ಪಡೆದುಕೊಳುವ ಮೂಲಕ ಪ್ರಜಾಸೇವೆಯನ್ನು ಯಶಸ್ವಿಗೊಳಿಸಬೇಕಂದರು. ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಕೆ. ರಾಜು, ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಉಪಾಧ್ಯಕ್ಷರಾದ ಗಂಗಾಧರ್, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ನಟರಾಜ್ ಗಾಣಕಲ್, ಚನ್ನಪಟ್ಟಣ ನಗರಸಭೆ ಅಧ್ಯಕ್ಷರಾದ ನಾಗೇಶ್, ಚನ್ನಪಟ್ಟಣ ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಪ್ರಮೋದ್, ಚನ್ನಪಟ್ಟಣ ತಾಲೂಕು ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿ ಉಪಾಧ್ಯಕ್ಷರು, ಬಮೂಲ್ ಅಧ್ಯಕ್ಷರಾದ ಲಿಂಗೇಶ್ ಕುಮಾರ್, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಕಾರ್ಯದರ್ಶಿಗಳಾದ ಜೆ. ಮಂಜುನಾಥ್, ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಅನ್ಮೋಲ್ ಜೈನ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರೋಹನ್ ಜಗದೀಶ್ ಸೇರಿದಂತೆ ಹಲವು ಮುಖಂಡರು ವೇದಿಕೆಯಲ್ಲಿದ್ದರು. ಅಪರ ಜಿಲ್ಲಾಧಿಕಾರಿ ಆರ್. ಚಂದ್ರಯ್ಯ ಸ್ವಾಗತಿಸಿದರು. ಜಿಲ್ಲಾ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ಸಿಬ್ಬಂದಿಗಳು ಉಪಸ್ಥಿತರಿದ್ದರು.

**ಕಾಟಾಚಾರದ ಕಾರ್ಯಕ್ರಮವಲ್ಲ**

**ಬಾಗಿಲಿಗೆ ಬಂತು ಸರ್ಕಾರ, ಸೇವೆಗೆ ಇರಲಿ ಸಹಕಾರ ಎಂಬ ಮನವಿಯೊಂದಿಗೆ ಪ್ರಜಾಸೇವೆ ಇಲಾಖೆಯ ಮೂಲಕ ಜನರ ಕಷ್ಟಗಳಿಗೆ ಸ್ಪಂದಿಸುವ ಈ ಕಾರ್ಯಕ್ರಮ ಕಾಟಾಚಾರದ ಕಾರ್ಯಕ್ರಮವಲ್ಲ. ಸರ್ಕಾರದ ಬದ್ಧತೆಯನ್ನು ಸಾರ್ವಜನಿಕರಿಗೆ ತಿಳಿಸುವ ಕಾರ್ಯಕ್ರಮವಾಗಿದೆ ಎಂದರು.**

### ಪ್ರಜಾಸೇವೆ ಯಶಸ್ಸಿಗೆ ಜನರ ಹೊಣೆಯೂ ಇದೆ

**ಸುಧಾಮ ದಾಸ್**

ವಿಧಾನ ಪರಿಷತ್ ಶಾಸಕರಾದ ಸುಧಾಮ್ ದಾಸ್ ಅವರು ಮಾತನಾಡಿ, ಪ್ರಜಾ ಸೇವಾ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವುದು ಅಧಿಕಾರಿಗಳ ಜವಾಬ್ದಾರಿ ಮಾತ್ರವಲ್ಲ ಸಾರ್ವಜನಿಕರ ಜವಾಬ್ದಾರಿಯೂ ಆಗಿದೆ. ಸಾರ್ವಜನಿಕರು ತಮ್ಮ ಸಮಸ್ಯೆಗಳಿಗೆ ಸಂಬಂಧಿಸಿದಂತೆ ಜವಾಬ್ದಾರಿಯಿಂದ ಅರ್ಜಿಗಳನ್ನು ಆಯ ಇಲಾಖೆಗೆ ಸಲ್ಲಿಸಬೇಕು. ಈ ರೀತಿಯ ಪ್ರಜಾ ಸೇವಾ ಕಾರ್ಯಕ್ರಮಗಳು ಹೆಚ್ಚಿನ ಸಂಖ್ಯೆಯ ಸಾರ್ವಜನಿಕರಿಗೆ ಉಪಯುಕ್ತವಾಗಲಿವೆ ಎಂದು ಹೇಳಿದರು.

### ಚನ್ನಪಟ್ಟಣಕ್ಕೆ ಸಿಎಂ ಬರ್ತಾರೆ

ಮುಂದಿನ ದಿನಗಳಲ್ಲಿ ರಾಜ್ಯದ ಮುಖ್ಯಮಂತ್ರಿಗಳು ಚನ್ನಪಟ್ಟಣದಲ್ಲಿ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡಲಿದ್ದಾರೆ, ಚನ್ನಪಟ್ಟಣ ನಗರಕ್ಕೆ ಯುಜಿಡಿ ಯೋಜನೆ ಮಂಜೂರಾಗಿದೆ. ಇದರ ಕಾಮಗಾರಿ ಆರಂಭವಾಗಬೇಕಾಗಿದೆ. ಚನ್ನಪಟ್ಟಣ ನಗರ ಜನತೆಗೆ ಕುಡಿಯುವ ನೀರಿನ ಸರಬರಾಜಿಗೆ ಸುಮಾರು 200 ಕೋಟಿ ರೂ.ಗಳ ವೆಚ್ಚದಲ್ಲಿ ಕಣ್ವ ಜಲಾಶಯದಿಂದ ಪೂರೈಸುವುದಾಗಿ ಅವರು ತಿಳಿಸಿದರು. ಚುನಾವಣೆ ಸಂದರ್ಭದಲ್ಲಿ ಸರ್ಕಾರ ಬಹಳಷ್ಟು ಭರವಸೆಗಳನ್ನು ನೀಡಿತ್ತು, ಅದರಂತೆ ಚನ್ನಪಟ್ಟಣ ಕ್ಷೇತ್ರಕ್ಕೆ ಪಾಲಿಟೆಕ್ನಿಕ್ ಕಾಲೇಜು, ತಾಲ್ಲೂಕು ಪಂಚಾಯತ್ ಕಚೇರಿ, ಕಂದಾಯ ಇಲಾಖೆ ಸೇರಿದಂತೆ ಬಹಳಷ್ಟು ಯೋಜನೆಗಳಿಗೆ ಸರ್ಕಾರದಿಂದ ಅನುದಾನ ಬಿಡುಗಡೆಗೊಳಿಸಲಾಗಿದೆ. ಷರತ್ತುಗಳಿಗೊಳಪಟ್ಟು ನಿವೇಶನಗಳ ಹಂಚಿಕೆಗೆ ಮಾಡಲು ಕ್ರಮ ವಹಿಸಲಾಗುವುದು ಎಂದು ಹೇಳಿದರು.

### ಅಹವಾಲುಗಳನ್ನು ಆಲಿಸಲು 26 ಕೌಂಟರ್

ಪ್ರಜಾಸೇವೆ ಆಂದೋಲನ ಸಭೆಯ ಅಂಗವಾಗಿ ಸಾರ್ವಜನಿಕರು, ರೈತರು ಸಲ್ಲಿಸಿದ ಅಹವಾಲುಗಳನ್ನು ವೇದಿಕೆಯಲ್ಲಿಯೇ ಸ್ವೀಕರಿಸಿದ ಸಚಿವ ಎಚ್.ಸಿ. ಬಾಲಕೃಷ್ಣ ಹಾಗೂ ಶಾಸಕ ಸಿ.ಪಿ. ಯೋಗೇಶ್ವರ್, ಸ್ಥಳದಲ್ಲಿಯೇ ಹಲವಾರು ಸಮಸ್ಯೆಗಳ ಪರಿಹಾರಕ್ಕೆ ಅಧಿಕಾರಿಗಳಿಗೆ ಸೂಚನೆ ನೀಡಿದರು. ಪ್ರಜಾಸೇವೆ ಆಂದೋಲನದಲ್ಲಿ ಕುಂದುಕೊರತೆ ಹಾಗೂ ಅಹವಾಲುಗಳನ್ನು ಆಲಿಸಲು 26 ಕೌಂಟರ್‌ಗಳನ್ನು ತೆರೆಯಲಾಗಿತ್ತು. ಅಲ್ಲಿ ಕಂಪ್ಯೂಟರ್, ಪ್ರಿಂಟರ್‌ಗಳು, ಅರ್ಜಿಗಳು ಸೇರಿದಂತೆ ವಿವಿಧ ಪರಿಕರಗಳನ್ನು ಒದಗಿಸಲಾಗಿತ್ತು. ಸಾಕಷ್ಟು ಸಂಖ್ಯೆಯಲ್ಲಿ ಸಾರ್ವಜನಿಕರು ತಮ್ಮ ಅಹವಾಲು ಹಾಗೂ ಕುಂದುಕೊರತೆಗಳನ್ನು ಸಲ್ಲಿಸಿದರು.

---

**ಡಿ. ದೇವರಾಜ ಅರಸು 111ನೇ ಜನ್ಮದಿನಾಚರಣೆ**

# ಅರಸು ಅವರ ಆಶಯಗಳೇ ಇಂದಿಗೂ ಪ್ರಸ್ತುತ: ಗಣೇಶ್ ಪ್ರಸಾದ್

ಗುಂಡ್ಲುಪೇಟೆ: ಸಾಮಾಜಿಕ ಕ್ರಾಂತಿಯ ಹರಿಕಾರ, ಹಿಂದುಳಿದ ವರ್ಗಗಳ ನೇತಾರ ಹಾಗೂ ಮಾಜಿ ಮುಖ್ಯಮಂತ್ರಿ ಡಿ. ದೇವರಾಜ ಅರಸು ಅವರ 111ನೇ ಜನ್ಮದಿನಾಚರಣೆಯನ್ನು ತಾಲೂಕು ಆಡಳಿತ, ರಾಷ್ಟ್ರೀಯ ಹಬ್ಬಗಳ ಆಚರಣಾ ಸಮಿತಿ ಹಾಗೂ ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವತಿಯಿಂದ ಪಟ್ಟಣದ ಡಿ. ದೇವರಾಜ್ ಅರಸು ಭವನದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಉಳುವವನೇ ಭೂಮಿಯ ಒಡೆಯ ಹಾಗೂ ಸಾಮಾಜಿಕ ಕ್ರಾಂತಿ

ಈ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶಾಸಕ ಎಚ್.ಎಂ. ಗಣೇಶ್ ಪ್ರಸಾದ್ ಅವರು, ಡಿ. ದೇವರಾಜ ಅರಸು ಅವರು ಜೀತ ಪದ್ಧತಿಯಂತಹ ಸಾಮಾಜಿಕ ಅನಿಷ್ಟಗಳನ್ನು ಕಂಡು, 'ಉಳುವವನೇ ಭೂಮಿಯ ಒಡೆಯ' ಎಂಬ ಕ್ರಾಂತಿಕಾರಿ ಆಶಯದೊಂದಿಗೆ ಭೂ ಸುಧಾರಣೆ ಕಾಯ್ದೆಯನ್ನು ಜಾರಿಗೆ ತಂದು ಬಡ ರೈತರಿಗೆ ಭೂಮಿ ದೊರಕುವಂತೆ ಮಾಡಿದರು. ಅಲ್ಲದೆ, ಹಿಂದುಳಿದ ವರ್ಗಗಳ ಜನರ ಶೈಕ್ಷಣಿಕ ಹಾಗೂ ಸಾಮಾಜಿಕ ಅಭಿವೃದ್ಧಿಗೂ ಅವರು ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

**ಅರಸು ಅವರ ನೇರ ನಡೆ-ನುಡಿ, ವೈಯಕ್ತಿಕ ಸ್ಮರಣೆ**

ಅರಸು ಅವರು ನೇರ ನಡೆ-ನುಡಿಯ ವ್ಯಕ್ತಿಯಾಗಿದ್ದರು. ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಅರಸು ಅವರ ಸಾಲಿನಲ್ಲಿ ಗುರುತಿಸಿಕೊಂಡ ನಾಯಕರು ಎಂದು ಶಾಸಕರು ಹೇಳಿದರು. ತಮ್ಮ ತಂದೆ ಕಾಲೇಜಿಗೆ ತೆರಳುತ್ತಿದ್ದ ಸಂದರ್ಭದಲ್ಲಿ ದೇವರಾಜ ಅರಸು ಅವರು ಮುಖ್ಯಮಂತ್ರಿಯಾಗಿದ್ದರು ಹಾಗೂ ಅವರು ತಮ್ಮ ತಂದೆಗೆ ಪ್ರೇರಣೆಯಾಗಿದ್ದರು. ಹೀಗಾಗಿ ತಮ್ಮ ಮನೆಯಲ್ಲಿಯೂ ಅರಸು ಅವರ ಭಾವಚಿತ್ರವಿದೆ ಎಂದು ಗಣೇಶ್ ಪ್ರಸಾದ್ ಅವರು ತಮ್ಮ ವೈಯಕ್ತಿಕ ನೆನಪುಗಳನ್ನು ಹಂಚಿಕೊಂಡರು.



**ಸ್ಥಳೀಯ ಭೂ ಸಮಸ್ಯೆ, ವಸತಿ ನಿಲಯಗಳ ಸೌಲಭ್ಯ**

ಗುಂಡ್ಲುಪೇಟೆ ತಾಲೂಕಿನಲ್ಲಿ ಇನ್ನೂ ಭೂಮಿ ಸಮಸ್ಯೆಗಳಿದ್ದು, ಅರ್ಹರಿಗೆ ಸಾಗುವಳಿ ಹಕ್ಕುಪತ್ರ ವಿತರಿಸುವ ಅಗತ್ಯವಿದೆ. ತಾಲೂಕಿನ ಅಭಿವೃದ್ಧಿಗೆ ನಾಗರತ್ನಮ್ಮ, ನಜೀರ್ ಸಾಬ್ ಹಾಗೂ ದಿವಂಗತ ಮಹದೇವಪ್ರಸಾದ್ ಅವರು ಮಹತ್ವದ ಕೊಡುಗೆ ನೀಡಿದ್ದಾರೆ ಎಂದರು. ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ನಿಲಯಗಳ ಮೂಲಕ ಶಿಕ್ಷಣಕ್ಕೆ ಅನುಕೂಲ ಕಲ್ಪಿಸಲಾಗಿದ್ದು, ತಾವು ಶಾಸಕರಾದ ನಂತರ ಸುಮಾರು 300 ವಿದ್ಯಾರ್ಥಿಗಳಿಗೆ ಬಿಸಿಎಂ ವಸತಿ ನಿಲಯಗಳಲ್ಲಿ ಪ್ರವೇಶ ಕಲ್ಪಿಸಲು ನೆರವಾಗಿರುವುದಾಗಿ ಅವರು ಮಾಹಿತಿ ನೀಡಿದರು.

**ಕರ್ನಾಟಕ ನಾಮಕರಣ, ಅರಸು ಅವರ ದೂರದೃಷ್ಟಿ**

ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಭಾಗವಹಿಸಿದ್ದ ಪೃಥ್ವಿರಾಜ್ ಅವರು ಮಾತನಾಡಿ, 1973ರಲ್ಲಿ ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ಕೀರ್ತಿ ಡಿ. ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ಭೂ ಸುಧಾರಣೆ ಕಾಯ್ದೆ ಜಾರಿಗೆ ತಂದು 'ಉಳುವವನೇ ನೆಲದ ಒಡೆಯ' ಎಂಬ ಪರಿಕಲ್ಪನೆಯನ್ನು ಸಾಕಾರಗೊಳಿಸಿದವರು ಅರಸು ಎಂದು ಹೇಳಿದರು. ಬಡವರು ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಶಿಕ್ಷಣಕ್ಕೆ ಬಿಸಿಎಂ ವಸತಿ ನಿಲಯಗಳು ಅತ್ಯಂತ ಮಹತ್ವದ ಪಾತ್ರ ವಹಿಸುತ್ತಿವೆ. ಅರಸು ಅವರ ದೂರದೃಷ್ಟಿಯ ಫಲವಾಗಿ ಇಂತಹ ಕಲ್ಯಾಣ ಕಾರ್ಯಕ್ರಮಗಳು ಜಾರಿಗೆ ಬಂದಿವೆ ಎಂದು ಅವರು ವಿವರಿಸಿದರು.

ಈ ಕಾರ್ಯಕ್ರಮದಲ್ಲಿ ಎಪಿಎಂಸಿ ಅಧ್ಯಕ್ಷ ವಿರೂಪಾಕ್ಷ, ಹಾಪ್ಕಾಮ್ಸ್ ಅಧ್ಯಕ್ಷ ನಾಗೇಶ್, ತಹಶೀಲ್ದಾರ್ ತನ್ಮಯ್, ಎಂ.ಎಸ್., ತಾಲೂಕು ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿ ಲೀಲಾ ಕೆ., ನಿಲಯ ಮೇಲ್ವಿಚಾರಕರಾದ ರಂಗಸ್ವಾಮಿ, ಲೋಕೇಶ್ ಗೋಪಾಲಪುರ, ಕನ್ನಡಪರ ಹೋರಾಟಗಾರರಾದ ಈಶ್ವರ್, ಬ್ರಹ್ಮಾನಂದ್, ಮಾನವ ಬಂಧುತ್ವ ವೇದಿಕೆ ಜಿಲ್ಲಾ ಸಂಚಾಲಕ ಸುಭಾಷ್ ಮಾಡ್ರಹಳ್ಳಿ, ಈಶ್ವರ್, ಅನ್ಸರ್, ದೇವರಾಜ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

---

**ಮೊದಲ ಪುಟದಿಂದ**

### ಜನರ ಬಳಿಗೆ ಅಧಿಕಾರಿಗಳು

ಸಂಪೂರ್ಣ ಪರಿಹಾರ ಸಿಗುವವರೆಗೂ ಸರ್ಕಾರ ಅವರ ಬೆನ್ನಿಗೆ ನಿಲ್ಲಲಿದೆ ಎಂದು ಮುಖ್ಯಮಂತ್ರಿ ಭರವಸೆ ನೀಡಿದರು.

### ಸರ್ಕಾರಿ ಆಡಳಿತವೇ ಜನರ ಬಳಿಗೆ

ಪಕ್ಷಗಳಿಗೆ ಅದನ್ನು ಕಾರ್ಯರೂಪಕ್ಕೆ ತಂದು ತೋರಿಸಿದ್ದೇವೆ. ಪ್ರಜಾ ಸೇವಾ ಯೋಜನೆಯೂ ಇಡೀ ದೇಶಕ್ಕೆ ಮಾದರಿಯಾಗಲಿದೆ ಎಂದರು. ಹಳ್ಳಿಗಳಲ್ಲಿ ಸಾಂಸ್ಕೃತಿಕ, ಕ್ರೀಡಾ ಹಾಗೂ ನಾಯಕತ್ವದ ಪ್ರತಿಭೆಗಳನ್ನು ಹೊರತರುವ ಮತ್ತು ಪ್ರಜಾಪ್ರಭುತ್ವದ ಆಶಯಗಳನ್ನು ಬಲಪಡಿಸುವ ಉದ್ದೇಶದಿಂದ 'ಭಾರತ್ ಜೋಡೋ ಯುವಕ ಸಂಘ'ಗಳನ್ನು ಪ್ರಾರಂಭಿಸಲಾಗುವುದು. ಪ್ರತಿ ಪಂಚಾಯಿತಿಯಲ್ಲೂ ಗ್ಯಾರಂಟಿ ಯೋಜನೆಗಳ ಸಮಿತಿಗಳನ್ನು ರಚಿಸಿ, ಪ್ರತಿಯೊಬ್ಬರಿಗೂ ನ್ಯಾಯ ಒದಗಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ಸಿಎಂ ತಿಳಿಸಿದರು.

### ವಿವಿಯಲ್ಲೂ 'ಕನ್ನಾಳೆ ಕರಾಮತ್ತು'

ಕನ್ನಾಳೆ 2025 ಆಗಸ್ಟ್‌ನಲ್ಲಿ ನೇಮಕವಾಗಿದ್ದ. ಖರೀದಿ ಮತ್ತು ಕಾಮಗಾರಿ ನಿರ್ಧಾರದ ಉಪ ಸಮಿತಿಯಲ್ಲಿ ಸದಸ್ಯನಾಗಿದ್ದ. ಜೊತೆಗೆ ವಾರ್ಷಿಕ ಬಜೆಟ್ ಜಾರಿಯಲ್ಲಿಯೂ ಪ್ರಭಾವ ಬಳಸಿಕೊಂಡು ದುರ್ಬಳಕೆ ಮಾಡಿಕೊಂಡಿರುವ ಶಂಕೆಯಿದೆ. ಈ ನಿಟ್ಟಿನಲ್ಲಿ ಸಿಐಡಿ ತನಿಖೆ ನಡೆಸಲಾಗುತ್ತಿದೆ.

### ಬಿಪಿ, ಶುಗರ್ ಕಡಿಮೆ ಆಗುತ್ತೆ!

ಮಾತನಾಡಿದ ಅವರು, ಮುಖ್ಯಮಂತ್ರಿಗಳೇ ತಮ್ಮ ಸ್ಥಾನ ಬಿಟ್ಟು ಕೊಟ್ಟ ಮೇಲೆ, ನಿಗಮ ಮಂಡಳಿ ಅಧ್ಯಕ್ಷರೂ ಬಿಟ್ಟುಕೊಡಬೇಕು. ಹೀಗಂತ ಮೊದಲೇ ಮಾತಾಗಿತ್ತು. ಕೆಲವೇ ದಿನದಲ್ಲಿ ನಿಗಮ ಮಂಡಳಿಗೂ ನೇಮಕ ಆಗಲಿದೆ ಎಂದರು.

### ಕುಲಪತಿ ಹುದ್ದೆಗೆ 'ವ್ಯವಹಾರ'

ವಿವಿ ವಿಶ್ರಾಂತ ಕುಲಪತಿಯೊಬ್ಬರಿಂದ ಬರಡವಾಳ ಕೂಡ ಹೂಡಿಸಿರುವ ವದಂತಿಯಿದೆ. ಈ ಬಗ್ಗೆಯೂ ಸಿಐಡಿ, ಸಿಬಿಐ ತನಿಖೆಗೆ ಮುಂದಾಗಿದೆ.

### ಸಿಎಂ ಸ್ಥಾನಕ್ಕೆ ರಾಜೀನಾಮೆ

ಕೊಟ್ಟ ಮಾತು ಉಳಿಸಿಕೊಂಡ ಯಾವುದಾದರೂ ಸರ್ಕಾರ ಇದ್ದರೆ ಅದು ಸಿದ್ದರಾಮಯ್ಯ ಸರ್ಕಾರ ಎಂದು ಹೇಳಿದರು.

### ದೋಣಿ ವಿಹಾರ ಸ್ಥಗಿತ

ಬೋಟಿಂಗ್ ಸ್ಥಗಿತಗೊಂಡ ಪರಿಣಾಮ ಪಕ್ಷಿಧಾಮಕ್ಕೆ ಬರುವ ಪ್ರವಾಸಿಗರ ಸಂಖ್ಯೆಯಲ್ಲಿ ಗಣನೀಯ ಇಳಿಕೆಯಾಗಿದೆ. ಸದಾ ಗಿಜಿಗುಡುತ್ತಿದ್ದ ಪ್ರವಾಸಿ ತಾಣ ಇದೀಗ ಜನರಿಲ್ಲದೆ ಬಿಕೋ ಎನ್ನುತ್ತಿದೆ. ದೋಣಿ ವಿಹಾರದ ಆಸೆಯಿಂದ ದೂರದ ಊರುಗಳಿಂದ ಆಗಮಿಸಿದ ಪಕ್ಷಿಪ್ರೇಮಿಗಳು ತೀವ್ರ ನಿರಾಸೆಯಿಂದ ಹಿಂತಿರುಗುತ್ತಿದ್ದಾರೆ. ಒಂದೆಡೆ ತೀವ್ರ ಬರಗಾಲದ ನಡುವೆಯೂ ನೆರೆ ರಾಜ್ಯಕ್ಕೆ ನೀರು ಹರಿಸುತ್ತಿರುವುದಕ್ಕೆ ಕಾವೇರಿ ಕಣಿವೆಯ ರೈತರು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.

## ಸಿದ್ದರಾಮಯ್ಯರಿಂದ ಮಂಚೂಣಿ ನಾಯಕರ ಬಲಿ



**ಮೈಸೂರು:** ತಮ್ಮ ಹಾಗೂ ತಮ್ಮ ಪುತ್ರನ ಸ್ವಾರ್ಥಕ್ಕಾಗಿ ಸಿದ್ದರಾಮಯ್ಯ ಅಹಿಂದದ ಎಲ್ಲಾ ಮುಂಚೂಣಿ ನಾಯಕರನ್ನು ಬಲಿ ತೆಗೆದುಕೊಂಡರು. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ದಲಿತರು ಅವರನ್ನು ಸೋಲಿಸಲಿದ್ದಾರೆ ಎಂದು ರಾಜ್ಯ ದಲಿತ ಸಂಘರ್ಷ ಸಮಿತಿ ರಾಜ್ಯ ಸಂಘಟನಾ ಸಂಚಾಲಕ ದೇವಗಳ್ಳಿ ಸೋಮಶೇಖರ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಸಿದ್ದರಾಮಯ್ಯ ಎಂದರೆ ಸಮಾಜವಾದಿ ನಾಯಕ, ತತ್ವ ಸಿದ್ಧಾಂತ, ಬಡವರ ಪರ, ಶೋಷಿತರ ಪರ ಗಟ್ಟಿ ಧ್ವನಿ, ಅದಕ್ಕಾಗಿ ನಾವೆಲ್ಲರೂ ಟೊಂಕ ಕಟ್ಟಿ ನಿಂತು ಅವರನ್ನು ಗೆಲ್ಲಿಸಬೇಕೆಂದು ಶ್ರಮಿಸಿದ ಪ್ರಗತಿಪರರಿಗೆ, ದಲಿತ ಚಳವಳಿಗೆ ಸಿದ್ದರಾಮಯ್ಯ ಭ್ರಮ ನಿರಸನವುಂಟು ಮಾಡಿದ್ದಾರೆ. ಈ ಹಿಂದೆ ಜನತಾ ದಳದಿಂದ ದೇವೇಗೌಡರು ಉಚ್ಚಾಟನೆ ಮಾಡಿದಾಗ ನಾಡಿನ ಇಡೀ ಚಳವಳಿಗಳು, ಪ್ರಗತಿಪರರು, ಚಿಂತಕರು, ಬುದ್ಧಿಜೀವಿಗಳು, ಶೋಷಿತರು ಅವರ ಪರ ನಿಂತರು. ಆದರೆ ನಂತರದ ದಿನಗಳಲ್ಲಿ ದಲಿತ ಸಮುದಾಯದ ಪರಮೋಚ್ಚ ನಾಯಕರಾಗಿದ್ದ ಮಲ್ಲಿಕಾರ್ಜುನ ಖರ್ಗೆ ಅವರಿಂದ ವಿರೋಧ ಪಕ್ಷದ ನಾಯಕ ಸ್ಥಾನ ಕಿತ್ತುಕೊಂಡು ದೆಹಲಿ ರಾಜಕಾರಣಕ್ಕೆ ಕಳುಹಿಸಿದರೆಂದು ಆರೋಪಿಸಿದರು. ಇದಲ್ಲದೆ, ಸಿಎಂ ಇಬ್ರಾಹಿಂ, ಎಚ್.ಸಿ. ಮಹದೇವಪ್ಪ, ಸತೀಶ್ ಜಾರಕಿಹೊಳಿ ಅವರಿಗೂ ಸಿದ್ದರಾಮಯ್ಯ ಅನ್ಯಾಯ ಮಾಡಿದ್ದಾರೆ. ಹೈಕಮಾಂಡನ್ನು ಬ್ಲಾಕ್‌ಮೇಲ್ ಮಾಡುತ್ತಲೇ ಎಲ್ಲ ರೀತಿಯ ಅಧಿಕಾರ ಅನುಭವಿಸಿದ್ದು, ತಮ್ಮ ಮಗನಿಗಾಗಿ ಎಲ್ಲಾ ತತ್ವ ಸಿದ್ಧಾಂತ, ಸ್ನೇಹ, ನಂಬಿಕೆಗಳಿಗೆ ತಿಲಾಂಜಲಿಯಿಟ್ಟಿದ್ದಾರೆ. ಹೀಗಾಗಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ, ಅಲ್ಪಸಂಖ್ಯಾತರು, ಶೋಷಿತರು, ಅಹಿಂದ ವರ್ಗವನ್ನು ತಮ್ಮ ಸ್ವಾರ್ಥ ಸಾಧನೆಗಾಗಿ ಬಳಸಿಕೊಂಡ ಅವರ ಬಗ್ಗೆ ಎಚ್ಚರಿಕೆಯ ಹೆಜ್ಜೆ ಇಡಬೇಕಾಗಿದೆ. ಹೀಗಾಗಿ ಮುಂಬರುವ ಚುನಾವಣೆಯಲ್ಲಿ ತಕ್ಕ ಪಾಠ ಕಲಿಸಲಾಗುವುದೆಂದರು. ಇನ್ನಿತರ ಪದಾಧಿಕಾರಿಗಳಾದ ಶ್ರೀಕಂಠಸ್ವಾಮಿ, ಎಸ್.ಡಿ. ಸಣ್ಣಸ್ವಾಮಿ, ಶಿವಕುಮಾರ್, ಪುಟ್ಟಮಾದಯ್ಯ, ಪ್ರಸನ್ನ ತಳೂರು, ಬೊಕ್ಕಳ್ಳಿ ಲಿಂಗಯ್ಯ, ಆಲಗೂಡು ಶಿವಣ್ಣ ಮೊದಲಾದವರಿದ್ದರು.

ವರ್ತಮಾನ
ಜಾಹಿರಾತಿಗೆ ಉತ್ತಮ ಮಾಧ್ಯಮ

## 'ಸಮಾಜ ಸುರಕ್ಷಾ ಸೇವೆ' ಉತ್ತಮವಾಗಲಿ

### ಸಂವಾದ ಕಾರ್ಯಕ್ರಮದಲ್ಲಿ ಸದ್ಗುರು ಶ್ರೀ ಮಧುಸೂದನ ಸಾಯಿ ಆಶಯ






ಮೈಸೂರು: ವೃದ್ಧಾಪ್ಯ ಮತ್ತು ಮಾರಣಾಂತಿಕ ಕಾಯಿಲೆಗಳಿಂದ ಬಳಲುತ್ತಿರುವವರಿಗೆ ವಿದೇಶದ ಮಾದರಿ ಭಾರತದಲ್ಲೂ ಸಮಾಜ ಸುರಕ್ಷಾ ಸೇವೆಗಳು ಇನ್ನಷ್ಟು ಉತ್ತಮಗೊಳ್ಳಬೇಕಾಗಿದೆ ಎಂದು ಒನ್ ವರ್ಲ್ಡ್ ಒನ್ ಫ್ಯಾಮಿಲಿ ಮಿಷನ್ ಸಂಸ್ಥಾಪಕ ಸದ್ಗುರು ಶ್ರೀ ಮಧುಸೂದನ ಸಾಯಿ ವಿಷಾದಿಸಿದರು.

ನಗರದಲ್ಲಿ ಶನಿವಾರ ನಡೆದ ದಿವ್ಯ ಸಂಜೆ ಸಂವಾದ ಕಾರ್ಯಕ್ರಮದಲ್ಲಿ ಖ್ಯಾತ ಗಾಯಕ ವಿಜಯ್ ಪ್ರಕಾಶ್ ಮತ್ತು ಸಭಿಕರ ಪ್ರಶ್ನೆಗಳಿಗೆ ಉತ್ತರಿಸಿದ ಸದ್ಗುರು, ಒಂದು ಕುಟುಂಬದಲ್ಲಿ ಕೆಲಸ ಮಾಡುವ ಏಕೈಕ ವ್ಯಕ್ತಿಗೆ ಮಾರಣಾಂತಿಕ ಕಾಯಿಲೆ ಬಂದಾಗ ಇಡೀ ಕುಟುಂಬದ ವ್ಯವಸ್ಥೆ ಕುಸಿದು ಬೀಳುತ್ತದೆ. ತಾಯಿಯೊಬ್ಬಳು ಏನೂ ಮಾಡಲು ಸಾಧ್ಯವಾಗದ ಅಸಹಾಯಕ ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇಂಥ ಸಂದರ್ಭದಲ್ಲಿ ಸಮಾಜವಾಗಿ ಎಲ್ಲರೂ ಅಂಥ ಕುಟುಂಬಗಳಿಗೆ ಆಸರೆಯಾಗಬೇಕು ಎಂದು ಕರೆ ನೀಡಿದರು.

ನಮ್ಮ ದೇಶದಲ್ಲಿ ಇಂಥವರಿಗೆ ಹಣಕಾಸು ಭದ್ರತೆ ಒದಗಿಸುವ ಯೋಜನೆಗಳೇ ಇಲ್ಲ. ಅಮೆರಿಕದಲ್ಲಿ ವೃದ್ಧಾಪ್ಯ ಮತ್ತು ಮಾರಣಾಂತಿಕ ಕಾಯಿಲೆಗಳಿಂದ ಬಳಸುವವರ ಚಿಕಿತ್ಸೆಗಾಗಿ ತಿಂಗಳಿಗೆ ಐದು ಸಾವಿರ ಡಾಲರ್ ಸಹಾಯಧನ ಕೊಡುವ ಯೋಜನೆಯಿದೆ. ಜಪಾನ್ ಮತ್ತು ಯೂರೋಪ್ನ ಹಲವು ದೇಶಗಳಲ್ಲಿ ಇಂಥದ್ದೇ ಯೋಜನೆಗಳಿವೆ. ನಮ್ಮ ಸರ್ಕಾರಗಳೂ ಈ ಕುರಿತು ಯೋಚಿಸಬೇಕಾದ ಸಂದರ್ಭ ಎದುರಾಗಿದೆ ಎಂದು ವಿಶ್ಲೇಷಿಸಿದರು.

ಜೆನ್ಜಿ ತಲೆಮಾರಿನ ಕುರಿತು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸದ್ಗುರು, 'ಈಗಿನ ತಲೆಮಾರು ವಿಕಸನವಾಗುತ್ತಿದೆ. ಪ್ರಶ್ನೆ ಕೇಳುವವರು ಮಾತ್ರವೇ ಉತ್ತಮ ವಿದ್ಯಾರ್ಥಿಗಳಾಗಲು ಸಾಧ್ಯ. ಸಮಸ್ಯೆ ಇರುವುದು ಹಿರಿಯರಲ್ಲಿ. ಈಗ ಹಿರಿಯರು ತಮ್ಮ ಜ್ಞಾನ ಹೆಚ್ಚಿಸಿಕೊಂಡು ಮಕ್ಕಳಿಗೆ ಉತ್ತರ ಹೇಳಬೇಕು' ಎಂದು ಸಲಹೆ ಮಾಡಿದರು.

### ಶ್ರೀ ಸತ್ಯಸಾಯಿ ಅನಂತನಿಕೇತನಂ

ಮೈಸೂರು ನಗರದಲ್ಲಿ 2019 ರಿಂದ ಕಾರ್ಯನಿರ್ವಹಿಸುತ್ತಿರುವ 'ಶ್ರೀ ಸತ್ಯಸಾಯಿ ಅನಂತನಿಕೇತನಂ ಗುರುಕುಲ ವಿದ್ಯಾರ್ಥಿಗಳ ಸರ್ವತೋಮುಖ ವಿಕಸನಕ್ಕೆ ನೀರೆರೆಯುವ ಅದರ್ಶ ತಾಣ. ಈ ವಸತಿಸಹಿತ ವಿದ್ಯಾಸಂಸ್ಥೆಯು ಮಕ್ಕಳನ್ನು ಸಮಾಜಮುಖಿ ವ್ಯಕ್ತಿಗಳನ್ನಾಗಿ ರೂಪಿಸುತ್ತಿದೆ. ಈವರೆಗೆ 300 ಕ್ಕೂ ಹೆಚ್ಚು ಮಕ್ಕಳು ಇಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ 40 ಮಕ್ಕಳು ದಾಖಲಾಗಿದ್ದಾರೆ. ಈ ಪೈಕಿ ಶೇ 62 ರಷ್ಟು ಮಕ್ಕಳು ಗ್ರಾಮೀಣ ಹಿನ್ನೆಲೆಯವರು, ಶೇ 86 ರಷ್ಟು ಮಕ್ಕಳು ಬಿಪಿಎಲ್ ಕುಟುಂಬಗಳ ಹಿನ್ನೆಲೆಯಿಂದ ಬಂದವರು ಮತ್ತು ಶೇ 70 ರಷ್ಟು ಮಕ್ಕಳು ಅವರ ಕುಟುಂಬದ ಮೊದಲ ಕಲಿಕಾರ್ಥಿಗಳು ಎನ್ನುವುದು ವಿಶೇಷ. ಇದರ ಜೊತೆಗೆ ಮೈಸೂರು ಜಿಲ್ಲೆಯ 2,400 ಸರ್ಕಾರಿ ಶಾಲೆ 2 ಲಕ್ಷ ವಿದ್ಯಾರ್ಥಿಗಳಿಗೆ ಪ್ರತಿದಿನ ಮುಂಜಾನೆ ಸಾಯಿಶ್ಯೂರ್ ಪೌಷ್ಟಿಕ ಆಹಾರ ತಲುಪುತ್ತಿದೆ.

ನೇಪಾಳ ದುರಂತದ ಕುರಿತು ಪ್ರಸ್ತಾಪಿಸಿದ ಸದ್ಗುರು, ಪರಿಸರವು ನಮ್ಮನ್ನು ಅಂದರೆ ಮನುಷ್ಯರನ್ನು ಪ್ರತಿಫಲಿಸುತ್ತದೆ. ನಮ್ಮ ಭೂಮಿಯೂ ಸಹ ನಿರಂತರವಾಗಿ ವಿಕಸನವಾಗುತ್ತಿದೆ.

ಭೂಮಿಯೊಳಗೂ ಏನೇನೋ ನಡೆಯುತ್ತಲೇ ಇರುತ್ತದೆ. ಅದೂ ಸಹ ಇಂಥ ದುರಂತಗಳಿಗೆ ಕಾರಣವಾಗಬಹುದು. ಆದರೆ ಸಂಪನ್ಮೂಲಗಳ ವಿಪರೀತ ಬಳಕೆ. ಮರಗಳನ್ನು ಕಡಿಯುವುದು, ಎಲ್ಲವನ್ನೂ ರಾಸಾಯನಿಕಗೊಳಿಸುವುದು ಹಲವು ಅನರ್ಥಗಳಿಗೆ ಕಾರಣವಾಗುತ್ತವೆ. ಮನುಷ್ಯನ ಕ್ರಿಯೆಗೆ ಪರಿಸರ ತನ್ನದೇ ಆದ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ ಎನ್ನುವುದನ್ನು ಎಲ್ಲರೂ ಅರ್ಥ ಮಾಡಿಕೊಳ್ಳಬೇಕು ಎಂದು ನುಡಿದರು.

# ಆರೋಗ್ಯ ಶಿಬಿರ ಸಹಕಾರಿ

## ಕೆ.ಶೇಷಾದ್ರಿ ಹೇಳಿಕೆ । ಉಚಿತ ಆರೋಗ್ಯ ತಪಾಸಣೆ




ರಾಮನಗರ: ಜನರ ಆರೋಗ್ಯ ಜಾಗೃತಿಗೆ ಉಚಿತ ಶಿಬಿರಗಳು ಪ್ರಯೋಜನಕಾರಿಯಾಗಿದೆ ಎಂದು ನಗರಸಭಾಧ್ಯಕ್ಷ ಕೆ.ಶೇಷಾದ್ರಿ (ಶಶಿ) ಹೇಳಿದರು.

ನಗರದ ಎ.ಬಿ. ಸ್ಟಾರ್ ರೋಷನ್ ಹೆಲ್ತ್ ಕೇರ್ ಆಸ್ಪತ್ರೆಯ ವೈದ್ಯ ಡಾ. ರೋಷನ್ ಬೇಗ್ ಅವರ ಹುಟ್ಟುಹಬ್ಬದ ಪ್ರಯುಕ್ತ ರೆಹಮಾನಿಯನಗರದಲ್ಲಿ ಬೃಹತ್ ಆರೋಗ್ಯ ತಪಾಸಣಾ ಶಿಬಿರ, ಉಚಿತ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬದಲಾಗುತ್ತಿರುವ ಜೀವನಶೈಲಿ, ಆಹಾರ ಪದ್ಧತಿ ಹಾಗೂ ಒತ್ತಡದಿಂದಾಗಿ ಜನರಲ್ಲಿ ಆರೋಗ್ಯ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚುತ್ತಿವೆ. ಇದರ ನಿವಾರಣೆಗೆ ಉಚಿತ ಆರೋಗ್ಯ ಶಿಬಿರಗಳು ಸಹಕಾರಿಯಾಗಿದ್ದು ಜನರು ನಿಯಮಿತವಾಗಿ ಆರೋಗ್ಯ ತಪಾಸಣೆ ಮಾಡಿಸಿಕೊಳ್ಳಬೇಕು ಎಂದು ಅವರು ಕರೆ ನೀಡಿದರು.

ಜಾತಿ, ಮತ, ದರ್ಮ ಎಂಬ ತಾರತಮ್ಯ ಮಾಡದೇ ಸರ್ವರಿಗೂ ಆರೋಗ್ಯ ಸೇವೆ ನೀಡುವ ವೈದ್ಯಕೀಯ ವೃತ್ತಿ ಅತ್ಯಂತ ಪವಿತ್ರವಾದದ್ದು. ವೈದ್ಯ ಡಾ.ರೋಷನ್ ಬೇಗ್ ಅವರು ವೈದ್ಯರಾಗಿ ಅಷ್ಟೇ ಅಲ್ಲ ಹಲವು ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಂಡು ಈ ಭಾಗದಲ್ಲಿ ಖ್ಯಾತಿ ಗಳಿಸಿದ್ದಾರೆ. ಅವರು ತಮ್ಮ ಜನ್ಮದಿವನ್ನು ಉಚಿತ ಆರೋಗ್ಯ ಶಿಬಿರ ಏರ್ಪಡಿಸಿ ಬಡವರಿಗೆ ನೆರವಾಗುವ ಮೂಲಕ ಅರ್ಥಪೂರ್ಣವಾಗಿ ಆಚರಿಸಿಕೊಳ್ಳುತ್ತಿರುವುದು ಶ್ಲಾಘನೀಯ ಕಾರ್ಯ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಶಿಬಿರದಲ್ಲಿ ನಗರಸಭೆ ಸದಸ್ಯ ಸಮದ್, ಮುಖಂಡರಾದ ಮಹಮದ್ ಅಪ್ಸರ್ ಬೇಗ್, ವೈದ್ಯರಾದ ಡಾ.ಸಬನಾ, ಡಾ.ಫಾತೀಮಾ, ಡಾ. ಅಪ್ರೀನಾ, ಸಿಬ್ಬಂದಿಗಳಾದ ಸಾಧಿಯಾ, ಸಿಮ್ರಾಜ್ ಫರಹನಾ, ಫೈಯಾಜ್, ದೀಕ್ಷಿತ್, ಪ್ರಭಾಕರ್, ಎನ್.ಸಿ. ಪುಟ್ಟರಾಜು, ಮದನ್, ಬೆಳ್ಳಿ ರಕ್ತನಿಧಿಯ ರಂಜಿತ್ ಎಂ.ಟಿ. ರಘು ಸೇರಿದಂತೆ ಹಲವರು ಪಾಲ್ಗೊಂಡಿದ್ದರು.

### ಆರೋಗ್ಯದ ವಿಚಾರದಲ್ಲಿ ನಿರ್ಲಕ್ಷ ಸಲ್ಲದು

ವೈದ್ಯ ರೋಷನ್ ಬೇಗ್ ಮಾತನಾಡಿ,ಜನರ ಆರೋಗ್ಯ ಕಾಪಾಡುವ ಹಿತದೃಷ್ಟಿಯಿಂದ ಈ ಆರೋಗ್ಯ ಶಿಬಿರ ಏರ್ಪಡಿಸಲಾಗಿದೆ. ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಂಡು ಜೀವನ ಶೈಲಿಯನ್ನು ಸಾಧ್ಯವಾದಷ್ಟು ಬದಲಾವಣೆ ಮಾಡಿಕೊಳ್ಳುವುದು ಉತ್ತಮ. ಆರೋಗ್ಯ ವಿಷಯದಲ್ಲಿ ನಿರ್ಲಕ್ಷ್ಯ ಮಾಡದೇ ಇಂತಹ ಉಚಿತ ಆರೋಗ್ಯ ಶಿಬಿರದ ಪ್ರಯೋಜನವನ್ನು ಸಾರ್ವಜನಿಕರು ಪಡೆದುಕೊಳ್ಳಬೇಕು ಎಂದರು.
ಡಾ.ರೋಷನ್ ಬೇಗ್ ನೇತೃತ್ವದಲ್ಲಿ ತಜ್ಞ ವೈದ್ಯರ ತಂಡ ತಪಾಸಣೆ ನಡೆಸಿ, ಅಗತ್ಯವಿರುವ ರೋಗಿಗಳಿಗೆ ಉಚಿತ ಔಷಧಿ ವಿತರಿಸಲಾಯಿತು. ಬೆಳ್ಳಿ ರಕ್ತನಿಧಿ ಕೇಂದ್ರದ ವತಿಯಿಂದ ರಕ್ತದಾನ ಶಿಬಿರ ಮತ್ತು ಐ ದೃಷ್ಟಿ ಕಣ್ಣಿನ ಆಸ್ಪತ್ರೆಯ ವೈದ್ಯರಿಂದ ನೇತ್ರ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿತ್ತು.
ಈ ಸಂದರ್ಭದಲ್ಲಿ 250ಕ್ಕೂ ಹೆಚ್ಚು ಜನರಿಗೆ ಬಿಪಿ, ಮಧುಮೇಹ, ರಕ್ತ ಪರೀಕ್ಷೆ, ಕಣ್ಣಿನ ತಪಾಸಣೆ, ಹೃದಯ ಸಂಬಂಧಿ ಚಿಕಿತ್ಸೆ, ಇಸಿಜಿ ಪರೀಕ್ಷೆ ಮಾಡಿ ಸ್ಥಳದಲ್ಲಿಯೇ ಔಷಧ ನೀಡಲಾಯಿತು. ಸುಮಾರು ಮೂವತ್ತಕ್ಕೂ ಹೆಚ್ಚು ಜನರು ರಕ್ತದಾನ ಮಾಡಿದರು.

# 500 ಮಂದಿಗೆ ಸ್ಥಳದಲ್ಲೇ ಉದ್ಯೋಗ

## ಬೃಹತ್ ಉದ್ಯೋಗ ಮೇಳದಲ್ಲಿ 4500 ಮಂದಿ ನೋಂದಣಿ



ಮೈಸೂರು: ಕುವೆಂಪುನಗರದ ಜನಸ್ಪಂದನ ಟ್ರಸ್ಟ್ ವತಿಯಿಂದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಆಯೋಜಿಸಲಾಗಿದ್ದ ಬೃಹತ್ ಉದ್ಯೋಗ ಮೇಳವು ಅತ್ಯಂತ ಯಶಸ್ವಿಯಾಗಿ ಸಂಪನ್ನಗೊಂಡಿತು. ಈ ಉದ್ಯೋಗ ಮೇಳದಲ್ಲಿ ಒಟ್ಟು 4500 ಮಂದಿ ಉದ್ಯೋಗಾಕಾಂಕ್ಷಿಗಳು ನೋಂದಣಿಯಾಗಿದ್ದು, ಈ ಪೈಕಿ 2500 ಮಂದಿ ವಿವಿಧ ಕಂಪನಿಗಳಿಗೆ ಆಯ್ಕೆಗೊಂಡಿದ್ದಾರೆ. ವಿಶೇಷವೆಂದರೆ, 500ಕ್ಕೂ ಹೆಚ್ಚು ಮಂದಿಗೆ ಸ್ಥಳದಲ್ಲೇ ನೇಮಕಾತಿ ಪತ್ರವನ್ನು ವಿತರಿಸುವ ಮೂಲಕ ಉದ್ಯೋಗ ಮೇಳವು ಸಾರ್ಥಕತೆ ಮೆರೆಯಿತು.

**ಯುವಜನರ ಭವಿಷ್ಯಕ್ಕೆ ಕೌಶಲ್ಯ ಅತ್ಯಗತ್ಯ: ಸಚಿವ ಡಾ. ಯತೀಂದ್ರ**

ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಮಾತನಾಡಿದ ನಗರಾಭಿವೃದ್ಧಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ಅವರು, ಯುವಜನರಿಗೆ ಸೂಕ್ತ ಉದ್ಯೋಗಾವಕಾಶ ಕಲ್ಪಿಸುವುದು ಮತ್ತು ಅವರ ಭವಿಷ್ಯಕ್ಕೆ ದಾರಿದೀಪವಾಗುವುದು ಪ್ರಸ್ತುತ ದಿನಮಾನಗಳಲ್ಲಿ ಅತ್ಯಂತ ಅಗತ್ಯವಾಗಿದೆ ಎಂದರು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಯುವಜನತೆ ಕೇವಲ ಉದ್ಯೋಗ ಹುಡುಕುವವರಾಗದೆ, ತಮ್ಮ ಸಾಮರ್ಥ್ಯ ಹಾಗೂ ಕೌಶಲ್ಯಗಳನ್ನು ಬೆಳೆಸಿಕೊಂಡು ಆತ್ಮವಿಶ್ವಾಸದಿಂದ ಮುನ್ನಡೆಯಬೇಕು ಎಂದು ಕಿವಿಮಾತು ಹೇಳಿದರು. ಸ್ಥಳೀಯವಾಗಿಯೇ ಯುವಕ–ಯುವತಿಯರಿಗೆ ಉದ್ಯೋಗಾವಕಾಶ ಕಲ್ಪಿಸುವ ಇಂತಹ ಬೃಹತ್ ಮೇಳಗಳು ಸಮಾಜದ ಆರ್ಥಿಕ ಸಬಲೀಕರಣಕ್ಕೆ ಮತ್ತು ಯುವಜನತೆಯ ಉಜ್ವಲ ಭವಿಷ್ಯಕ್ಕೆ ದೊಡ್ಡ ಮಟ್ಟದ ಪೂರಕ ವಾತಾವರಣವನ್ನು ನಿರ್ಮಿಸುತ್ತವೆ. ಪ್ರತಿಯೊಬ್ಬ ನಿರುದ್ಯೋಗಿ ಯುವಕ–ಯುವತಿಯರಿಗೂ ಸೂಕ್ತ ವೇದಿಕೆ ಒದಗಿಸಿ ಅವರ ಬದುಕಿಗೆ ನೆರವಾಗುವುದು ಅತ್ಯಂತ ಶ್ಲಾಘನೀಯ ಕಾರ್ಯ ಎಂದು ಸಚಿವರು ಟ್ರಸ್ಟ್ ನ ಸೇವೆಯನ್ನು ಅಭಿನಂದಿಸಿ, ಉದ್ಯೋಗಾಕಾಂಕ್ಷಿಗಳಿಗೆ ಶುಭ ಹಾರೈಸಿದರು.

**80ಕ್ಕೂ ಹೆಚ್ಚು ಕಂಪನಿಗಳ ಭಾಗಿ**

ಈ ಬೃಹತ್ ಉದ್ಯೋಗ ಮೇಳದಲ್ಲಿ ಎಚ್ಡಿಎಫ್ಸಿ, ಬಜಾಜ್, ಸುಪ್ರೀಂ, ಜಿಆರ್ಎಸ್ ಫ್ಯಾಂಟೇಸಿ ಪಾರ್ಕ್, ಬಯೋ ಟೆಕ್ನಾಲಜಿ, ಸ್ಟೇಟ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡಾ ಸೇರಿದಂತೆ ವಿವಿಧ ವಲಯಗಳ 80ಕ್ಕೂ ಹೆಚ್ಚು ಪ್ರತಿಷ್ಠಿತ ಕಂಪನಿಗಳು ಭಾಗವಹಿಸಿ ಅಭ್ಯರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಿದವು.

ಈ ಮಹತ್ವದ ಕಾರ್ಯಕ್ರಮದಲ್ಲಿ ಟ್ರಸ್ಟ್ ಅಧ್ಯಕ್ಷ ಹಾಗೂ ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಶಾಸಕ ಹೆಚ್.ಎಂ. ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯ ಕೆ. ಶಿವಕುಮಾರ್, ನಗರ ಕಾಂಗ್ರೆಸ್ ಅಧ್ಯಕ್ಷ ಆರ್. ಮೂರ್ತಿ, ಕೆಪಿಸಿಸಿ ವಕ್ತಾರರಾದ ಎಂ. ಲಕ್ಷ್ಮಣ್, ಹೆಚ್.ಎ. ವೆಂಕಟೇಶ್, ಮಾಜಿ ಮಹಾಪೌರರಾದ ನಾರಾಯಣ್, ಪುಷ್ಪಾಲತಾ ಚಿಕ್ಕಣ್ಣ, ಮೋದಾಮಣಿ, ವಕೀಲರ ಸಂಘದ ಮಾಜಿ ಅಧ್ಯಕ್ಷ ಎಸ್. ಲೋಕೇಶ್, ಮಾಜಿ ಉಪ ಮಹಾಪೌರ ಸಿದ್ದರಾಜು, ನಗರಪಾಲಿಕೆ ಮಾಜಿ ಸದಸ್ಯರಾದ ಜೆ. ಗೋಪಿ, ಎಂ. ಸುನೀಲ್ ಉಪಸ್ಥಿತರಿದ್ದರು. ಇವರೊಂದಿಗೆ ಮಹಿಳಾ ಮುಖಂಡರಾದ ವೀಣಾ, ಲತಾ ಮೋಹನ್, ಲತಾ ರಂಗನಾಥ್, ಭವ್ಯ, ಇಂದಿರಾ, ನಾಗರತ್ನ ಮಂಜುನಾಥ್, ಫಿರ್ದೋಸ್, ಹಾಗೂ ಮುಖಂಡರಾದ ರವಿಶಂಕರ್, ವಿಶ್ವನಾಥ್, ಜೋಗಿ ಮಹೇಶ್, ಪಟಾಕಿ ಮಂಜುನಾಥ್, ವಿಜಯ್ ಕುಮಾರ್, ಪುಟ್ಟಸ್ವಾಮಿ, ಹರವೆ ಸಿದ್ದು, ರೂಪೇಶ್, ಆಶ್ರಯ ಸಮಿತಿ ಸದಸ್ಯರಾದ ಗುಣಶೇಖರ್, ಮಹ್ಮದ್ ಫಾರೂಖ್, ಡೈರಿ ವೆಂಕಟೇಶ್, ಸಿದ್ಧರಾಮು, ಯುವ ಕಾಂಗ್ರೆಸ್ ಅಧ್ಯಕ್ಷ ಹೊಯ್ಸಳ, ಉಪಾಧ್ಯಕ್ಷ ರಾಕೇಶ್, ವಿದ್ಯಾರ್ಥಿ ಘಟಕದ ಮುಖಂಡ ರಜತ್ ಮತ್ತಿತರರು ಹಾಜರಿದ್ದರು.

# ನಾಳೆ ಸ್ನೇಹ ಸಂತೆ ಕಾರ್ಯಕ್ರಮ

ಮೈಸೂರು: ಇನ್ನರ್ ವ್ಹೀಲ್ ಕ್ಲಬ್ ಆಫ್ ಮೈಸೂರುಉ ಗೋಲ್ಡ್ ವತಿಯಿಂದ ಸೆ.7ರ ಬೆಳಗ್ಗೆ 10 ರಿಂದ ರಾತ್ರಿ 9 ರವರೆಗೆ ನಗರದ ಐಶ್ವರ್ಯ ಪೆಟ್ರೋಲ್ ಬಂಕ್ ಬಳಿಯ ಮುಲಕನಾಡು ಭವನದಲ್ಲಿ ಸ್ನೇಹ ಸಂತೆ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅಧ್ಯಕ್ಷರಾದ ಡಾ. ಅಂಶು ಅರ?ವಾಲ್ ತಿಳಿಸಿದರು.

ನಗರದಲಿ ಸುದ್ದಿಗಾರರೊಡನೆ ಮಾತನಾಡಿ, ಇಲ್ಲಿ ಸುಮಾರು 30 ಮಳಿಗೆಗಳು ಪಾಲ್ಗೊಳ್ಳಲಿವೆ. ಎಲ್ಲವೂ ಮಹಿಳೆಯರದ್ದೇ ಆಗಿವೆ. ಇವರು ತಮ್ಮ ಉತ್ಪನ್ನ ತಂದು ಪ್ರದರ್ಶಿಸಿ ಮಾರಾಟ ಮಾಡಲಿದ್ದಾರೆ. ಮಳಿಗೆಗಳನ್ನು ಹಾಕಲು ಪಡೆಯುವ ಹಣದಲ್ಲಿ ಉಳಿಕೆಯನ್ನು ಸೌಲಭ್ಯ ಅಗತ್ಯವಿರುವ ಶಾಲೆ ಮೊದಲಾದವಕ್ಕೆ ದೇಣಿಗೆ ನೀಡಲಾಗುವುದೆಂದರು.

ಮತ್ತೋರ್ವ ಪದಾಧಿಕಾರಿ ಪ್ರತಿಭಾ ಪ್ರಶಾಂತ್ ಮಾತನಾಡಿ, ಸಂಗ್ರಹವಾಗುವ ದೇಣಿಗೆಯನ್ನು ಈ ಹಿಂದೆ ಸ್ತನ ಕ್ಯಾನ್ಸರ್ ರೋಗಿಗಳು ಮೊದಲಾದವರಿಗೆ ನೆರವಿಗಾಗಿ ಬಳಸಲಾಗಿದೆ. ಈಗಲೂ ಇದೇ ರೀತಿಯ ಸೇವೆ ಮುಂದುವರಿಯಲಿದೆ ಎಂದರು. ಕಾರ್ಯದರ್ಶಿ ಕುಮುದಾ ಮಾತನಾಡಿ, ಮೈಸೂರಿನವರು ಮಾತ್ರವಲ್ಲದೆ, ಬೇರೆ ಬೇರೆ ನಗರಗಳಿಂದಲೂ ಮಹಿಳೆಯರು ಆಗಮಿಸಿ ತಮ್ಮ ಕುರ್ತಾ, ಸೀರೆ, ಆಭರಣ ಮೊದಲಾದವುಗಳ ಮಳಿಗೆ ಇರಿಸಲಿದ್ದಾರೆಂದರು. ರಶ್ಮಿ ಬಸವರಾಜು ಇದ್ದರು.



# ಹೆಚ್ಚು ಸಾಮರ್ಥ್ಯದ ಮೋಟಾರ್, ಶುದ್ಧೀಕರಣ ಯಂತ್ರಕ್ಕೆ ಚಾಲನೆ



ಕೊಳ್ಳೇಗಾಲ: ಹನೂರು ಪಟ್ಟಣಕ್ಕೆ ಸರಬರಾಜಾಗುತ್ತಿದ್ದ ಕಾವೇರಿ ಕುಡಿಯುವ ನೀರಿನ ಪೂರೈಕೆಯಲ್ಲಿ ಆಗಾಗ್ಗೆ ಉಂಟಾಗುತ್ತಿದ್ದ ವ್ಯತ್ಯಯಕ್ಕೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ 1 ಕೋಟಿ ವೆಚ್ಚದಲ್ಲಿ ಹೆಚ್ಚು ಸಾಮರ್ಥ್ಯದ ನೂತನ ಮೋಟಾರ್ ಹಾಗೂ ಶುದ್ಧೀಕರಣ ಯಂತ್ರಗಳನ್ನು ಅಳವಡಿಸಲಾಗಿದೆ ಎಂದು ಶಾಸಕ ಎಂ.ಆರ್. ಮಂಜುನಾಥ್ ತಿಳಿಸಿದರು.

ಕೊಳ್ಳೇಗಾಲ ತಾಲೂಕಿನ ಹರಳೆ ಹಾಗೂ ಸಿದ್ದಯ್ಯನಪುರ ಪಂಪ್‌ಹೌಸ್‌ಗಳಲ್ಲಿ ನೂತನವಾಗಿ ಅಳವಡಿಸಿರುವ ಮೋಟಾರ್ ಮತ್ತು ಶುದ್ಧೀಕರಣ ಯಂತ್ರಗಳಿಗೆ ಶುಕ್ರವಾರ ಚಾಲನೆ ನೀಡಿ ಮಾತನಾಡಿದ ಅವರು, ಹಲವು ವರ್ಷಗಳಿಂದ ತಾಂತ್ರಿಕ ದೋಷ, ಮೋಟಾರ್ ದುರಸ್ತಿ ಸೇರಿದಂತೆ ವಿವಿಧ ಕಾರಣಗಳಿಂದ ಪಟ್ಟಣದ ಕುಡಿಯುವ ನೀರಿನ ಪೂರೈಕೆಯಲ್ಲಿ ವ್ಯತ್ಯಯ ಉಂಟಾಗುತ್ತಿತ್ತು. ಇದನ್ನು ಮನಗಂಡು ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ಉದ್ದೇಶದಿಂದ ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದರು.

1ಕೋಟಿ ಅನುದಾನದಲ್ಲಿ 67 ಲಕ್ಷ ವೆಚ್ಚದಲ್ಲಿ ಹೆಚ್ಚು ಸಾಮರ್ಥ್ಯದ ನೂತನ ಮೋಟಾರ್ ಹಾಗೂ 33 ಲಕ್ಷ ವೆಚ್ಚದಲ್ಲಿ ನೂತನ ಶುದ್ಧೀಕರಣ ಯಂತ್ರ ಅಳವಡಿಸಲಾಗಿದೆ. ಇದರಿಂದ ಮುಂದಿನ 10ರಿಂದ 15 ವರ್ಷಗಳವರೆಗೆ ನೀರು ಪೂರೈಕೆಗೆ ಸಂಬಂಧಿಸಿದಂತೆ ದೊಡ್ಡ ಪ್ರಮಾಣದ ತೊಂದರೆ ಎದುರಾಗದಂತೆ ವ್ಯವಸ್ಥೆ ಮಾಡಲಾಗಿದೆ ಎಂದು ಹೇಳಿದರು.

ನೂತನ ವ್ಯವಸ್ಥೆಯನ್ನು ವಾಟರ್ ಬೋರ್ಡ್‌ಗೆ ವಹಿಸಲಾಗಿದ್ದು, ಮುಂದಿನ ಐದು ವರ್ಷಗಳ ಕಾಲ ಅದರ ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ವಾಟರ್ ಬೋರ್ಡ್ ನಿರ್ವಹಿಸಲಿದೆ. ಹೀಗಾಗಿ ಮೋಟಾರ್ ದುರಸ್ತಿ ಸೇರಿದಂತೆ ವಿವಿಧ ಕಾರಣಗಳನ್ನು ಮುಂದಿಟ್ಟುಕೊಂಡು ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಕಡಿಮೆಯಾಗಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಪ್ರತಿ ಮನೆಗೂ ಕಾವೇರಿ ನೀರು :ಹನೂರು ಪಟ್ಟಣದ 13 ವಾರ್ಡ್‌ಗಳ ಪ್ರತಿ ಮನೆಗೂ ಕಾವೇರಿ ಕುಡಿಯುವ ನೀರು ಪೂರೈಸುವುದು ತಮ್ಮ ಗುರಿಯಾಗಿದೆ. ಈ ನಿಟ್ಟಿನಲ್ಲಿ 24 ಕೋಟಿ ಅನುದಾನಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಅನುದಾನ ಬಿಡುಗಡೆಯಾದ ಬಳಿಕ ಪಟ್ಟಣದ ಮನೆ–ಮನೆಗೂ ಸಮರ್ಪಕವಾಗಿ ಕಾವೇರಿ ನೀರು ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಶಾಸಕ ಮಂಜುನಾಥ್ ತಿಳಿಸಿದರು.

**ಯುಜಿಡಿ ಅಭಿವೃದ್ಧಿಗೂ ಆದ್ಯತೆ**

ಪಟ್ಟಣದಲ್ಲಿ ಕುಡಿಯುವ ನೀರಿನ ಬಳಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಒಳಚರಂಡಿ ವ್ಯವಸ್ಥೆ (ಯುಜಿಡಿ) ಅಭಿವೃದ್ಧಿಗೂ ಹೆಚ್ಚಿನ ಅನುದಾನದ ಅಗತ್ಯವಿದೆ. ಈ ಸಂಬಂಧ ಸಲ್ಲಿಸಿರುವ ಪ್ರಸ್ತಾವನೆ ಅನುಮೋದನೆಯ ಹಂತದಲ್ಲಿದ್ದು, ಕುಡಿಯುವ ನೀರು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಮೂಲಕ ಹನೂರು ಪಟ್ಟಣವನ್ನು ಮಾದರಿ ಪಟ್ಟಣವನ್ನಾಗಿ ರೂಪಿಸುವುದಾಗಿ ಭರವಸೆ ನೀಡಿದರು.
ಹನೂರು ಪಟ್ಟಣದ ಕಾವೇರಿ ಕುಡಿಯುವ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ನೂತನ ವ್ಯವಸ್ಥೆ ಜಾರಿಗೆ ಬಂದಿರುವುದು ಪಟ್ಟಣದ ಜನತೆಗೆ ಅನುಕೂಲವಾಗಲಿದೆ. ಯೋಜನಾ ನಿರ್ದೇಶಕ ವೆಂಕಟೇಶ್, ಪಟ್ಟಣ ಪಂಚಾಯಿತಿ ಮುಖ್ಯಾಧಿಕಾರಿ ರೇಖಾ, ಕಿರಿಯ ಅಭಿಯಂತರ ನಾಗರಾಜು, ಮುಖಂಡರಾದ ರಾಜುನಾಯ್ಡು, ಅಗಸ್ಟಿಯನ್, ವಾಟರ್‌ಮೆನ್‌ಗಳು ಹಲವರು ಉಪಸ್ಥಿತರಿದ್ದರು.

▶▶ 1 ಕೋಟಿ ವೆಚ್ಚದಲ್ಲಿ ನೂತನ ವ್ಯವಸ್ಥೆ
▶▶ ಶಾಸಕ ಎಂ. ಆರ್ ಮಂಜುನಾಥ್ ಅವರಿಂದ ಚಾಲನೆ

# ಭಾಸ್ಕರ್ ವಿರುದ್ಧ ಹೈಕಮಾಂಡ್‌ಗೆ ದೂರು



ಮೈಸೂರು: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾಷಣ ಮಾಡಿದ ಹಲ್ದಾವನಿಯ ಸ್ಥಳವನ್ನು ಶುದ್ಧೀಕರಿಸಿದ ಘಟನೆ ಬಳಿಕ ನಡೆದ ಹೋರಾಟದಲ್ಲಿ ತಾವು ಪಾಲ್ಗೊಳ್ಳಲಿಲ್ಲ ಎಂಬ ಕೆಪಿಸಿಸಿ ಪದಾಧಿಕಾರಿ ಭಾಸ್ಕರ್ ಸುಳ್ಳು ಹೇಳಿದ್ದು, ಇವರ ವಿರುದ್ಧ ಹೈಕಮಾಂಡ್‌ಗೆ ದೂರು ನೀಡಲಾಗುವುದು ಎಂದು ಮಾಜಿ ಎಂಎಲ್ಸಿ ಆರ್. ಧರ್ಮಸೇನಾ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಖರ್ಗೆ ಅವರಿಗೆ ಅಪಮಾನವಾದ ಬಳಿಕ ಇಡೀ ರಾಜ್ಯದಾದ್ಯಂತ ಪಕ್ಷ ನಡೆಸಿದ ಹೋರಾಟಗಳಲ್ಲಿ ತಾವು ಸಕ್ರಿಯವಾಗಿ ಪಾಲ್ಗೊಂಡು ಹಲವೆಡೆ ನೇತೃತ್ವ ವಹಿಸಿದ್ದು, ಹೋರಾಟಗಳಲ್ಲಿ ಎಸ್‌ಸಿ ಘಟಕ ನಿಷ್ಕ್ರಿಯವಾಗಿತ್ತು ಎಂದು ಈಗ ಸುಳ್ಳು ಆರೋಪ ಮಾಡಿರುವ ಭಾಸ್ಕರ್ ಸ್ವತಃ ತಮ್ಮ ಜಿಲ್ಲೆಯಲ್ಲೇ ನಡೆದ ಹೋರಾಟಕ್ಕೆ ಗೈರಾಗಿದ್ದರೇಕೆಂದು ಪ್ರಶ್ನಿಸಿದರು. ಇನ್ನು, ಮಲ್ಲಿಕಾರ್ಜುನ ಖರ್ಗೆ ಅವರು ಕೇವಲ ಎಸ್‌ಸಿ ಸಮುದಾಯದ ನಾಯಕ ಎಂದು ಬಿಂಬಿಸುವುದು ಸರಿಯಲ್ಲ. ಇವರು ಪಕ್ಷದ ಎಲ್ಲ ಸಮುದಾಯಗಳ ಮುಖಂಡರಾಗಿದ್ದಾರೆಂದರು. ನಂತರ, ದೇಶದ ಜನತೆ ಈಗ ಪ್ರಧಾನಿ ಮೋದಿ ಹಾಗೂ ಸಚಿವ ಅಮಿತ್ ಶಾ ಅವರಲ್ಲಿ ವಿಶ್ವಾಸ ಕಳೆದುಕೊಂಡಿದ್ದಾರೆ. ಹೀಗಾಗಿ ರಾಹುಲ್ ಗಾಂಧಿಯವರನ್ನು ಮುಂಬರುವ ಸಂಸತ್ ಚುನಾವಣೆ ವೇಳೆ ಪ್ರಧಾನಿ ಮಾಡಲಿದ್ದಾರೆ. ಆದ್ದರಿಂದ ಪಕ್ಷ ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದು, ತಮಗೆಲ್ಲ ಪ್ರಮುಖ ಹೊಣೆಗಾರಿಕೆ ವಹಿಸಿದೆ ಎಂದು ತಿಳಿಸಿದರು. ಇನ್ನಿತರ ಪದಾಧಿಕಾರಿಗಳಾದ ಈಶ್ವರ್ ಚಕ್ಕಡಿ, ರವಿಪ್ರಕಾಶ್, ರಾಜೇಂದ್ರ ಪ್ರಸಾದ್, ಶ್ರೀಕಾಂತ್ ಇದ್ದರು.

# ಸುಬ್ಬಣ್ಣ ಆರೋಗ್ಯ ವಿಚಾರಿಸಿದ ಸಚಿವರು



ಮೈಸೂರು: ನಗರಾಭಿವೃದ್ಧಿ ಹಾಗೂ ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಯತೀಂದ್ರ ಸಿದ್ದರಾಮಯ್ಯ ಮೈಸೂರಿನಲ್ಲಿ ಇತ್ತೀಚೆಗೆ ಆಕಸ್ಮಿಕ ಘಟನೆಯೊಂದರಲ್ಲಿ ತೀವ್ರವಾಗಿ ಗಾಯಗೊಂಡು ಚಿಕಿತ್ಸೆ ಪಡೆದು ಚೇತರಿಸಿಕೊಳ್ಳುತ್ತಿರುವ ಕರ್ನಾಟಕ ಪ್ರದೇಶ ಕುರುಬರ ಸಂಘದ ನಿಕಟಪೂರ್ವ ಅಧ್ಯಕ್ಷ ಬಿ.ಸುಬ್ರಹ್ಮಣ್ಯರನ್ನು ಭೇಟಿ ಮಾಡಿ ಆರೋಗ್ಯ ವಿಚಾರಿಸಿ, ಶೀಘ್ರವಾಗಿ ಸಂಪೂರ್ಣ ಚೇತರಿಸಿಕೊಳ್ಳುವಂತೆ ಹಾರೈಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯ್ ಕುಮಾರ್, ನಗರಪಾಲಿಕೆ ಮಾಜಿ ಸದಸ್ಯ ಗೋಪಿ, ನಗರಕಾಂಗ್ರೆಸ್ ಪ್ರದಾನ ಕಾರ್ಯದರ್ಶಿ ಶಿವಣ್ಣ, ಮುಖಂಡರಾದ ಜವರೇಗೌಡ, ರಾಜು ಹುಣಸೂರು ತಾಲ್ಲೂಕು ಕುರುಬರ ಸಂಘದ ಅಧ್ಯಕ್ಷ ಕುನ್ನೇಗೌಡ, ಎಚ್.ಡಿ.ಕೋಟೆ ತಾ. ಅಧ್ಯಕ್ಷ ಆನಂದ್, ಪಿರಿಯಾಪಟ್ಟಣ ಸುನಿಲ್ ಸೇರಿ ಇತತರಿದ್ದರು.

## Change of Name

I, Rohini Ganesh, W/o Ganesh P.S, residing at No. 229, 5th C Main, 2nd Block, near Banaswadi Traffic police station, HRBR Layout, Kalyananagar, Bangalore – 560043, my name is recorded in my Aadhaar Card as Rohini Ganesh. But in my Bank account of Sri Kanyaka Parameshwari Co-operative Bank Ltd., Mysore, my name is recorded as M H Rohini. So both names "ROHINI GANESH" and "M H ROHINI" belongs to same person, me only, vide affidavit sworn before Notary uday kumar K, Bangalore on 31/7/2026.

### ಮಾದಕ ದ್ರವ್ಯ ದುರ್ಬಳಕೆ ತಡೆಗಟ್ಟುವ ಮತ್ತು ಜನರಿಗಾಗಿ ತ್ವರಿತ– ಉಚಿತ ನ್ಯಾಯ ಸೌಲಭ್ಯ ವಿಷಯದ ಬಗ್ಗೆ ಕಾನೂನು ಅರಿವು ಕಾರ್ಯಕ್ರಮ

# ಕಾನೂನುಗಳನ್ನು ತಿಳಿದು ಪಾಲಿಸಬೇಕು: ನ್ಯಾ.ಬಿ.ಟಿ.ಮಹೇಶ್

ಎಚ್.ಡಿ.ಕೋಟೆ: ಭೂಮಿ ಮೇಲೆ ಹುಟ್ಟಿದ ಪ್ರತಿಯೊಬ್ಬರೂ ಈ ಮಣ್ಣಿನ ಕಾನೂನುಗಳ ಬಗ್ಗೆ ತಿಳಿದುಕೊಳ್ಳಬೇಕು. ಹಾಗೆಯೆ ಅವುಗಳನ್ನು ಪಾಲಿಸಬೇಕು. ದುಡ್ಡು ಇರುವವರಿಗೆ ಒಂದು ನ್ಯಾಯ, ಇಲ್ಲದಿದ್ದವರಿಗೆ ಇನ್ನೊಂದು ನ್ಯಾಯ ಇರುವುದಿಲ್ಲ ಎಂದು ಜೆ ಎಂ ಎಫ್ ಸಿ ನ್ಯಾಯಾಧೀಶ ಬಿ.ಟಿ.ಮಹೇಶ್ ತಿಳಿಸಿದರು.

ಅಂತಾರಾಷ್ಟ್ರೀಯ ಯುವ ದಿನಾಚರಣೆ ಅಂಗವಾಗಿ ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ತಾಲೂಕು ಕಾನೂನು ಸೇವಾ ಸಮಿತಿ ವತಿಯಿಂದ ಹಮ್ಮಿಕೊಂಡಿದ್ದ ಮಾದಕ ದ್ರವ್ಯ ದುರ್ಬಳಕೆ ತಡೆಗಟ್ಟುವ ಮತ್ತು ಜನರಿಗಾಗಿ ತ್ವರಿತ ಮತ್ತು ಉಚಿತ ನ್ಯಾಯ ಸೌಲಭ್ಯ ವಿಷಯದ ಬಗ್ಗೆ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತನಾಡಿದರು. ಎಲ್ಲರಿಗೂ ಒಂದೇ ಕಾನೂನು ಇದೆ. ಆದರೆ, ಕೆಲವೊಂದು ಪ್ರಕರಣಗಳಲ್ಲಿ ಶ್ರೀಮಂತ ಒಳ್ಳೆಯ ವಕೀಲರ ಹಿಡಿದು ನ್ಯಾಯ ದೊರಕಿಸಿಕೊಳ್ಳುತ್ತಾರೆ. ಅದೇ ಬಡವ ನ್ಯಾಯದಿಂದ ವಂಚಿತನಾಗುತ್ತಾನೆ. ಅದಕ್ಕೆ ಕಾರಣ ಒಂದು ಸಾಮಾನ್ಯ ಜ್ಞಾನ ಇಲ್ಲದಿರುವುದು.



ಮತ್ತೊಂದು ಹಣಕಾಸಿನ ಕೊರತೆ. ಇಂತಹ ಸಂದರ್ಭದಲ್ಲಿ ಸಮಾಜದ ಕಟ್ಟೆಕಡೆಯ ವ್ಯಕ್ತಿಗೆ ನ್ಯಾಯ ಸಿಗಬೇಕಾದರೆ ಕಾನೂನು ಅರಿವಿನ ಜೊತೆಗೆ ಕಾನೂನಿನ ನೆರವು ತುಂಬಾ ಅವಶ್ಯಕವಾಗುತ್ತದೆ. ಇದನ್ನು ತಾಲೂಕು ಕಾನೂನು ಸೇವಾ ಸಮಿತಿ ಉಚಿತವಾಗಿ ಮಾಡಲಿದೆ. ವಕೀಲರನ್ನು ನೇಮಿಸಿ, ನ್ಯಾಯ ದೊರಕಿಸಿಕೊಡಲಿದೆ ಎಂದು ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಂದ ಹಿಡಿದು ಪ್ರತಿಯೊಬ್ಬರಿಗೂ ಕಾನೂನಿನ ಅರಿವು ಅವಶ್ಯಕ. ಕಾನೂನಿನ ಬಗ್ಗೆ ನಿಮಗೆ ತಕ್ಕಮಟ್ಟಿಗೆ ಜ್ಞಾನವಿದ್ದರೆ, ಮತ್ತೊಬ್ಬರಿಗೆ ನೆರವಾಗಬಹುದು. ಆರ್ಥಿಕವಾಗಿ ಹಿಂದುಳಿದವರಿಗೆ ಕಾನೂನಿನ ಅರಿವು ಮೂಡಿಸಬಹುದು. ಹಾಗೆಯೆ ಕಾನೂನಿನ ಅರಿವಿನ ಜೊತೆಗೆ ಕಾನೂನು ನೆರವು ಕೂಡ ಬಹಳ ಮುಖ್ಯವಾಗುತ್ತದೆ. ಈ ಎರಡು ಕೆಲಸಗಳನ್ನು ಆರ್ಥಿಕವಾಗಿ ಹಿಂದುಳಿದವರಿಗೆ, ಮಹಿಳೆಯರಿಗೆ, ಹಿರಿಯರಿಗೆ, ವಿಶೇಷಚೇತನರಿಗೆ ತಾಲೂಕು ಕಾನೂನು ಸೇವಾ ಸಮಿತಿ ಉಚಿತವಾಗಿ ಮಾಡಿಕೊಡಲಿದೆ. ಎಲ್ಲರೂ ಇದನ್ನು ಸದುಪಯೋಗಪಡಿಸಿಕೊಳ್ಳಬೇಕು. ಈ ಬಗ್ಗೆ ನಿಮ್ಮ ಅಕ್ಕ, ಪಕ್ಕದ ಮನೆಯವರಿಗೆ ತಿಳಿಸಬೇಕು ಎಂದರು.

ತಾಲೂಕು ವಕೀಲರ ಸಂಘದ ಅಧ್ಯಕ್ಷ ಆರ್.ನಾಗೇಶ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಾಲೇಜು ವಿದ್ಯಾರ್ಥಿಗಳು ಮಾದಕ ದ್ರವ್ಯ ವ್ಯಸನಿಗಳಾಗಿ ತಮ್ಮ ಜೀವನವನ್ನು ಹಾಳು ಮಾಡಿಕೊಳ್ಳುತ್ತಿದ್ದಾರೆ. ನಿಮ್ಮ ಸಹಪಾಠಿಗಳಾಗಲಿ ಅಥವಾ ನಿಮ್ಮ ಗೆಳೆಯರಾಗಲಿ ಮಾದಕ ವಸ್ತುಗಳನ್ನು ಬಳಕೆ ಮಾಡುವುದು ನಮ್ಮ ಗಮನಕ್ಕೆ ಕಂಡುಬಂದರೆ, ತಕ್ಷಣವೇ ನಿಮ್ಮ ಉಪನ್ಯಾಸಕರಿಗೆ, ಪ್ರಾಂಶುಪಾಲರಿಗೆ ತಿಳಿಸಬೇಕು. ಈ ಮೂಲಕ ಅವರನ್ನು ಮಾದಕ ವಸ್ತುಗಳ ಬಳಕೆಯಿಂದ ದೂರವಿರಿಸಲು ಸಹಾಯವಾಗುತ್ತದೆ ಎಂದರು. ತಾಲೂಕು ವಕೀಲರ ಸಂಘದ ಜಂಟಿ ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಅಭಿಕುಮಾರ್, ಹಿರಿಯ ವಕೀಲರಾದ ಸರಸ್ವತಿ, ಪ್ಯಾನಲ್ ವಕೀಲರಾದ ಮಣಿರಾಜು, ಪ್ರಾಂಶುಪಾಲರಾದ ಕೃಷ್ಣನಾಯಕ ಸೇರಿದಂತೆ ಉಪನ್ಯಾಸಕರು ಸೇರಿದಂತೆ ವಿದ್ಯಾರ್ಥಿಗಳು ಇದ್ದರು.

# ಟಿಪ್ಪರ್– ಬೈಕ್ ನಡುವೆ ಅಪಘಾತ: ಬೈಕ್ ಸವಾರನಿಗೆ ಗಾಯ

ಗುಂಡ್ಲುಪೇಟೆ:ಟಿಪ್ಪರ್ ಹಾಗೂ ಬೈಕ್ ನಡುವೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರು ಗಾಯಗೊಂಡಿರುವ ಘಟನೆ ತಾಲೂಕಿನ ತೆರಕಣಾಂಬಿಯ ಡಬಲ್ ರೋಡ್‌ನಲ್ಲಿ ನಡೆದಿದೆ.

ತೆರಕಣಾಂಬಿಯಿಂದ ವಡ್ಡಗೆರೆಗೆ ಸಂಪರ್ಕ ಕಲ್ಪಿಸುವ ಡಬಲ್ ರೋಡ್ ನ ತಿರುವಿನಲ್ಲಿ ಅಪಘಾತ ನಡೆದಿದ್ದು, ಗಾಯಗೊಂಡಿರುವ ಬೈಕ್ ಸವಾರರನ್ನು ಎಚ್.ಡಿ.ಕೋಟೆ ಮೂಲದವರು ಎಂದು ಹೇಳಲಾಗುತ್ತಿದೆ. ವಡ್ಡಗೆರೆ ಕಡೆಯಿಂದ ಬರುತ್ತಿದ್ದ ಟಿಪ್ಪರ್ ಎದುರು ಕಡೆಯಿಂದ ತೆರಳುತ್ತಿದ್ದ ಬೈಕ್ ಹೊಡೆದ ಡಿಕ್ಕಿಯ ರಭಸಕ್ಕೆ ಬೈಕ್ ಸವಾರ ರಸ್ತೆಗೆ ಬಿದ್ದಿದ್ದಾರೆ. ಪರಿಣಾಮ ಕಾಲಿಗೆ ತೀವ್ರವಾದ ಗಾಯವಾಗಿದ್ದು, ಹಿಂಬದಿಯಲ್ಲಿ ಕುಳಿತಿದ್ದ ಮಹಿಳೆ ಹಾಗೂ ಬಾಲಕನಿಗೂ ಸಹ ಸಣ್ಣಪುಟ್ಟ ಗಾಯಗಳಾಗಿವೆ. ತಕ್ಷಣವೇ ಸಾರ್ವಜನಿಕರು ಗಾಯಾಳುಗಳನ್ನು ಆಸ್ಪತ್ರೆಗೆ ರವಾನಿಸಿದ್ದಾರೆ. ವಿಷಯ ತಿಳಿದು ಸ್ಥಳಕ್ಕೆ ತೆರಕಣಾಂಬಿ ಠಾಣೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿ, ವಾಹನಗಳನ್ನು ವಶಕ್ಕೆ ಪಡೆದುಕೊಂಡಿದ್ದಾರೆ.



# 8ರಂದು ಜಿಲ್ಲೆಯ ಬಿಜೆಪಿ ಕಾರ್ಯಕರ್ತರು ಬಳ್ಳಾರಿ ಚಲೋ ಪಾದಯಾತ್ರೆಗೆ ಭಾಗಿ

### ನಿರಂಜನ್‌ಕುಮಾರ್ ಹೇಳಿಕೆ



ಚಾಮರಾಜನಗರ, ಪ್ರಧಾನಿ ನರೇಂದ್ರ ಮೋದಿ ಅವರು 25 ವರ್ಷಗಳ ಸೇವೆ ಪೂರ್ಣಗೊಂಡ ಹಿನ್ನೆಲೆಯಲ್ಲಿ ಸೆ. 17 ರಿಂದ ನ. 7 ರ ವರೆಗೆ ಜಿಲ್ಲೆಯಾದ್ಯಂತ ಸೇವಾ ಸಂಕಲ್ಪ ಕಾರ್ಯಕ್ರಮನ್ನು ಅತ್ಯಂತ ಯಶಸ್ವಿಯಾಗಿ ಆಚರಣೆ ಮಾಡಬೇಕು ಎಂದು ಜಿಲ್ಲಾ ಬಿಜೆಪಿ ಅಧ್ಯಕ್ಷ ಸಿ. ಎಸ್. ನಿರಂಜನ್‌ಕುಮಾರ್ ತಿಳಿಸಿದರು.

ನಗರದ ಜಿಲ್ಲಾ ಬಿಜೆಪಿ ಕಚೇರಿಯಲ್ಲಿ ನಡೆದ ಜಿಲ್ಲಾ ಮಟ್ಟದ ಪಕ್ಷದ ಪದಾಧಿಕಾರಿಗಳ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ಬಿಜೆಪಿಯನ್ನು ಸಂಘಟನಾತ್ಮಕವಾಗಿ ಸದೃಡಗೊಳಿಸುವ ನಿಟ್ಟನಲ್ಲಿ ವಿವಿಧ ಮೋರ್ಚಾಗಳ ಅಧ್ಯಕ್ಷರು, ಪದಾಧಿಕಾರಿಗಳು ಸಕ್ರಿಯಗೊಳ್ಳಬೇಕು. ಆಯಾಯ ಮಂಡಲಗಳು ಸಹ ಪಕ್ಷದ ಕಾರ್ಯ ಚಟುವಟಿಕೆಗಳಲ್ಲಿ ಹೆಚ್ಚು ತೊಡಗಿಸಿಕೊಳ್ಳುವ ಮೂಲಕ ಮುಂಬರುವ ಸ್ಥಳಿಯ ಸಂಸ್ಥೆಗಳ ಚುನಾವಣೆಗಳು ಹಾಗೂ 2028ರ ವಿಧಾನಸಭೆ ಚುನಾವಣೆಗೆ ಪೂರ್ಣ ಪ್ರಮಾಣದಲ್ಲಿ ಸಜ್ಜುಗೊಳ್ಳಬೇಕು ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರು ಗುಜರಾತ್ ಮುಖ್ಯಮಂತ್ರಿಯಾದ ದಿನದಿಂದ ದೇಶದ ಪ್ರಧಾನ ಮಂತ್ರಿಗಳಾಗಿ 25 ವರ್ಷಗಳ ಸೇವೆಯನ್ನು ಪೂರ್ಣ ಮಾಡಿದ್ದು, ಈ ಸೇವಾ ವರ್ಷವನ್ನು ಸೇವಾ ಸಂಕಲ್ಪ ಕಾರ್ಯಕ್ರಮದೊಂದಿಗೆ ಪ್ರತಿಯೊಬ್ಬ ಕಾರ್ಯಕರ್ತರು ಹಾಗೂ ಮತದಾರರ ಮನೆ ಮನೆಗೆ ತಲುಪಿಸುವ ಕಾರ್ಯಕ್ರಮಗಳನ್ನು ರೂಪಿಸಬೇಕು. ಎಂದು ನಿರಂಜನ್‌ಕುಮಾರ್ ತಿಳಿಸಿದರು.

**ಸೆ.8ರಂದು ಬಳ್ಳಾರಿ ಚಲೋ ಪಾದಯಾತ್ರೆಯಲ್ಲಿ ಭಾಗಿ**

ರಾಜ್ಯ ಕಾಂಗ್ರೆಸ್ ಸರ್ಕಾರದ ಭ್ರಷ್ಟಾಚಾರವನ್ನು ಖಂಡಿಸಿ ರಾಜ್ಯ ಬಿಜೆಪಿ ವರಿಷ್ಠರ ಸೂಚನೆಯಂತೆ ನಡೆಯುತ್ತಿರುವ ಬಳ್ಳಾರಿ ಚಲೋ ಪಾದಯಾತ್ರೆಗೆ ಜಿಲ್ಲೆಯಿಂದ ಹೆಚ್ಚಿನ ಸಂಖ್ಯೆಯಲ್ಲಿ ಪಕ್ಷದ ಮುಖಂಡರು ಕಾರ್ಯಕರ್ತರು ಭಾಗವಹಿಸಬೇಕಾಗಿದೆ. ಈಗಾಗಲೇ ರಾಜ್ಯಾಧ್ಯಕ್ಷರಾದ ವಿಜಯೇಂದ್ರ ಅವರ ನೇತೃತ್ವದಲ್ಲಿ ಪಾದಯಾತ್ರೆ ಆರಂಭವಾಗಿದ್ದು, ಸೆ. 8 ರಂದು ಕಂಪ್ಲಿ ಯಿಂದ ಆರಂಭವಾಗುವ ಪಾದಯಾತ್ರೆಗೆ ಚಾಮರಾಜನಗರ, ಚಿಕ್ಕಮಗಳೂರು ಹಾಗು ಮೈಸೂರು ಜಿಲ್ಲೆಯ ಕಾರ್ಯಕರ್ತರು ಭಾಗವಹಿಸಲಿದ್ದೇವೆ. ಈ ಪಾದಯಾತ್ರೆಯಲ್ಲಿ ಪಕ್ಷದ ಪದಾಧಿಕಾರಿಗಳು ಭಾಗಿಯಾಗಬೇಕು ಎಂದು ತಿಳಿಸಿದರು. ಸಭೆಯಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್. ಮಹೇಶ್, ಮೈಸೂರು ವಿಭಾಗೀಯ ಪ್ರಭಾರಿ ವಿ. ಫಣ ?ಶ್, ಮಾಜಿ ಶಾಸಕರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ, ಕೇಂದ್ರ ಬರ ಪರಿಹಾರ ಸಮಿತಿಯ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ಜಿಲ್ಲಾ ಪ್ರಧಾನ ಕಾರ್ಯದರ್ಶಿಗಳಾದ ಪಿ. ವೃಷಬೇಂದ್ರಪ್ಪ, ಹೊನ್ನೂರು ಮಹದೇವಸ್ವಾಮಿ, ಮುಖಂಡರಾದ ನೂರೊಂದುಶೆಟ್ಟಿ, ರಾಜ್ಯ ಕಾರ್ಯದರ್ಶಿ ಕೆರೆಹಳ್ಳಿ ಮಹದೇವಸ್ವಾಮಿ, ಮಂಡಲದ ಅಧ್ಯಕ್ಷ ಕಾಡಹಳ್ಳೀ ಕುಮಾರ್, ಮಹದೇವಪ್ರಸಾದ್, ಜಿಲ್ಲಾ ಮಹಿಳಾ ಮೋರ್ಚಾ ಅಧ್ಯಕ್ಷೆ ಕಮಲಮ್ಮ, ಸರಸ್ವತಮ್ಮ, ಸೇರಿದಂತೆ ಜಿಲ್ಲೆಯ ವಿವಿಧ ಮೋರ್ಚಾಗಳ ಪದಾಧಿಕಾರಿಗಳು ಉಪಸ್ಥಿತರಿದ್ದರು.

### ಹನೂರು ಶೂಟೌಟ್ ಪ್ರಕರಣ

# ನ್ಯಾಯಾಂಗ ತನಿಖೆಗೆ ರೈತ, ದಲಿತ ಸಂಘಟನೆಗಳ ಒತ್ತಾಯ



ಹನೂರು: ತಾಲೂಕಿನ ಅರಣ್ಯ ಪ್ರದೇಶದಲ್ಲಿ ನಡೆದ ಶೂಟೌಟ್ ಪ್ರಕರಣ ನಡೆದು 20 ದಿನ ಕಳೆದರೂ ಸತ್ಯಾಂಶ ಹೊರಬಂದಿಲ್ಲ. ಪ್ರಕರಣದ ಸಿಐಡಿ ತನಿಖೆ ಮೇಲೆ ನಂಬಿಕೆ ಇಲ್ಲ, ನ್ಯಾಯಾಂಗ ಅಥವಾ ಸಿಬಿಐ ತನಿಖೆ ನಡೆಸಬೇಕು ಎಂದು ರೈತ ಮತ್ತು ದಲಿತ ಸಂಘಟನೆಗಳು ಒತ್ತಾಯಿಸಿವೆ.

ಪಟ್ಟಣದ ಆರ್.ಎಂ.ಸಿ ಆವರಣದಲ್ಲಿ ಶುಕ್ರವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕಿಸಾನ್ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಡಿಎಸ್‌ಎಸ್ ಮುಖಂಡರು ಮಾತನಾಡಿದರು. ಕಿಸಾನ್ ಸಂಘದ ರೈತ ಮುಖಂಡ ಬೋಸ್ಕೋ ಮಾತನಾಡಿ, "ನಾವು ಈ ಶೂಟೌಟ್ ಪ್ರಕರಣದಲ್ಲಿ ಸಂತ್ರಸ್ತ ಕುಟುಂಬಗಳ ಪರವಾಗಿ ನಿಂತಿದ್ದೇವೆ. ಈಗಾಗಲೇ ಸಿಐಡಿ ತನಿಖೆ ನಡೆಯುತ್ತಿದೆ, ಆದರೆ ಆ ತನಿಖೆ ಮೇಲೆ ನಮಗೆ ಅನುಮಾನವಿದೆ. ಅರಣ್ಯ ಸಿಬ್ಬಂದಿ ಬಹಳ ಹತ್ತಿರದಿಂದ ಗುಂಡು ಹಾರಿಸಿದ್ದಾರೆ. ಅಷ್ಟು ಹತ್ತಿರದಿಂದ ಶೂಟ್ ಮಾಡುವ ಅಗತ್ಯವಿತ್ತಾ? ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಬಹುದಿತ್ತು. ಆದ್ದರಿಂದ ಸತ್ಯಾಸತ್ಯತೆ ಹೊರಬರಲು ನ್ಯಾಯಾಂಗ ತನಿಖೆಯೇ ಆಗಬೇಕು. ಆ ಕುಟುಂಬಗಳಿಗೆ ನ್ಯಾಯ ಸಿಗಬೇಕು, ತಪ್ಪಿತಸ್ಥರು ಯಾರೇ ಆಗಲಿ ಶಿಕ್ಷೆಯಾಗಬೇಕು" ಎಂದು ಹೇಳಿದರು. ವಿಧಾನಸಭೆ ಅಧಿವೇಶನದಲ್ಲಿ ಅರಣ್ಯ ಸಚಿವರು 12 ಜನರ ತಂಡ ಬೇಟೆಗಾರರನ್ನು ಪತ್ತೆಹಚ್ಚಲು ತೆರಳಿದ್ದರು ಎಂದು ಅವರೇ ಒಪ್ಪಿಕೊಂಡಿದ್ದಾರೆ. ಶೂಟೌಟ್ ಪ್ರಕರಣ ಸಂಬಂಧ ಆ 12 ಜನರ ಮೇಲೆ ಪ್ರಕರಣ ದಾಖಲಿಸಿ ಶಿಕ್ಷೆ ವಿಧಿಸಬೇಕು ಎಂದು ಅವರು ಒತ್ತಾಯಿಸಿದರು. ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಮಾದಪ್ಪ ಮಾತನಾಡಿದರು.

ಡಿಎಸ್‌ಎಸ್ ಸಂಚಾಲಕ ಸಿದ್ದರಾಜು ಮಾತನಾಡಿ, "ಇದು ಕೇವಲ ರೈತರ ಪ್ರಶ್ನೆಯಲ್ಲ, ದಲಿತರು, ಬಡವರ ಮೇಲಿನ ದೌರ್ಜನ್ಯ. ಅರಣ್ಯದಂಚಿನಲ್ಲಿ ಬದುಕುತ್ತಿರುವ ಮುಗ್ಧ ಜನರನ್ನು ಬೇಟೆಗಾರರು ಎಂದು ಬಿಂಬಿಸಿ ಹತ್ಯೆ ಮಾಡಲಾಗಿದೆ. ನಾವು ಪರಿಸರ ಮತ್ತು ಅರಣ್ಯ ಸಂರಕ್ಷಣೆಯ ಪರವಾಗಿಯೇ ಇದ್ದೇವೆ, ಆದರೆ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಸಹಿಸುವುದಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ನ್ಯಾಯಾಂಗ ತನಿಖೆಗೆ ಆದೇಶಿಸಿ, ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಹಾಗೂ ಸೂಕ್ತ ಪರಿಹಾರ ನೀಡಬೇಕು" ಎಂದು ಒತ್ತಾಯಿಸಿದರು. ಇದೇ ವೇಳೆ ಕರ್ನಾಟಕ ರಾಜ್ಯ ರೈತ ಸಂಘದ ಪುಟ್ಟಸ್ವಾಮಿ ಹಾಜರಿದ್ದರು.

# 11ಕ್ಕೆ ಆಹಾರ ಉತ್ಸವ



ಮೈಸೂರು: ನಗರದ ಗೋಕುಲಂ 2 ನೇ ಹಂತ ಮುಖ್ಯ ರಸ್ತೆಯಲ್ಲಿನ ಬಿಗ್ ಕಪ್ ಹೋಟೆಲ್‌ನಲ್ಲಿ ಸೆ.11 ರವರೆಗೆ ಆ ಹಾನ್ ಥಾಯ್ ಎಂಬ ಥಾಯ್ಲೆಂಡ್ ಆಹಾರಗಳ ಉತ್ಸವ ಆಯೋಜಿಸಲಾಗಿದೆ ಎಂದು ಆಯೋಜಕರಾದ ಶಿಬಾನ್ ತಿಳಿಸಿದರು.

ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಇದಕ್ಕಾಗಿ ಥಾಯ್ಲೆಂಡ್‌ನಿಂದಲೇ ಬಾಣಸಿಗರಾದ ಕಾವ್ ಆಗಮಿಸಿದ್ದು, ಮಸಾಲೆ ಪದಾರ್ಥಗಳನ್ನು ಅಲ್ಲಿಂದಲೇ ತರಿಸಲಾಗಿದೆ. ಸಸ್ಯಾಹಾರ, ಮಾಂಸಾಹಾರದ ತಿನಿಸು, ಊಟಗಳು ಇರಲಿವೆ. ಅಷ್ಟೂ ದಿನ ನಿತ್ಯ ಮಧ್ಯಾಹ್ನ 12 ರಿಂದ ರಾತ್ರಿ 10 ರವರೆಗೆ ತೆರೆದಿರಲಿದೆ. ಥಾಯ್ಲೆಂಡ್‌ನ ಮೂಲ ಹಾಗೂ ವಿಶಿಷ್ಟ ರುಚಿಯ ನೂಡ್ಲ್ಸ್, ರೈಸ್, ಚಿಕನ್, ಫ್ರಾನ್ ಗಳಿಂದ ಮಾಡಿದ ಆಹಾರ ಇರಲಿವೆ. ಸುಮಾರು 300 ರಿಂದ 450 ರೂ. ಗಳವರೆಗೆ ದರ ಇರಲಿದೆ. ವೀಕ್ಷಣೆಗೆ ಶುಲ್ಕವಿಲ್ಲ ಎಂದರು. ವಿನಾಯಕ್, ದೇಬ್‌ರಾಜ್ ಇದ್ದರು.

# ಸರ್ವಪಲ್ಲಿ ರಾಧಾಕೃಷ್ಣನ್ ದಿನಾಚರಣೆ



ಚಾಮರಾಜನಗರ, ನಗರದ ಜಿಲ್ಲಾ ಕಾಂಗ್ರೆಸ್ ಸಮಿತಿ ಕಚೇರಿಯಲ್ಲಿ ಶಿಕ್ಷಕರ ದಿನಾಚರಣೆಯನ್ನು ಆಚರಿಸಲಾಯಿತು.,

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಪಿ,ಮರಿಸ್ವಾಮಿ ಅವರು ಶಿಕ್ಷಣತಜ್ಞ ಡಾ.ಸರ್ವಪಲ್ಲಿ ಡಾ.ರಾಧಾ ಕೃಷ್ಣನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿದರು, ನಂತರ ಮಾತನಾಡಿ ಅವರು ಸಮಾಜಕ್ಕೆ ಉತ್ತಮ ಪ್ರಜೆಗಳನ್ನು ಕೊಡುಗೆಯಾಗಿ ನೀಡಿದ ಡಾ.ರಾಧಾ ಕೃಷ್ಣನ್ ಅವರು ರಾಷ್ಟ್ರಪತಿ, ಶಿಕ್ಷಣ ತಜ್ಞರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ, ಇವರ ಹುಟ್ಟು ಹಬ್ಬದಂದು ಶಿಕ್ಷಕರ ದಿನಾಚರಣೆಯನ್ನು ಆಚರಿಸುವುದು ಹೆಮ್ಮೆಯ ವಿಚಾರ ಪ್ರಪಂಚವೇ ಹೆಚ್ಚು ಗೌರವಿಸುವಂತಹ ವ್ಯಕ್ತಿಯಾಗಿ ಶಿಕ್ಷಕನನ್ನು ನಾವು ಕಾಣುತ್ತೇವೆ ಎಂದರು.

ಚೂಡಅಧ್ಯಕ್ಷಮಹಮದ್‌ಅಸ್ಗರ್(ಮುನ್ನಾ), ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಬಿ,ಕೆ ರವಿಕುಮಾರ್, ನಗರಸಭಾ ನಾಮ ನಿರ್ದೇಶಕಸ್ವಾಮಿ, ಕಾಂಗ್ರೆಸ್ ಕಚೇರಿ ಕಾರ್ಯದರ್ಶಿ ನಸ್ರುಲಾಖಾನ್ ಪಿ, ಎಲ್,ಡಿ ಬ್ಯಾಂಕ್ ನಿರ್ದೇಶಕ ರವಿ ಬಿಸಲವಾಡಿ, ಗ್ಯಾರಂಟಿ ಯೋಜನೆ ಅನುಷ್ಠಾನಸಮಿತಿ ಸದಸ್ಯರಾದ ಕುಮಾರ್‌ಮರಿಯದ ಹುಂಡಿ, ರಾಜೇಶ್‌ಮೂಡಳ್ಳಿ, ರಮೇಶ್, ಮಲ್ಲಿಕಾರ್ಜುನಲಿಂಗನಪುರ, ಮಂಜುಳಾ, ಮಾದಾಪುರ ಕುಮಾರಸ್ವಾಮಿ, ಸುಕುಮರ್ ಗಣೇಶ್, ಚೂಡ ಪ್ರಾಧಿಕಾರಸದಸ್ಯ ಪುಟ್ಟಸ್ವಾಮಿ, ಕಾಂಗ್ರೆಸ್ ಗ್ರಾಮಾಂತರ ಮಹಿಳಾ ಅಧ್ಯಕ್ಷೆ ಶಕುಂತಳಾ, ನಗರಸಭಾ ಮಾಜಿ ಅಧ್ಯಕ್ಷರಾದ ಚಿನ್ನಮ್ಮ, ಸುರೇಶ್‌ನಾಯಕ್, ಮಾದಾಪುರ ಗ್ರಾ,ಪಂ ಮಾಜಿ ಅಧ್ಯಕ್ಷ ರೋಪೇಶ್, ಜಿ,ಪಂ ಮಾಜಿ ಸದಸ್ಯ ರಮೇಶ್, ಜಯರಾಜ್ ಸೇವಾದಳ ಅಧ್ಯಕ್ಷ, ಶಿವಮೂರ್ತಿ ರಾಮ ಸಮುದ್ರ, ಅಯಿಬ್‌ಖಾನ್, ಅಭಾಸ್, ಅಕ್ಷಯ್, ಸ್ವಾಮಿ, ಹಾಜರಿದ್ದರು.

# ಶನೇಶ್ವರಸ್ವಾಮಿಗೆ ವಿಶೇಷಪೂಜೆ



ಚಾಮರಾಜನಗರ: ಶ್ರಾವಣಮಾಸದ 4ನೇ ಶನಿವಾರ ಪ್ರಯುಕ್ತ ನಗರದ ಚಿಕ್ಕಂಗಡಿಬೀದಿಯ ನೃಪತುಂಗ ವೃತ್ತದಲ್ಲಿರುವ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಭಕ್ತಮಂಡಳಿ ವತಿಯಿಂದ ವಿಶೇಷಪೂಜಾ ಕಾರ್ಯಕ್ರಮ ನಡೆದು ಸಾರ್ವಜನಿಕರಿಗೆ ಅನ್ನಸಂತಪಣೆ ನಡೆಯಿತು.

ದೇವಸ್ಥಾನವನ್ನು ಹಾಗೂ ಶನೇಶ್ವರಸ್ವಾಮಿ ಭಾವಚಿತ್ರವನ್ನು ನಾನಾ ಹೂವಿಗಳಿಂದ ಅಲಂಕರಿಸಿ.. ಮಹಾಮಂಗಳಾರತಿ ನೆರವೇರಿಸಿ ಅನ್ನಸಂತರ್ಪಣೆ ಗೆ ಮಧ್ಯಾಹ್ನ ಚಾಲನೆ ನೀಡಲಾಯಿತು. ಭಕ್ತರು ಸರತಿಸಾಲಿನಲ್ಲಿ ನಿಂತು ದೇವರದರ್ಶನ ಪಡೆದು ಪ್ರಸಾದ ಸ್ವೀಕರಿಸಿದರು. ಅರಳಿಕಟ್ಟೆ, ಮಲ್ಲಾರಾಧ್ಯ ತಂಡದವರಿಂದ ಶ್ರೀಶನೇಶ್ವರಸ್ವಾಮಿಯ ಹರಿಕಥೆ ಏರ್ಪಡಿಸಲಾಗಿತ್ತು.

ಪೂಜಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಉದ್ಯಮಿ ಶ್ರೀನಿಧಿಕುದರ್ ಮಾತನಾಡಿ, ಕಳೆದ 15 ವರ್ಷಗಳಿಂದ ಶ್ರಾವಣಮಾಸದ 4ನೇ ಶನಿವಾರ ಪ್ರಯುಕ್ತ ನಗರದ ಚಿಕ್ಕಂಗಡಿಬೀದಿಯ ನೃಪತುಂಗ ವೃತ್ತದಲ್ಲಿರುವ ಶನೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಭಕ್ತಮಂಡಳಿ ವತಿಯಿಂದ ವಿಶೇಷಪೂಜಾ ಕಾರ್ಯಕ್ರಮ ನಡೆದು ಸಾರ್ವಜನಿಕರಿಗೆ ಅನ್ನಸಂತಪಣೆ ನಡೆದುಕೊಂಡು ಬರುತ್ತಿದೆ ಎಂದರು.

ನಮ್ಮ ತಂದೆ ಮರಣ್ಣ ಅವರು ಸಣ್ಣದಾಗಿ ಆರಂಭಿದ ಶನೇಶ್ವರಸ್ವಾಮಿಯ ಪೂಜಾ ಕಾರ್ಯಕ್ರಮ.. 'ಅನ್ನಸಂತರ್ಪಣೆ ಕಾರ್ಯಕ್ರಮ ಇಂದು ದೊಡ್ಡ ಮಟ್ಟದಲ್ಲಿ ನಡೆಯುತ್ತಿದ್ದು, ಇಂದು 8ರಿಂದ 10 ಸಾವಿರ ಜನರಿಗೆ ಅನ್ನಸಂತರ್ಪಣೆ ಮಾಡಲಾಗಿದೆ. ಜಿಲ್ಲೆಯಲ್ಲಿ ಬರಪರಿಸ್ಥಿತಿ ಇದ್ದು, ಶನೇಶ್ವರಸ್ವಾಮಿ ಉತ್ತಮ ಮಳೆ. 'ಬೆಳೆಯಾಗಿಸಿ ಸರ್ವರಿಗೂ ಸಕಲ ಸಮೃದ್ಧಿ ಕೊಡಲಿ ಎಂದರು. ಪೂಜಾ ಕಾರ್ಯಕ್ರಮದಲ್ಲಿ ಮುಖಂಡ ಮಹೇಶ್ ಕುದರ್, ಮಂಟೇಸ್ವಾಮಿ, ಹೂವಿನ ಕೃಷ್ಣ ಭಕ್ತ ಭಾಗವಹಿಸಿದ್ದರು.

# ಮಹನೀಯರೇ ಮಾರ್ಗದರ್ಶನ

## ಶಾಸಕ ಎಂ.ಆರ್.ಮಂಜುನಾಥ್ ಹೇಳಿಕೆ

ಹನೂರು: ಡಾ. ಸರ್ವಪಳ್ಳಿ ರಾಧಾಕೃಷ್ಣನ್ ಹಾಗೂ ಸಾವಿತ್ರಿಬಾಯಿ ಫುಲೆ ಅವರು ಹಾಕಿಕೊಟ್ಟ ಶಿಕ್ಷಣ ಮತ್ತು ಸಮಾಜಮುಖಿ ಹಾದಿಯಲ್ಲಿ ನಾವೆಲ್ಲರೂ ಸಾಗಬೇಕು. ಆಗ ಮಾತ್ರ ಸಮಾಜವು ಸಮಗ್ರವಾಗಿ ಉನ್ನತಿ ಸಾಧಿಸಲು ಸಾಧ್ಯ ಎಂದು ಶಾಸಕ ಎಂ. ಆರ್. ಮಂಜುನಾಥ್ ಹೇಳಿದರು.



ಹನೂರು ಪಟ್ಟಣದ ಶ್ರೀ ಗೌರಿ ಶಂಕರ ಕಲ್ಯಾಣ ಮಂಟಪದಲ್ಲಿ ಚಾಮರಾಜನಗರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಆಯೋಜಿಸಿದ್ದ ಶಿಕ್ಷಕರ ದಿನಾಚರಣೆ ಹಾಗೂ ನಿವೃತ್ತ ಶಿಕ್ಷಕರ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

**ಶಿಕ್ಷಕರ ಸಮಸ್ಯೆಗಳಿಗೆ ಸ್ಪಂದನೆ ಮತ್ತು ಸಾರಿಗೆ ವ್ಯವಸ್ಥೆ ಸುಧಾರಣೆ**

ಶಿಕ್ಷಕರ ಸಮಸ್ಯೆಗಳ ಕುರಿತು ಹೆಚ್ಚಿನ ಗಮನಹರಿಸಿ, ಅವುಗಳಿಗೆ ಪರಿಹಾರ ಕಲ್ಪಿಸುವ ನಿಟ್ಟಿನಲ್ಲಿ ಪ್ರಾಮಾಣಿಕವಾಗಿ ಪ್ರಯತ್ನಿಸಲಾಗುವುದು. ಹನೂರು ತಾಲೂಕಿನ ಕಾಡಂಚು ಹಾಗೂ ಗಡಿಯಂಚಿನ ಭಾಗದಲ್ಲಿರುವ ಶಾಲೆಗಳಿಗೆ ಸಾರಿಗೆ ವ್ಯವಸ್ಥೆಯನ್ನು ಉತ್ತಮಗೊಳಿಸುವ ಕೆಲಸ ಮಾಡಲಾಗುವುದು. ಈಗಾಗಲೇ ಬಸ್ ಘಟಕ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದ್ದು, ಮುಂದಿನ ದಿನಗಳಲ್ಲಿ ಸಾರಿಗೆ ಸಮಸ್ಯೆ ಬಗೆಹರಿಯಲಿದೆ ಎಂದು ಅವರು ಭರವಸೆ ನೀಡಿದರು. ಈ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರ ನಾಗರಾಜು, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮಾದೇಶ್, ಪ್ರಧಾನ ಕಾರ್ಯದರ್ಶಿ ಮಾದೇಶ, ಸದಸ್ಯರಾದ ಶಿವಮಲ್ಲು, ಖಜಾಂಚಿ ಶಿವಕುಮಾರಿ, ಕೃಷ್ಣೇಗೌಡ, ಗಿರೀಶ್, ರೂಪಶ್ರೀ, ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಗುರುಸ್ವಾಮಿ, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಶಿವಶಂಕರ್, ಬಿಇಒ ಪ್ರತಿಭಾ, ಬಿಆರ್‌ಸಿ ವೆಂಕಟೇಶ್, ಚಂದ್ರಶೇಖರ್, ಇಸಿಓಗಳು, ಬಿಆರ್‌ಪಿಗಳು, ಸಿಆರ್‌ಪಿಗಳು, ಶಿಕ್ಷಕರು ಹಾಗೂ ಮುಖಂಡರಾದ ರಾಜೂಗೌಡ, ನಟರಾಜು ಹಲವರು ಉಪಸ್ಥಿತರಿದ್ದರು.

### ಶಿಕ್ಷಕರ ಭವನ ನಿರ್ಮಾಣ, ಸರ್ಕಾರಿ ಶಾಲೆಗಳ ಸಬಲೀಕರಣ

**ಪ್ರಾಥಮಿಕ ಶಾಲಾ ಶಿಕ್ಷಕರಿಗೆ ಅನುಕೂಲವಾಗುವಂತೆ ಶಿಕ್ಷಕರ ಭವನ ನಿರ್ಮಾಣ ಮಾಡುವ ಕುರಿತು ಕೂಡ ಕ್ರಮ ಕೈಗೊಳ್ಳಲಾಗುವುದು. ಪ್ರಸ್ತುತ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಪಕ್ಕದಲ್ಲಿರುವ ಜಾಗದಲ್ಲಿ ಭವನ ನಿರ್ಮಿಸಲು ಪ್ರಯತ್ನಿಸೋಣ. ಈ ಸಂಬಂಧ ಅಗತ್ಯ ದಾಖಲೆಗಳನ್ನು ಒದಗಿಸುವಂತೆ ಅಧಿಕಾರಿಗಳಿಗೆ ಅವರು ಸಲಹೆ ನೀಡಿದರು. ಸರ್ಕಾರಿ ಶಾಲೆಗಳ ಗುಣಮಟ್ಟ ಹಾಗೂ ಶಿಕ್ಷಣದ ಮೇಲಿನ ವಿಶ್ವಾಸ ಮತ್ತಷ್ಟು ಹೆಚ್ಚಾಗಬೇಕು. ಖಾಸಗಿ ಶಾಲೆಗಳಿಗೆ ತೆರಳಿರುವ ಮಕ್ಕಳು ಮತ್ತೆ ಸರ್ಕಾರಿ ಶಾಲೆಗಳತ್ತ ಮರಳುವಂತಹ ವಾತಾವರಣ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಶಿಕ್ಷಕರು ತಮ್ಮ ಅನುಭವ, ಜ್ಞಾನ ಹಾಗೂ ವಿದ್ವತ್ತನ್ನು ಮಕ್ಕಳಿಗೆ ಪರಿಣಾಮಕಾರಿಯಾಗಿ ಧಾರೆ ಎರೆಯಬೇಕು ಎಂದು ಶಾಸಕ ಮಂಜುನಾಥ್ ಕರೆ ನೀಡಿದರು.**

### ನಿವೃತ್ತ ಶಿಕ್ಷಕರಿಗೆ ಸನ್ಮಾನ, ಬಹುಮಾನ ವಿತರಣೆ

**ಶಿಕ್ಷಕರ ದಿನಾಚರಣೆಯ ಅಂಗವಾಗಿ ಹನೂರು ಶೈಕ್ಷಣಿಕ ವಲಯದಲ್ಲಿ ಹಲವು ವರ್ಷಗಳ ಕಾಲ ಸೇವೆ ಸಲ್ಲಿಸಿ ನಿವೃತ್ತರಾದ ಶಿಕ್ಷಕರನ್ನು ಇದೇ ವೇದಿಕೆಯಲ್ಲಿ ಸನ್ಮಾನಿಸಿ ಗೌರವಿಸಲಾಯಿತು. ಅಲ್ಲದೆ, ಶಿಕ್ಷಕರ ದಿನಾಚರಣೆ ಪ್ರಯುಕ್ತ ಹನೂರು ಪಟ್ಟಣದ ಬಿ.ಆರ್.ಸಿ ಕೇಂದ್ರ ಹಾಗೂ ಮಲೆಮಹದೇಶ್ವರ ಕ್ರೀಡಾಂಗಣದಲ್ಲಿ ಶಿಕ್ಷಕರಿಗಾಗಿ ಆಯೋಜಿಸಿದ್ದ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳು ಹಾಗೂ ಕ್ರೀಡಾಕೂಟಗಳಲ್ಲಿ ವಿಜೇತರಾದ ಶಿಕ್ಷಕರಿಗೆ ಬಹುಮಾನ ವಿತರಿಸಲಾಯಿತು.**



# ಬರ ಕೇಂದ್ರದ ನಾಯಕರು ಸ್ಪಂದಿಸಲಿ: ಯತೀಂದ್ರ



ಮೈಸೂರು: ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯ ಕುರಿತಂತೆ ಕೇವಲ ರಾಜ್ಯ ಸರ್ಕಾರದಿಂದ ಎಲ್ಲವೂ ಸಾಧ್ಯವಿಲ್ಲ. ಈ ಬಗ್ಗೆ ಕೇಂದ್ರ ಸರ್ಕಾರವೂ ಗಮನ ಹರಿಸಿ ಹೆಚ್ಚಿನ ಪರಿಹಾರ ಬಿಡುಗಡೆ ಮಾಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಯತೀಂದ್ರ ಸಿದ್ದರಾಮಯ್ಯ ತಿಳಿಸಿದರು.

ಮೈಸೂರಿನಲ್ಲಿ ಬರ ಪರಿಸ್ಥಿತಿ ಕುರಿತು ಮಾದ್ಯಮಗಳ ಪ್ರಶ್ನೆಗೆ ಪ್ರತಿಕ್ರಯಿಸಿದ ಅವರು, ಕಳೆದ ಬಾರಿ 39ಸಾವಿರ ಕೋಟಿ ನಷ್ಟ ಉಂಟಾಗಿತ್ತು. ಇದರಲ್ಲಿ 18ಸಾವಿರ ಕೋಟಿ ಪರಿಹಾರ ಕೋರಿ ಕೇಂದ್ರಕ್ಕೆ ಮನವಿ ಕೊಟ್ಟರು ಸ್ಪಂದಿಸಲಿಲ್ಲ. ಅಂತಿಮವಾಗಿ ನ್ಯಾಯಾಲಯದ ಮೊರೆ ಹೋದ ಬಳಿಕ 3500ಕೋಟಿ ರೂ. ಪರಿಹಾರ ಕೊಟ್ಟರು. ಹೀಗೆ ಪರಿಹಾರಕ್ಕಾಗಿ ನ್ಯಾಯಾಲಯದ ಮೊರೆ ಹೋಗಬೇಕಾದ ಸ್ಥಿತಿಯಿದೆ. ಹೀಗಾಗಿ ಕೇಂದ್ರದ ಬಿಜೆಪಿ ಸರ್ಕಾರ ಜನಪರ, ರೈತರ ನಿಲುವು ತಳಾವು ನಿಟ್ಟಿನಲ್ಲಿ ಸಾಲಮನ್ನಾ ಪರಿಹಾರ ಕಲ್ಪಿಸಿಕೊಡುವ ಕೆಲಸ ಮಾಡಲಿ ಎಂದು ಹೇಳಿದರು.

ದೇಶದಲ್ಲಿ ರಾಜ್ಯದಲ್ಲಿ ಎರಡನೇ ಅತಿದೊಡ್ಡ ತೆರಿಗೆ ಕಟ್ಟುವ ರಾಜ್ಯವಾಗಿದೆ. ಹೀಗಾಗಿ ಸಾಲಮನ್ನಾ ಹಾಗೂ ಪರಿಹಾರ ವಿಚಾರವನ್ನು ಕೇಂದ್ರ ಪರಿಗಣಿಸಬೇಕಿದೆ. ರಾಜ್ಯ ಸರ್ಕಾರ ಮುಂದಿನ ದಿನಗಳಲ್ಲಿ ಸಾಲಮನ್ನಾ ಹಾಗೂ ಪರಿಹಾರ ವಿಚಾರವಾಗಿ ಗಂಭೀರವಾಗಿ ಚಿಂತನೆ ನಡೆಸಿದೆ. ಸದ್ಯದ ಸ್ಥಿತಿಯಲ್ಲಿ ರೈತರು ಸಂಕಷ್ಟದಲ್ಲಿ ಇದ್ದಾರೆ. 101ತಾಲ್ಲೂಕು ಬರ ಪೀಡಿತವಾಗಿದ್ದು, ಮತ್ತಷ್ಟು ತಾಲ್ಲೂಕುಗಳನ್ನು ಮುಂದಿನ ದಿನಗಳಲ್ಲಿ ಘೋಷಣೆ ಮಾಡಲಾಗುವುದು ಎಂದು ಹೇಳಿದರು.

# 'ಸಾವಯವ ಉತ್ಪನ್ನಗಳ ತರಬೇತಿ'

ಚಾಮರಾಜನಗರ: ನಗರದ ಕೃಷಿಉತ್ಪನ್ನ ಮಾರುಕಟ್ಟೆ ಸಮಿತಿ ಸಭಾಂಗಣದಲ್ಲಿ ಕೃಷಿ ಮಾರಾಟ ಇಲಾಖೆ ಮತ್ತು ಕರ್ನಾಟಕ ರಾಜ್ಯ ಕೃಷಿ ಮಾರಾಟ ಅಧ್ಯಯನ ಸಂಸ್ಥೆ ಮೈಸೂರು

ಸಹಯೋಗದಲ್ಲಿ ಕೃಷಿ, ತೋಟಗಾರಿಕೆ ಬೆಳೆಗಳ ಮತ್ತು ಸಾವಯವ ಉತ್ಪನ್ನಗಳ ಉತ್ಪಾದನೆ, ಮಾರಾಟ ವ್ಯವಸ್ಥೆ ಕುರಿತು ತರಬೇತಿ ಕಾರ್ಯಕ್ರಮ ನಡೆಯಿತು. ತರಬೇತಿಯಲ್ಲಿ ಪಾಲ್ಗೊಂಡ 40ಕ್ಕಿಂತ ಹೆಚ್ಚಿನ ರೈತರಿಗೆ ನುರಿತ ತಜ್ಞರು ಉಪನ್ಯಾಸ ನೀಡಿದರು. ಎಪಿಎಂಸಿ ಸಮಿತಿ ಅಧ್ಯಕ್ಷ ಎಂ.ಬಿ. ಗುರುಸ್ವಾಮಿ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಪ್ರಾಚಾರ್ಯ ರಾದ ವಾಣ ಶ್ರೀ, ಕರ್ನಾಟಕ ರಾಜ್ಯ ಕೃಷಿ ಮಾರಾಟ ಅಧ್ಯಯನ ಸಂಸ್ಥೆ ಪ್ರಧಾನ ವ್ಯವಸ್ಥಾಪಕ ಸೋಮಯ್ಯ. ವ್ಯವಸ್ಥಾಪಕ ಸೋಮಣ್ಣ, ಕಾರ್ಯದರ್ಶಿ ಬಿ. ಜಗದೀಶ್ ರೈತಮುಖಂಡರಾದ ಹೊನ್ನೂರು ಪ್ರಕಾಶ್, ಸಾವಯವ ಕೃಷಿಕ ಶಿವಕುಮಾರಸ್ವಾಮಿ, ಸಹಾಯಕ ತೋಟಗಾರಿಕೆ ಅಧಿಕಾರಿ ಜಯಶಂಕರ್, ಎಪಿಎಂಸಿ ಸಿಬ್ಬಂದಿ ಹಾಜರಿದ್ದರು.



# ಸೇವಾಭಾರತಿ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಸಂಭ್ರಮ



**ಚಾಮರಾಜನಗರ:** ನಗರದ ನ್ಯಾಯಾಲಯ ರಸ್ತೆಯಲ್ಲಿರುವ ಸೇವಾ ಭಾರತಿ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಮಕ್ಕಳಿಗಾಗಿ ಕೃಷ್ಣ ಹಾಗೂ ರಾಧೆ ವೇಷಭೂಷಣ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಮಕ್ಕಳು ಕೃಷ್ಣ ಹಾಗೂ ರಾಧೆಯ ವೇಷಧಾರಣೆಯಲ್ಲಿ ಉತ್ಸಾಹದಿಂದ ಪಾಲ್ಗೊಂಡು, ತಮ್ಮ ಪ್ರತಿಭೆಯನ್ನು ಪ್ರದರ್ಶಿಸಿದರು. ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಪ್ರಶಸ್ತಿ ಹಾಗೂ ಬಹುಮಾನಗಳನ್ನು ನೀಡಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಸೇವಾ ಭಾರತಿ ಶಿಕ್ಷಣ ಸಂಸ್ಥೆಯ ಖಜಾಂಜಿ ಮಧು, ಶಾಲೆಯ ಮುಖ್ಯೋಪಾಧ್ಯಾಯಿನಿ ನಂದಿನಿ, ತೀರ್ಪುಗಾರರಾದ ಪ್ರಕೃತಿ ಹಾಗೂ ಶೇಷಕುಮಾರಿ, ಶಿಕ್ಷಕಿಯರಾದ ವರದ ಮಾತಾಜಿ ಮತ್ತು ತೇಜಸ್ವಿನಿ ಸೇರಿದಂತೆ ಶಾಲೆಯ ಶಿಕ್ಷಕರು ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

### ವಿಸ್ತರಣಾಧಿಕಾರಿ ಆರ್.ನಂಜುಡಸ್ವಾಮಿ

# ಹೈನುಗಾರಿಕೆಯಿಂದ ರೈತರ ಬದುಕಿಗೆ ದಾರಿಯಾಗಿದೆ

ಚಾಮರಾಜನಗರ, ಹೈನುಗಾರಿಕೆಯಿಂದ ಗ್ರಾಮೀಣ ಭಾಗದ ರೈತರ ಬದುಕಿಗೆ ದಾರಿಯಾಗಿದೆ, ಹಾಲನ್ನು ನೇರವಾಗಿ ಹಾಲಿನ ಡೈರಿಗೆ ನೀಡುವುದರಿಂದ ರೈತರಿಗೆ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಹಲವು ಪ್ರಮುಖ ಅನುಕೂಲಗಳು ದೊರೆಯುತ್ತವೆ ಎಂದು ಚಾಮುಲ್ ಮಾರ್ಗ ವಿಸ್ತರಣಾಧಿಕಾರಿ ಆರ್ ನಂಜುಡಸ್ವಾಮಿ ತಿಳಿಸಿದರು.

ನಗರದ ಸೋಮವಾರ ಪೇಟೆ ವಾಟಾಳ್ ಬಡಾವಣೆಯಲ್ಲಿ ಇರುವ ಸೋಮವಾರಪೇಟೆ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘ ನಿಯಮಿತದ 2025–2026ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯಲ್ಲಿ ಅವರು ಚಾಮುಲ್‌ನಿಂದ ಹಾಲು ಉತ್ಪಾದಕರಿಗೆ ಸಿಗುವ ಸೌಲಭ್ಯಗಳ ಬಗ್ಗೆ ವಿವರಿಸಿದರು.

ಡೈರಿಗಳಲ್ಲಿ ವಾರಕ್ಕೊಮ್ಮೆ ಅಥವಾ ಹದಿನೈದು ದಿನಗಳಿಗೊಮ್ಮೆ ನೇರವಾಗಿ ರೈತರ ಬ್ಯಾಂಕ್ ಖಾತೆಗೆ ಹಣ ಜಮೆಯಾಗುತ್ತದೆ. ಇದು ಕೃಷಿ ಖರ್ಚು ಮತ್ತು ದಿನನಿತ್ಯದ ನಿರ್ವಹಣೆಗೆ ನಿಶ್ಚಿತ ಆದಾಯದ ಮೂಲ ಒದಗಿಸುತ್ತದೆ.



**ಗುಣಮಟ್ಟಕ್ಕೆ ತಕ್ಕ ಬೆಲೆ**

ಹಾಲಿನ ಕೊಬ್ಬಿನಾಂಶ ಮತ್ತು ಎಸ್‌ಎನ್‌ಎಫ್ ಆಧಾರದ ಮೇಲೆ ವೈಜ್ಞಾನಿಕವಾಗಿ ಬೆಲೆ ನಿಗದಿಪಡಿಸುವುದರಿಂದ ಗುಣಮಟ್ಟದ ಹಾಲಿಗೆ ನ್ಯಾಯಯುತ ಬೆಲೆ ಸಿಗುತ್ತದೆ. ಮಧ್ಯವರ್ತಿಗಳ ಹಾವಳಿ ತಪ್ಪುತ್ತದೆ ಎಂದು ಹೇಳಿದರು.

ಸಂಘಗಳ ಮೂಲಕ ಗುಣಮಟ್ಟದ ಹಿಂಡಿ, ಬೂಸ ಮತ್ತು ಸಮತೋಲಿತ ಪಶು ಆಹಾರಗಳು ಮಾರುಕಟ್ಟೆಗಿಂತ ಕಡಿಮೆ ದರದಲ್ಲಿ ಸಿಗುತ್ತವೆ. ಜಾನುವಾರುಗಳಿಗೆ ಲಸಿಕೆ, ಕೃತಕ ಗರ್ಭಧಾರಣೆ, ಸಾಮಾನ್ಯ ಕಾಯಿಲೆಗಳಿಗೆ ಉಚಿತ ಅಥವಾ ಅತ್ಯಂತ ಕಡಿಮೆ ಶುಲ್ಕದಲ್ಲಿ ತುರ್ತು ವೈದ್ಯಕೀಯ ಚಿಕಿತ್ಸೆ ಲಭ್ಯವಾಗುತ್ತದೆ. ಡೈರಿಗಳು ಲಾಭ ಗಳಿಸಿದಾಗ ವರ್ಷದ ಕೊನೆಯಲ್ಲಿ ಸದಸ್ಯ ರೈತರಿಗೆ ಬೋನಸ್ ಮತ್ತು ಷೇರು ಲಾಭಾಂಶವನ್ನು ನೀಡುತ್ತದೆ ಹಾಗೂ ಜಾನುವಾರು ವಿಮೆ ಸೌಲಭ್ಯ ಹಾಗೂ ಸುಲಭ ಕಂತುಗಳಲ್ಲಿ ಹಸು/ಎಮ್ಮೆ ಖರೀದಿಸಲು ಡೈರಿ ಮೂಲಕ ಸಾಲ ಸೌಲಭ್ಯ ಪಡೆಯಲು ಸಾಧ್ಯವಾಗುತ್ತದೆ. ಹಾಲು ಒಕ್ಕೂಟಗಳು ರೈತರು ಹಾಗೂ ಅವರ ಕುಟುಂಬಕ್ಕೆ ಆರೋಗ್ಯ ವಿಮೆ ಮತ್ತು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ಧನವನ್ನು ನೀಡುತ್ತವೆ. ಈ ಎಲ್ಲ ಸೌಲಭ್ಯಗಳು ರೈತರಿಗೆ ಕೃಷಿಯ ಜೊತೆಗೆ ಹೈನುಗಾರಿಕೆಯನ್ನು ಲಾಭದಾಯಕ ಉಪಕಸುಬನ್ನಾಗಿ ಮುನ್ನಡೆಸಲು ಭದ್ರತೆ ನೀಡುತ್ತದೆ ಎಂದು ತಿಳಿಸಿದರು. ಕಾರ್ಯಕ್ರಮದ ಉದ್ಘಾಟನೆಯನ್ನು ಜ್ಯೋತಿಬೆಳಗಿಸಿಸುವ ಮೂಲಕ ಹಾಲು ಉತ್ಪಾದಕರ ಮಹಿಳಾ ಸಹಕಾರ ಸಂಘದ ಅಧ್ಯಕ್ಷರಾದ ಮಮತ ನೆರವೇರಿಸಿದರು. ವೇದಿಕೆಯಲ್ಲಿ ಸೋಮವಾರಪೇಟೆ ಗ್ರಾಮಸ್ಥರಾದ ಎಸ್.ಪಿ.ರಾಜಪ್ಪ, ವೃಷಬೇಂದ್ರಸ್ವಾಮಿ, ಪುಟ್ಟರಾಜಯ್ಯ, ಹಾಗೂ ಇನ್ನಿತರರು ಇದ್ದರು. ಈ ಸಂದರ್ಭದಲ್ಲಿ ಉಪಾಧ್ಯಕ್ಷರಾದ ರಾಜಮ್ಮ, ನಿರ್ದೇಶಕರುಗಳಾದ ನೀಲಮ್ಮ, ಇಂದ್ರಮ್ಮ, ಸಾಕಮ್ಮ, ಟಿ.ಎಂ.ಮಲ್ಲಿಕಾ, ನೀಲಮಣಿ, ಸೌಮ್ಮ, ರೂಪ, ಮೇಘ, ಮುಖ್ಯ ಕಾರ್ಯನಿರ್ವಾಹಕರಾದ ರತ್ನಮ್ಮ, ಹಾಲು ಪರಿಕ್ಷಕರಾದ ನೀಲಮ್ಮ ಉಪಸ್ಥಿತರಿದ್ದರು.

# ಬಡ ಮಕ್ಕಳಲ್ಲಿ ಭಗವಂತನ ಕಂಡವರು ರಾಜೇಂದ್ರ ಶ್ರೀಗಳು: ಡಾ.ಜಯಪ್ಪ ಹೊನ್ನಾಳಿ

▪ ವರದಿ: ಬಸವರಾಜೇಂದ್ರ ಸ್ವಾಮಿ



**ಮೈಸೂರು:** ಬಡ ಮಕ್ಕಳಲ್ಲಿ ಭಗವಂತನ ಕಂಡು, ಅವರಿಗೆ ಅನ್ನ, ಅಕ್ಷರ, ಆಶ್ರಯ ನೀಡುವ ಮೂಲಕ ಅವರಲ್ಲಿದ್ದ ಆ ಅನಂತನನ್ನು ಆರಾಧಿಸಿದವರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳು, ಅವರಿಗೆ ನಿಜವಾದ ಪೂಜೆಯೆಂದರೆ ಅಜ್ಞಾನದ ವಿನಾಶ; ಪ್ರಜ್ಞೆಯ ವಿಕಾಸ ಎಂಬುದು ಗೊತ್ತಿತ್ತು ಎಂದು ಕವಿ, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಮೈಸೂರು ನಗರ ಘಟಕದ ಅಧ್ಯಕ್ಷರಾದ ಡಾ. ಜಯಪ್ಪ ಹೊನ್ನಾಳಿ ಹೇಳಿದರು.

ಮೈಸೂರಿನ ಶ್ರೀ ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನ, ನಮನ ಕಲಾ ಮಂಟಪದಲ್ಲಿ ಹಮ್ಮಿಕೊಂಡಿದ್ದ ಶ್ರೀಗಳ 111 ನೇ ಜಯಂತಿ ಮಹೋತ್ಸವ ಹಾಗೂ ಅವರ ಹೆಸರಿನ ಸದ್ಭಾವನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಧಾನ ನುಡಿಗಳನ್ನಾಡುತ್ತ, ಕಂತೆಭಿಕ್ಷೆ ಬೇಡಿ ಜೆ.ಎಸ್.ಎಸ್. ಮಹಾವಿದ್ಯಾಪೀಠವನ್ನು 1954 ರಲ್ಲಿ ಸ್ಥಾಪಿಸಿದ ಶ್ರೀಗಳು ಗ್ರಾಮೀಣ ಮತ್ತು ಎಲ್ಲಾ ದೃಷ್ಟಿಯಿಂದ ಹಿಂದುಳಿದ ಬಡ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಮಹದಾಶಯ ಹೊಂದಿದ್ದರಿಂದ ಶಿಕ್ಷಣ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಮಾಡಿ, 'ಶಿಕ್ಷಣ ಕ್ಷೇತ್ರದ ಹರಿಕಾರ" ರೆನಿಸಿದರು ಎಂದರು.

ಆರ್ಥಿಕ ಸಂಕಷ್ಟ ಬಂದೊದಗಿದಾಗ,ಬಡ ಮಕ್ಕಳ ಅನ್ನ ವಸತಿಗಾಗಿ ಭಕ್ತರೊಬ್ಬರು ಕೊಟ್ಟಿದ್ದ ಲಿಂಗದ ಬಂಗಾರದ ಕರಡಿಗೆಯನ್ನು ಹಾಗೂ ಚಿನ್ನ ಲೇಪಿತ ರುದ್ರಾಕ್ಷಿ ಮಾಲೆಯನ್ನೂ 800 ರೂ.ಗೆ ಅಡವಿಟ್ಟಿದ್ದ ಮಾತೃಹೃದಯಿಯಿವರು, ಒಟ್ಟಾರೆಯಾಗಿ ಪರಮಪೂಜ್ಯರ ಮಹೋನ್ನತವಾದ ಶೈಕ್ಷಣಿಕ ಹಾಗೂ ಧಾರ್ಮಿಕ ಕ್ಷೇತ್ರದ ಕೊಡುಗೆಗಳನ್ನು ಗಮನಿಸಿಯೇ ಅಂದಿನ ಮಹಾರಾಜ ಜಯಚಾಮರಾಜೇಂದ್ರ ಒಡೆಯರ್ ಅವರು ಪ್ರತಿಷ್ಠಿತ 'ರಾಜಗುರು ತಿಲಕ' ಪ್ರಶಸ್ತಿಯನ್ನು ಸ್ವತಃ ಇವರಿಗೆ ನೀಡಿ, ಗೌರವಿಸಿದರು, ಇವರ ಜನ್ಮಶತಮಾನೋತ್ಸವದ ಸವಿ ನೆನಪಿಗಾಗಿ ಕೇಂದ್ರ ಸರ್ಕಾರ ಇವರ 'ಅಂಚೆ ಚೀಟಿ' ಬಿಡುಗಡೆ ಮಾಡಿತು, ಸಮಾಜದಿಂದ 'ಕರ್ಮಯೋಗಿ' ಎಂಬ ಬಿರುದೂ ಹಾಗೂ ಮೈಸೂರು ವಿ ವಿ ಯಿಂದ 'ಗೌರವ ಡಾಕ್ಟರೇಟ್' ಪದವಿಗಳೂ ದೊರೆತವು, ಕರ್ಮಯೋಗಿಯೂ ಧರ್ಮಯೋಗಿಯೂ ಪರಮತ್ಯಾಗಿಯೂ ಹಾಗೂ ಮಾತೃಹೃದಯಿಯೂ ಆಗಿದ್ದ ಇವರೇ ನಿಜವಾದ ಸದ್ಗುರು, ಗುರುಗಳ ಗುರುವಾದ ಜಗದ್ಗುರು ಎಂದರು.

ಚನ್ನಬಸಪ್ಪ ವಚನ ಗಾಯನ ಮಾಡಿದರೆ, ಶಾಂತಕುಮಾರಿ ಪ್ರಾರ್ಥನೆ ಮಾಡಿದರು. ಕಾಂಗ್ರೆಸ್ ಮುಖಂಡರಾದ ಎನ್ ಎಂ ನವೀನ್ ಕುಮಾರ್ ಶ್ರೀಗಳ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿದರು. ಮರಿಮಲ್ಲಪ್ಪ ಪ್ರೌಢ ಶಾಲಾ ನಿವೃತ್ತ ಮುಖ್ಯೋಪಾಧ್ಯಾಯಿನಿ ಹಾಗೂ ಲೇಖಕಿ ಮಂಗಳ ಮುದ್ದುಮಾದಪ್ಪ ಅಧ್ಯಕ್ಷತೆ ವಹಿಸಿದ್ದ ಈ ಸಮಾರಂಭದಲ್ಲಿ ಸಾಹಿತ್ಯ ಕ್ಷೇತ್ರದ ಸಾಧಕರಾದ ಶಿವಬಸಪ್ಪ ಹೆಚ್ ಎಲ್, ದೇವರಾಜು ಪಿ ಚಿಕ್ಕಳ್ಳಿ ಹಾಗೂ ಸಂಗೀತ ಕ್ಷೇತ್ರದ ಸಾಧಕಿಯಾದ ಶಾಂತಕುಮಾರಿ ಅವರುಗಳಿಗೆ "ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿ ಸದ್ಭಾವನಾ ಪ್ರಶಸ್ತಿ" ಪ್ರದಾನ ಮಾಡಲಾಯಿತು.

ಮೈಸೂರು ಬಸವೇಶ್ವರ ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಬಸವರಾಜೇಂದ್ರ ಸ್ವಾಮಿ ಎಲ್ಲರನ್ನೂ ಸ್ವಾಗತಿಸಿ ನಿರೂಪಣೆಯನ್ನೂ ಮಾಡಿದರು.

ರಂಗನಾಥ್ ಮೈಸೂರು, ಆರ್ ಕೆ ಸ್ವಾಮಿ, ವೀರಭದ್ರ ಸ್ವಾಮಿ, ಸುಶೀಲ, ಸುಮ, ರೇಖಾ ಮುಂತಾದವರು ಉಪಸ್ಥಿತರಿದ್ದರು.

# ರೆವಿನ್ಯೂ ನಿವೇಶನದ ಮನೆಗಳಿಗೂ ಖಾತೆ ಮಾಡುವಂತೆ ಆಗ್ರಹ

**ಮೈಸೂರು:** ನಗರದ ವಿವಿಧೆಡೆ ತಮ್ಮ ಜಮೀನುಗಳಲ್ಲಿ ರೆವಿನ್ಯೂ ನಿವೇಶನ ರಚಿಸಿ ಹಲವರಿಗೆ ಮಾರಾಟ ಮಾಡಿರುವವರ ಹೆಸರಿನಲ್ಲೇ ಜಮೀನಿನ ಆರ್ಟಿಸಿ, ಇಸಿಗಳಿವೆ. ಹೀಗಾಗಿ ಇವರು ಮನೆ ನಿರ್ಮಿಸಲು, ನಿವೇಶನ ಮಾರಾಟ ಮಾಡಲು ಹೊರಟವರಿಂದ ಸುಲಿಗೆ ಮಾಡುತ್ತಿದ್ದಾರೆ. ಹೀಗಾಗಿ ರೆವಿನ್ಯೂ ನಿವೇಶನದಾರರು, ಅದರಲ್ಲಿ ಮನೆ ನಿರ್ಮಿಸಿರುವವರಿಗೆ ಪಾಲಿಕೆ ಖಾತೆ ಮಾಡಿಕೊಡಲಿ ಎಂದು ಬಿಜೆಪಿ ಜಿಲ್ಲಾ ವಕ್ತಾರ ಡಾ.ಕೆ. ವಸಂತ್ಕುಮಾರ್ ಆಗ್ರಹಿಸಿದರು.



ನಗರದಲ್ಲಿ ಸುದ್ದಿಗಾರರೊಡನೆ ಮಾತನಾಡಿ, ಮುಡಾದ ಬೇಜವಾಬ್ದಾರಿತನದಿಂದಾಗಿ ಸ್ವತಃ ನಿವೇಶನ ಹಂಚದಿದುದರ ಲಾಭ ಪಡೆದ ಹಲವಾರು ಜಮೀನು ಮಾಲೀಕರು ಬೇಕೆಂದ ರೀತಿ ನಿವೇಶನ ರಚಿಸಿ ರೆವಿನ್ಯೂ ಬಡಾವಣೆಗಳನ್ನಾಗಿಸಿ ಒಬ್ಬೊಬ್ಬರಿಗಲ್ಲದೇ ಒಂದೇ ನಿವೇಶನ ಮರ್ನಾಲ್ಕು ಮಂದಿಗೆ ಮಾರಾಟ ಮಾಡಿರುವ ಉದಾಹರಣೆ ಇವೆ. ಈ ನಿವೇಶನ ಖರೀದಿಸಿದವರು ಮಾರಾಟ ಮಾಡಲೋ, ಮನೆ ಕಟ್ಟಲೋ ಹೋದಾಗ ಮೂಲ ಜಮೀನು ಮಾಲೀಕರು ಆರ್ಟಿಸಿ, ಇಸಿಗಳು ತಮ್ಮ ಹೆಸರಿನಲ್ಲೇ ಇರುವ ಕಾರಣ ಬೆದರಿಕೆ ಹಾಕುವುದು, ವಸೂಲಿ ಮಾಡುವುದು ಸಹಾ ನಡೆದಿದೆ. ಈ ಸಮಸ್ಯೆ ನಗರದ ಬಹುತೇಕ ಎಲ್ಲ ಕಂದಾಯ ಬಡಾವಣೆಗಳಲ್ಲಿಯೂ ಇದ್ದು, ಇದರೊಡನೆ ನಿವಾಸಿಗಳು ಮೂಲ ಸೌಕರ್ಯ ಇಲ್ಲದೇ ಸಮಸ್ಯೆ ಎದುರಿಸುವಂತಾಗಿದೆ. ಹೀಗಾಗಿ ಸಂಬಂಧಿಸಿದ ಮುಡಾ, ಪಾಲಿಕೆ ಅಧಿಕಾರಿಗಳು ಖುದ್ದಾಗಿ ಅಲ್ಲಿಗೆ ಭೇಟಿ ನೀಡಿ ಸಮಸ್ಯೆ ಬಗೆಹರಿಸಬೇಕೆಂದು ಆಗ್ರಹಿಸಿದರು.

ಜೊತೆಗೆ, ಮೂಲ ಜಮೀನು ಮಾಲೀಕರ ಹೆಸರನ್ನು ಆರ್ಟಿಸಿ, ಇಸಿಗಳಿಂಥ ತೆಗೆದುಹಾಕಬೇಕು. ನಿವಾಸಿಗಳ ಹೆಸರಿಗೆ ಖಾತೆ ಮಾಡಿಕೊಡಬೇಕು. ಈ ರೀತಿ ಸುಮಾರು 100 ರೆವಿನ್ಯೂ ಬಡಾವಣೆ ನಗರದ ರಿಂಗ್ ರಸ್ತೆ ಒಳಗೇ ಇದ್ದು, ಅಧಿಕಾರಿಗಳು ಇವರಿಗೆ ಆಗುತ್ತಿರುವ ಕಿರುಕುಳ ರವಿಸಬೇಕು. ಈಗ ಇವರ ಅಸಹಾಯಕತೆ ದುರುಪಯೋಗ ಪಡಿಸಿಕೊಂಡು ವಸೂಲಿ ಮಾಡುವುದನ್ನು ಅಧಿಕಾರಿಗಳು ಬಿಡಬೇಕು. ಇತ್ತ ಸರ್ಕಾರ ಗಮನ ಹರಿಸಬೇಕೆಂದು ಆಗ್ರಹಿಸಿದರು. ಇನ್ನಿತರ ಪದಾಧಿಕಾರಿಗಳಾದ ಮೋಹನ್, ಎಂ.ಕೆ.ಶಂಕರ್ ಇದ್ದರು.

# ತಾಂತ್ರಿಕತೆಗೆ ತಕ್ಕ ಕೌಶಲ ಬೆಳೆಸಿಕೊಳ್ಳಿ: ಡಿ.ರವಿಶಂಕರ್



**ಮೈಸೂರು:** ವಿದ್ಯಾರ್ಥಿಗಳು ಜೀವನ ರೂಪಿಸಿಕೊಳ್ಳಲು ಪದವಿ ಪಡೆದಿದ್ದರೆ ಸಾಲದು, ತಾಂತ್ರಿಕ ಯುಗಕ್ಕೆ ತಕ್ಕಂತೆ ಕೌಶಲ್ಯಾಭಿವೃದ್ಧಿ ವಿಷಯಗಳನ್ನು ಕಲಿಯಬೇಕು ಎಂದು ಕೆಎಸ್‌ಒಯು ವ್ಯವಸ್ಥಾಪನಾ ಮಂಡಳಿ ಸದಸ್ಯ, ಶಾಸಕ ಡಿ.ರವಿಶಂಕರ್ ಹೇಳಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವತಿಯಿಂದ ಕಾವೇರಿ ಸಭಾಂಗಣದಲ್ಲಿ ಶುಕ್ರವಾರ ಆಯೋಜಿಸಿದ್ದ ಎನ್ಸಿವಿಇಟಿ ದ್ವಿ–ಮಾನ್ಯತೆ : ಕೆಎಸ್‌ಒಯುನಲ್ಲಿ ಕೌಶಲ್ಯಾಭಿವೃದ್ಧಿ, ಮೌಲ್ಯಮಾಪನ, ಮತ್ತು ಪ್ರಮಾಣಪತ್ರ ನೀಡಿಕೆ ಕಾರ್ಯಗಳ ಅನುಷ್ಠಾನ ಕುರಿತು ಒಂದು ದಿನದ ಸಾಮರ್ಥ್ಯ ವೃದ್ಧಿ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಹಿಂದಿನ ಶಿಕ್ಷಣ ವ್ಯವಸ್ಥೆಯಲ್ಲಿ ಪದವಿ ಪಡೆದಿದ್ದರೆ ಸಾಕಿತ್ತು.ಆದರೀಗ ಕಾಲ ಬದಲಾಗಿದ್ದು, ಪದವಿಯನ್ನು ಪಡೆದರು ಸಾಲದು,ಜೀವನ ರೂಪಿಸಿಕೊಳ್ಳಲು ಕೌಶಲ್ಯಾಭಿವೃದ್ಧಿಯು ಅಗತ್ಯವಾಗಿದೆ. ತಾಂತ್ರಿಕ ಹಾಗೂ ಎಐ ಯುಗದಲ್ಲಿ ವಿದ್ಯಾರ್ಥಿಗಳಿಗೆ ಅನೇಕ ಸವಾಲು ಎದುರಾಗುತ್ತಿದೆ. ಅದನ್ನು ಸವಾಲು ಎಂದು ಸ್ವೀಕರಿಸಿದರೆ, ಜೀವನದಲ್ಲಿ ಮಾರ್ಗ ಬದಲಾಯಿಸುವ ಶಕ್ತಿ ಎಂದು ಮುನ್ನುಗಬೇಕು ಎಂದು ಹೇಳಿದರು.

ದೇಶದ ಅಭಿವೃದ್ಧಿಗೆ ಮುಖ್ಯವಾಗಿ ಶಿಕ್ಷಣ ಮತ್ತು ಆರೋಗ್ಯ ಮುಖ್ಯವಾಗಿದ್ದು, ಇದರಿಂದಲ್ಲೇ ಕ್ರಾಂತಿಕಾರಿ ಬದಲಾವಣೆಗಳಾಗಲು ಸಾಧ್ಯವಾಗಲಿದೆ. ಪ್ರಪಂಚದಲ್ಲಿ ಭಾರತ ಎಲ್ಲ ಕ್ಷೇತ್ರದಲಿಯೂ ಸಾಧನೆ ಮಾಡುತ್ತಿದೆ. ಯುವಜನಾಂಗವು ಶಿಕ್ಷಣದ ಮಹತ್ವ ಅರಿತು ಮುಂದೆ ಸಾಗಬೇಕು. ಕೃಷಿ, ಆರೋಗ್ಯ, ಕೈಗಾರಿಕಾ ಸೇರಿದಂತೆ ಹಲವು ಕ್ಷೇತ್ರದಲ್ಲಿ ಎಐ ಮೂಲಕ ಪ್ರಗತಿ ಸಾಧಿಸಲಾಗುತ್ತಿದೆ ಎಂದರು.

ಎನ್ ಸಿವಿಇಟಿ ಕಾರ್ಯಕಾರಿ ಸದಸ್ಯ ಪ್ರೊ. ಅಶೋಕ ಕುಮಾರ್ ಗಬಾ, ಎನ್ ಸಿವಿಇಟಿಯ ಸಿನಿಯರ್ ಕನ್ಸಲ್ಟಂಟ್ ಅಮಿತ್ ಶರ್ಮಾ, ಎಆರ್ ಟಿಜೆಎಸ್ ಸಿಇಒ ಎಸ್.ವಿ.ಶ್ರೀಕಾಂತ್, ಕುಲಪತಿ ಪ್ರೊ.ಎ.ಪಿ.ಜ್ಞಾನಪ್ರಕಾಶ್, ಕುಲಸಚಿವರಾದ ಡಾ.ಸಿ.ಎಸ್.ಆನಂದ್ ಕುಮಾರ್, ಪ್ರೊ.ಎಸ್.ಕೆ.ನವೀನ್ ಕುಮಾರ್, ಡೀನ್ ಪ್ರೊ.ಎಂ.ರಾಮನಾಥಂ ನಾಯ್ಡು, ಡಾ.ಎ.ಆನಂದ್ ಗೌಡ, ಸಿಐಕ್ಯೂಎ ನಿರ್ದೇಶಕ ಪ್ರೊ.ಎಸ್.ನಿರಂಜನ್ ರಾಜ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

## ಮದ್ದೂರಿನಲ್ಲಿ ಜಿಲ್ಲಾ ಮಟ್ಟದ ಪ್ರಜಾ ಸೇವೆ ಆಂದೋಲನ

# ಜನರ ಮನೆ ಬಾಗಿಲಿಗೇ ಆಡಳಿತ ತಲುಪಿಸುವುದು ಸರ್ಕಾರದ ಉದ್ದೇಶ : ಸಚಿವ ಚಲುವರಾಯಸ್ವಾಮಿ



**ಮಂಡ್ಯ:** ಜನಸಾಮಾನ್ಯರ ಸಮಸ್ಯೆಗಳಿಗೆ ತ್ವರಿತವಾಗಿ ಸ್ಪಂದಿಸಿ, ಸರ್ಕಾರದ ಸೇವೆಗಳನ್ನು ಜನರ ಮನೆ ಬಾಗಿಲಿಗೇ ತಲುಪಿಸುವ ಉದ್ದೇಶದಿಂದ ?ಪ್ರಜಾ ಸೇವೆ? ಆಂದೋಲನವನ್ನು ರಾಜ್ಯದಲ್ಲಿ ಜಾರಿಗೆ ತರಲಾಗಿದೆ ಎಂದು ಜಲಸಂಪನ್ಮೂಲ ಹಾಗೂ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಮದ್ದೂರು ತಾಲ್ಲೂಕು ಕ್ರೀಡಾಂಗಣದಲ್ಲಿ ನಡೆದ ತಾಲ್ಲೂಕು ಮಟ್ಟದ ಜಿಲ್ಲಾ ?ಪ್ರಜಾ ಸೇವೆ? ಆಂದೋಲನ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸುವ ಮೂಲಕ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ನೂತನ ಸರ್ಕಾರ ಅಧಿಕಾರಕ್ಕೆ ಬಂದು 90 ದಿನಗಳು ಪೂರ್ಣಗೊಂಡಿದ್ದು, ಜನರು ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಕಚೇರಿಯಿಂದ ಕಚೇರಿಗೆ ಅಲೆದಾಡುವ ಪರಿಸ್ಥಿತಿ ತಪ್ಪಿಸುವ ಉದ್ದೇಶದಿಂದ ?ಪ್ರಜಾ ಸೇವೆ? ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ. ದೇಶದಲ್ಲೇ ಪ್ರಥಮ ಬಾರಿಗೆ ಕರ್ನಾಟಕದಲ್ಲಿ ಈ ರೀತಿಯ ವ್ಯವಸ್ಥೆಯನ್ನು ರೂಪಿಸಲಾಗಿದೆ ಎಂದರು.

ಮಾನ್ಯ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರ ವಿಶೇಷ ಕಾಳಜಿಯಿಂದ ರೂಪುಗೊಂಡಿರುವ ?ಪ್ರಜಾ ಸೇವೆ? ವ್ಯವಸ್ಥೆಯಡಿ ಐಎಎಸ್ ದರ್ಜೆಯ ಅಧಿಕಾರಿಯನ್ನು ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಮುಖ್ಯಮಂತ್ರಿಗಳು, ಸಚಿವರು, ಶಾಸಕರು ಹಾಗೂ ಜಿಲ್ಲಾ ಮತ್ತು ತಾಲ್ಲೂಕು ಆಡಳಿತದ ಅಧಿಕಾರಿಗಳು ಸಾರ್ವಜನಿಕರ ಕುಂದು–ಕೊರತೆಗಳಿಗೆ ತ್ವರಿತವಾಗಿ ಸ್ಪಂದಿಸಲಿದ್ದಾರೆ ಎಂದು ತಿಳಿಸಿದರು. ಕಳೆದ ಮೂರು ವರ್ಷಗಳಿಂದ ಸಾರ್ವಜನಿಕರೊಂದಿಗೆ ನಿರಂತರವಾಗಿ ಸಭೆ ನಡೆಸಿ ಅಹವಾಲುಗಳನ್ನು ಸ್ವೀಕರಿಸಲಾಗುತ್ತಿದ್ದರೂ ಅರ್ಜಿಗಳ ಸಂಖ್ಯೆ ಕಡಿಮೆಯಾಗಿಲ್ಲ. ಸಾರ್ವಜನಿಕರು ತಮ್ಮ ಸಮಸ್ಯೆಗಳ ಅರ್ಜಿಗಳನ್ನು ಹಿಡಿದು ಕಚೇರಿಗಳ ಸುತ್ತಾಡುವುದನ್ನು ತಪ್ಪಿಸುವ ಉದ್ದೇಶದಿಂದ ಪ್ರತ್ಯೇಕ ವ್ಯವಸ್ಥೆಯ ಮೂಲಕ ಸಮಸ್ಯೆಗಳನ್ನು ಬಗೆಹರಿಸಲು ಕ್ರಮ ಕೈಗೊಳ್ಳಲಾಗಿದೆ ಎಂದರು.

ಜಿಲ್ಲೆಯಲ್ಲಿ ಸುಮಾರು 24 ಸಾವಿರ ಸಾರ್ವಜನಿಕ ಅಹವಾಲುಗಳನ್ನು ಪರಿಹರಿಸಲಾಗಿದೆ. ಐದು ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ಸುಮಾರು ?1,500 ಕೋಟಿ ವೆಚ್ಚ ಮಾಡಲಾಗಿದೆ. ಮಕ್ಕಳಿಗೆ ಉಚಿತ ಬಸ್ ಪಾಸ್ ಸೇರಿದಂತೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ. ರೈತರಿಗೆ ಶೇ.50ರಷ್ಟು ಸಹಾಯಧನ ನೀಡಲಾಗುತ್ತಿದೆ ಎಂದು ಸಚಿವರು ಹೇಳಿದರು.

ಮದ್ದೂರು ಪಟ್ಟಣದಲ್ಲಿ ಸುಮಾರು ?137 ಕೋಟಿ ವೆಚ್ಚದಲ್ಲಿ ರಸ್ತೆ ಅಗಲೀಕರಣ ಕಾಮಗಾರಿ ಕೈಗೊಳ್ಳಲಾಗಿದೆ. ಮಾನ್ಯ ಮುಖ್ಯಮಂತ್ರಿಗಳಾದ ಡಿ.ಕೆ. ಶಿವಕುಮಾರ್ ಅವರ ನಾಯಕತ್ವದಲ್ಲಿ ಜಿಲ್ಲೆಯಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದರು.

ಜನರ ವೈಯಕ್ತಿಕ ಹಾಗೂ ಸಾರ್ವಜನಿಕ ಸಮಸ್ಯೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರತಿ ತಿಂಗಳ ಮೊದಲ ಹಾಗೂ ಮೂರನೇ ಶನಿವಾರ ಜಿಲ್ಲೆಯ ಪ್ರತಿಯೊಂದು ತಾಲ್ಲೂಕಿನಲ್ಲೂ ಪ್ರಜಾ ಸೇವೆ? ಆಂದೋಲನ ಕಾರ್ಯಕ್ರಮ ನಡೆಸಲಾಗುವುದು. ಅಧಿಕಾರಿಗಳು ಅರ್ಜಿಗಳನ್ನು ಕೇವಲ ಸ್ವೀಕರಿಸುವುದಕ್ಕೆ ಸೀಮಿತವಾಗದೆ, ಕಾನೂನುಬದ್ಧವಾಗಿ ಸಾಧ್ಯವಿರುವ ಸಮಸ್ಯೆಗಳಿಗೆ ಸ್ಥಳದಲ್ಲೇ ಪರಿಹಾರ ಕಲ್ಪಿಸಲು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು.

ಸಾರ್ವಜನಿಕರು ಅರ್ಜಿಯಲ್ಲಿ ತಮ್ಮ ಸಮಸ್ಯೆಯ ಸಂಪೂರ್ಣ ವಿವರ ಹಾಗೂ ಮೊಬೈಲ್ ಸಂಖ್ಯೆಯನ್ನು ನಮೂದಿಸಬೇಕು. ಜಿಲ್ಲೆಯ ಅಭಿವೃದ್ಧಿ ಹಾಗೂ ಜನರ ಸಮಸ್ಯೆಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಸರ್ಕಾರ ಬದ್ಧವಾಗಿದೆ. ಕಾನೂನುಬದ್ಧವಾಗಿ ರೈತರ ಪರವಾಗಿ ಸರ್ಕಾರ ಕಾರ್ಯನಿರ್ವಹಿಸಲಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮದ್ದೂರು ವಿಧಾನಸಭಾ ಕ್ಷೇತ್ರದ ಶಾಸಕ ಕೆ.ಎಂ. ಉದಯ ಅವರು ಮಾತನಾಡಿ, ಗ್ರಾಮೀಣ ಪ್ರದೇಶದ ಜನರಿಗೆ ಸರ್ಕಾರದ ಸೌಲಭ್ಯಗಳನ್ನು ತಲುಪಿಸುವುದು ಹಾಗೂ ಅವರ ಸಮಸ್ಯೆಗಳನ್ನು ತ್ವರಿತವಾಗಿ ಪರಿಹರಿಸುವ ಉದ್ದೇಶದಿಂದ ?ಪ್ರಜಾ ಸೇವೆ? ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದರು. ಜನರು ತಮ್ಮ ಸಮಸ್ಯೆಗಳನ್ನು ಅಧಿಕಾರಿಗಳ ಗಮನಕ್ಕೆ ತಂದು ಪರಿಹಾರ ಕಂಡುಕೊಳ್ಳಲು ಅಧಿಕಾರಿಗಳೊಂದಿಗೆ ಕೈಜೋಡಿಸಬೇಕು. ಸರ್ಕಾರದ ಯೋಜನೆಗಳು ಹಾಗೂ ಸೌಲಭ್ಯಗಳು ಅರ್ಹ ಫಲಾನುಭವಿಗಳಿಗೆ ತಲುಪುವಂತೆ ಎಲ್ಲರೂ ಸಹಕರಿಸಬೇಕು ಎಂದು ಮನವಿ ಮಾಡಿದರು. ಕಾರ್ಯಕ್ರಮದಲ್ಲಿ ಜಿಲ್ಲಾಧಿಕಾರಿ ಡಾ. ಕುಮಾರ, ಜಿಲ್ಲಾ ಪಂಚಾಯತ್ ಉಸ್ತುವಾರಿ ಕಾರ್ಯದರ್ಶಿ ಮನೋಜ್ ಕುಮಾರ್ ಮೀನಾ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಆರ್. ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ವಿ.ಜೆ. ಶೋಭರಾಣಿ, ಅಪರ ಜಿಲ್ಲಾಧಿಕಾರಿ ಶಿವಾನಂದ ಮೂರ್ತಿ, ಉಪವಿಭಾಗಾಧಿಕಾರಿ ಶಿವಮೂರ್ತಿ ಸೇರಿದಂತೆ ತಾಲ್ಲೂಕು ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ವಿವಿಧ ಇಲಾಖೆಗಳ ವತಿಯಿಂದ ಸಾರ್ವಜನಿಕರು ಹಾಗೂ ರೈತರಿಂದ ಕುಂದು–ಕೊರತೆಗಳು ಮತ್ತು ಅಹವಾಲುಗಳನ್ನು ಸ್ವೀಕರಿಸಿ, ಸಾಧ್ಯವಾದಷ್ಟು ಸಮಸ್ಯೆಗಳನ್ನು ಸ್ಥಳದಲ್ಲೇ ಪರಿಹರಿಸಲು ಅಧಿಕಾರಿಗಳು ಕ್ರಮ ಕೈಗೊಂಡರು.

# ಸೆ.10 ರಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ನೇರ ಸಂದರ್ಶನ

**ಮಡಿಕೇರಿ:** ಕೊಡಗು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಸೆಪ್ಟೆಂಬರ್, 10 ರಂದು ಬೆಳಗ್ಗೆ 10 ರಿಂದ ಮಧ್ಯಾಹ್ನ 1 ಗಂಟೆವರೆಗೆ ಕಲ್ಯಾಣಿ ಮೋಟಾರ್ಸ್ ಅರೆನಾ ಶೋರೂಮ್, ಬಸಪ್ಪ ಥಿಯೇಟರ್ ಬಿಲ್ಡಿಂಗ್, ದಾಸವಾಳ ರಸ್ತೆ, ವಿವಸ್ ಆಸ್ಪತ್ರೆ ಎದುರು, ಮಡಿಕೇರಿ, ಇಲ್ಲಿ “ನೇರ ಸಂದರ್ಶನ ನಡೆಯಲಿದೆ.



ಈ ನೇರ ಸಂದರ್ಶನದಲ್ಲಿ ಕಲ್ಯಾಣಿ ಮೋಟಾರ್ಸ್ ಮಾರುತಿ ಸುಜುಕಿ ಅರೆನಾ ಹಾಗೂ ನೆಕ್ಸಾ–ಮಡಿಕೇರಿ, ಇವರು ತಮ್ಮ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳಲಿದ್ದಾರೆ. ಈ ನೇರ ಸಂದರ್ಶನದಲ್ಲಿ ರಿಲೇಷನ್‌ಶಿಪ್ ಮ್ಯಾನೇಜರ್, ಆಫೀಸ್ ಬಾಯ್, ಕಾರ್ ಕೇರ್ ಎಕ್ಸಿಕ್ಯೂಟಿವ್, ಟೆಕ್ನಿಷಿಯನ್ಸ್, ಹಾಗೂ ಸರ್ವಿಸ್ ಅಡ್ವೈಸರ್‌ಗಳು ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಲಾಗುವುದು. ಈ ಹುದ್ದೆಗೆ ಪಿಯುಸಿ, ಪದವಿ, ಡಿಪ್ಲೋಮಾ ಹಾಗೂ ಐಟಿಐ ವಿದ್ಯಾರ್ಹತೆ ಹೊಂದಿರುವ ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಅರ್ಹರಾಗಿರುತ್ತಾರೆ. ಪುರುಷ ಅಭ್ಯರ್ಥಿಗಳಿಗೆ ಡಿಎಲ್ ಹೊಂದಿರುವವರಿಗೆ ಆದ್ಯತೆ ನೀಡಲಾಗುವುದು. ಅಭ್ಯರ್ಥಿಗಳು ಭಾಗವಹಿಸಿ ಉದ್ಯೋಗದ ನೆರವನ್ನು ಪಡೆಯಬಹುದಾಗಿದೆ. ವಯೋಮಿತಿ: 20 ರಿಂದ 35 ವರ್ಷಗಳು. ಅಭ್ಯರ್ಥಿಗಳು ವಿದ್ಯಾರ್ಹತೆಯ ಮೂಲ ದಾಖಲಾತಿಗಳು, ಅನುಭವ ಪ್ರಮಾಣಪತ್ರ (ಅನ್ವಯಿಸುವವರಿಗೆ ಮಾತ್ರ) ಹಾಗೂ ಸ್ವ–ವಿವರಗಳ ಪ್ರತಿಗಳೊಂದಿಗೆ ನೇರ ಸಂದರ್ಶನಕ್ಕೆ ಹಾಜರಾಗುವಂತೆ ಜಿಲ್ಲಾ ಉದ್ಯೋಗಾಧಿಕಾರಿಯವರು ತಿಳಿಸಿದ್ದಾರೆ. ಹೆಚ್ಚಿನ ಮಾಹಿತಿಗೆ ಜಾಬ್ ಕೋಆರ್ಡಿನೇಟರ್ 8296020826 ಇವರನ್ನು ಸಂಪರ್ಕಿಸಬಹುದು ಉದ್ಯೋಗಾಧಿಕಾರಿ ಅವರು ತಿಳಿಸಿದ್ದಾರೆ.

# ಕಣಕಣದಲ್ಲೂ ಕಲ್ಪತರು



ಆಧುನಿಕ ತಟ್ಟೆಯಿಂದ ಮಾಯವಾದ ಸಿರಿಧಾನ್ಯಗಳು ಕೇವಲ ಆಹಾರವಲ್ಲ, ನಮ್ಮ ಜೀವಪರಂಪರೆಯ ಪುರಾತನ ಪತ್ರಾಗಾರ. ನವಣೆ, ಸಾಮೆ, ಊದಲು, ಬರಗು, ಕೊರಲೆಯ ಒಡಲಲ್ಲಿರುವ ಬೀಟಾ–ಗ್ಲುಕಾನ್, ಅರಾಬಿನೋಕ್ಸೈಲಾನ್ ಎಂಬ ಕರಗುವ ತಂತುಗಳು ಕರುಳಿನ ಅಂತರಂಗದಲ್ಲಿ ಲ್ಯಾಕ್ಟೋ, ಬೈಫಿಡೋ ಎಂಬ ಮಿತ್ರ ಸೂಕ್ಷ್ಮ ಜೀವಿಗಳಿಗೆ ಪ್ರಾಣಾಮೃತವಾಗುತ್ತವೆ. ಅವು ಹುದುಗಿ ಬ್ಯುಟೈರೇಟ್, ಪ್ರೊಪಿಯೊನೇಟ್ ಎಂಬ ಲಘು ಕೊಬ್ಬಿನಾಮ್ಲಗಳನ್ನು ಸೃಷ್ಟಿಸಿ ಕರುಳಿನ ಒಳಪೊರೆಯನ್ನು ವಜ್ರಕವಚದಂತೆ ದೃಢಗೊಳಿಸುತ್ತವೆ. ಲೀಕಿ ಗಟ್ ಮುಚ್ಚಿ, ಉರಿಯೂತ ಶಮನವಾಗಿ, ರೋಗರಕ್ಷೆ ಪುನರುಜ್ಜೀವನಗೊಳ್ಳುತ್ತದೆ ಎಂಬುದು ಸ್ಪ್ರಿಂಗರ್ ನೇಚರ್ ನಿಲುವು.

ಇದರ ಫೆರಿಕ್ ಆಮ್ಲ, ನಿರೋಧಕ ಪಿಷ್ಟವು ಆಲ್ಫಾ–ಅಮೈಲೇಸ್ ಕ್ರಿಯೆಯನ್ನು ಮಂದಗೊಳಿಸಿ ರಕ್ತದಲ್ಲಿ ಸಕ್ಕರೆಯ ನಿಧಾನ ಆರೋಹಣಕ್ಕೆ ಕಾರಣವಾಗಿ ಇನ್ಸುಲಿನ್ ಸಂವೇದನೆ ಚುರುಕುಗೊಳಿಸುತ್ತದೆ. ಜಿನುಗು ಸೂಚ್ಯಂಕ ತಗ್ಗಿ, ಕೊಬ್ಬು ಶೇಖರಣೆ ತಡೆಯಾಗುತ್ತದೆ, ಕೆಟ್ಟ ಕೊಲೆಸ್ಟ್ರಾಲ್ ಕರಗುತ್ತದೆ. ಎಂಟು ತಾಸು ನೆನೆಸಿ ಮೊಳಕೆಯೊಡೆಸಿದರೆ ಪೋಷಕಾಂಶ ಲಭ್ಯತೆ ದ್ವಿಗುಣಗೊಂಡು ಕಬ್ಬಿಣ–ಸತು ಹೀರುವಿಕೆ ಹೆಚ್ಚುತ್ತದೆ, ರಕ್ತಕಾಂತಿ ವೃದ್ಧಿಸುತ್ತದೆ.

ಇದು ಕೇವಲ ಪಥ್ಯವಲ್ಲ, ಪರಿಸರ–ಆರ್ಥಿಕ ಪ್ರಜ್ಞೆ. ಅಲ್ಪ ಜಲಕ್ಕೆ ನಗುವ ಈ ಬೆಳೆಗಳು ರೈತನ ಬದುಕಿಗೆ ಭದ್ರತೆಯ ಭರವಸೆ, ಮಣ್ಣಿನ ಒಲುಮೆ ಉಳಿಸುತ್ತವೆ, ಕೃಷಿ ವೆಚ್ಚ ಇಳಿಸುತ್ತವೆ. ಮಹಿಳಾ ಸಂಘಗಳ ಕೈಯಲ್ಲಿ ಲಡ್ಡು, ಮಿಶ್ರಣವಾಗಿ ಮಾರುಕಟ್ಟೆ ಸೇರಿದರೆ ಗ್ರಾಮೀಣ ಸ್ವಾವಲಂಬನೆಯ ದೀಪ ಬೆಳಗುತ್ತದೆ. ಶಾಲಾ ಬಿಸಿಯೂಟದಲ್ಲಿ ವಾರಕ್ಕೆರಡು ದಿನ ಸಾಮೆ ಉಪ್ಪಿಟ್ಟು, ನವಣೆ ಗಂಜಿ ಬಂದರೆ ಮಕ್ಕಳ ರಕ್ತಹೀನತೆ ಮಾಯವಾಗಿ ಏಕಾಗ್ರತೆ ಅರಳುತ್ತದೆ, ಕಲಿಕಾ ಸಾಮರ್ಥ್ಯ ಹೆಚ್ಚುತ್ತದೆ.

ಬೆಳಗಿಗೆ ಕೊರಲೆ ಗಂಜಿ–ಬೆಲ್ಲ, ಮಧ್ಯಾಹ್ನ ಸಾಮೆ ಅನ್ನ–ಹುರುಳಿ ಸಾರು, ಇರುಳಿಗೆ ನವಣೆ ದೋಸೆ–ಪುದೀನ ಚಟ್ನಿ, ತಿಂಡಿಗೆ ಊದಲು ನಿಪ್ಪಟ್ಟು. ಮನೆಯಲ್ಲಿ ಧಾನ್ಯ ಕುಡಿಕೆ ಇಟ್ಟು ವಾರದ ಪಟ್ಟಿ ಬರೆದರೆ ಸಾಕು. ಪುರಾತನ ಕಣದಲ್ಲೇ ಅಡಗಿದೆ ನವ ಭಾರತದ ದೀರ್ಘಾಯುಷ್ಯದ ಮಂತ್ರ, ಸಹಸ್ರಾಯುಷ್ಯದ ಬೀಗದ ಕೈ, ಆರೋಗ್ಯದ ಅಮೃತಬುತ್ತಿ.

ಅಂಕಣ-14

ಸಾವು ಸಂಕಟಪಡುವ ಸಂಗತಿಗಳು..!



|ಡಾ.ಸುಧಾಕರ.ಜಿ.ಲಕ್ಕವಳ್ಳಿ

# ಹನೂರು ಶೂಟೌಟ್ ಪ್ರಕರಣ: ನ್ಯಾಯಾಂಗ ತನಿಖೆಗೆ ರೈತ, ದಲಿತ ಸಂಘಟನೆಗಳ ಒತ್ತಾಯ



**ಹನೂರು:** ತಾಲೂಕಿನ ಅರಣ್ಯ ಪ್ರದೇಶದಲ್ಲಿ ನಡೆದ ಶೂಟೌಟ್ ಪ್ರಕರಣ ನಡೆದು 20 ದಿನ ಕಳೆದರೂ ಸತ್ಯಾಂಶ ಹೊರಬಂದಿಲ್ಲ. ಪ್ರಕರಣದ ಸಿಐಡಿ ತನಿಖೆ ಮೇಲೆ ನಂಬಿಕೆ ಇಲ್ಲ, ನ್ಯಾಯಾಂಗ ಅಥವಾ ಸಿಬಿಐ ತನಿಖೆ ನಡೆಸಬೇಕು ಎಂದು ರೈತ ಮತ್ತು ದಲಿತ ಸಂಘಟನೆಗಳು ಒತ್ತಾಯಿಸಿವೆ.

ಪಟ್ಟಣದ ಆರ್.ಎಂ.ಸಿ ಆವರಣದಲ್ಲಿ ಶುಕ್ರವಾರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಕಿಸಾನ್ ಸಂಘ, ಕರ್ನಾಟಕ ರಾಜ್ಯ ರೈತ ಸಂಘ ಮತ್ತು ಡಿಎಸ್‌ಎಸ್ ಮುಖಂಡರು ಮಾತನಾಡಿದರು.

ಕಿಸಾನ್ ಸಂಘದ ರೈತ ಮುಖಂಡ ಬೋಸ್ಕೋ ಮಾತನಾಡಿ, "ನಾವು ಈ ಶೂಟೌಟ್ ಪ್ರಕರಣದಲ್ಲಿ ಸಂತ್ರಸ್ತ ಕುಟುಂಬಗಳ ಪರವಾಗಿ ನಿಂತಿದ್ದೇವೆ. ಈಗಾಗಲೇ ಸಿಐಡಿ ತನಿಖೆ ನಡೆಯುತ್ತಿದೆ, ಆದರೆ ಆ ತನಿಖೆ ಮೇಲೆ ನಮಗೆ ಅನುಮಾನವಿದೆ. ಅರಣ್ಯ ಸಿಬ್ಬಂದಿ ಬಹಳ ಹತ್ತಿರದಿಂದ ಗುಂಡು ಹಾರಿಸಿದ್ದಾರೆ. ಅಷ್ಟು ಹತ್ತಿರದಿಂದ ಶೂಟ್ ಮಾಡುವ ಅಗತ್ಯವಿತ್ತಾ? ಅವರನ್ನು ಬಂಧಿಸಿ ಜೈಲಿಗೆ ಕಳುಹಿಸಬಹುದಿತ್ತು. ಆದ್ದರಿಂದ ಸತ್ಯಾಸತ್ಯತೆ ಹೊರಬರಲು ನ್ಯಾಯಾಂಗ ತನಿಖೆಯೇ ಆಗಬೇಕು. ಆ ಕುಟುಂಬಗಳಿಗೆ ನ್ಯಾಯ ಸಿಗಬೇಕು, ತಪ್ಪಿತಸ್ಥರು ಯಾರೇ ಆಗಲಿ ಶಿಕ್ಷೆಯಾಗಬೇಕು" ಎಂದು ಹೇಳಿದರು.

ವಿಧಾನಸಭೆ ಅಧಿವೇಶನದಲ್ಲಿ ಅರಣ್ಯ ಸಚಿವರು 12 ಜನರ ತಂಡ ಬೇಟೆಗಾರರನ್ನು ಪತ್ತೆಹಚ್ಚಲು ತೆರಳಿದ್ದರು ಎಂದು ಅವರೇ ಒಪ್ಪಿಕೊಂಡಿದ್ದಾರೆ. ಶೂಟೌಟ್ ಪ್ರಕರಣ ಸಂಬಂಧ ಆ 12 ಜನರ ಮೇಲೆ ಪ್ರಕರಣ ದಾಖಲಿಸಿ ಶಿಕ್ಷೆ ವಿಧಿಸಬೇಕು ಎಂದು ಅವರು ಒತ್ತಾಯಿಸಿದರು.

ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡ ಮಾದಪ್ಪ ಮಾತನಾಡಿ, "ಮುಖ್ಯಮಂತ್ರಿಗಳ ಕುರ್ಚಿ ನಿರಂತರವಲ್ಲ, ತಾತ್ಕಾಲಿಕ. ಮೂರು ಕೊಲೆಗಳಾಗಿವೆ. ಮುಖ್ಯಮಂತ್ರಿಗಳು ಅರಣ್ಯ ಅಧಿಕಾರಿಗಳ ಪರವಾಗಿ ನಿಂತಿರುವುದು ಮೇಲ್ನೋಟಕ್ಕೆ ಕಾಣುತ್ತಿದೆ. ನಾವು ಮೊದಲಿನಿಂದಲೂ ಸಿಬಿಐ ತನಿಖೆಗೆ ಆಗ್ರಹಿಸಿದ್ದೇವೆ. ಸರ್ಕಾರ ಪ್ರಕರಣವನ್ನು ಮುಚ್ಚಿಹಾಕಲು ಯತ್ನಿಸುತ್ತಿದೆ ಎಂಬ ಅನುಮಾನ ಬರುತ್ತಿದೆ. ಮುಖ್ಯಮಂತ್ರಿಗಳು ಕೂಲಂಕುಷವಾಗಿ ಪರಿಶೀಲಿಸಿ ನ್ಯಾಯ ಕೊಡಿಸಬೇಕು. ಇಲ್ಲದಿದ್ದರೆ ಜಿಲ್ಲೆಯಾದ್ಯಂತ ಉಗ್ರ ಹೋರಾಟ ಮಾಡುತ್ತೇವೆ" ಎಂದು ಎಚ್ಚರಿಕೆ ನೀಡಿದರು.

ಡಿಎಸ್‌ಎಸ್ ಸಂಚಾಲಕ ಸಿದ್ದರಾಜು ಮಾತನಾಡಿ, "ಇದು ಕೇವಲ ರೈತರ ಪ್ರಶ್ನೆಯಲ್ಲ, ದಲಿತರು, ಬಡವರ ಮೇಲಿನ ದೌರ್ಜನ್ಯ. ಅರಣ್ಯದಂಚಿನಲ್ಲಿ ಬದುಕುತ್ತಿರುವ ಮುಗ್ಧ ಜನರನ್ನು ಬೇಟೆಗಾರರು ಎಂದು ಬಿಂಬಿಸಿ ಹತ್ಯೆ ಮಾಡಲಾಗಿದೆ. ನಾವು ಪರಿಸರ ಮತ್ತು ಅರಣ್ಯ ಸಂರಕ್ಷಣೆಯ ಪರವಾಗಿಯೇ ಇದ್ದೇವೆ, ಆದರೆ ಮಾನವ ಹಕ್ಕುಗಳ ಉಲ್ಲಂಘನೆಯನ್ನು ಸಹಿಸುವುದಿಲ್ಲ. ಆದ್ದರಿಂದ ಸರ್ಕಾರ ಕೂಡಲೇ ನ್ಯಾಯಾಂಗ ತನಿಖೆಗೆ ಆದೇಶಿಸಿ, ಸಂತ್ರಸ್ತ ಕುಟುಂಬಗಳಿಗೆ ನ್ಯಾಯ ಹಾಗೂ ಸೂಕ್ತ ಪರಿಹಾರ ನೀಡಬೇಕು" ಎಂದು ಒತ್ತಾಯಿಸಿದರು.

# ಶಂಖನಾದ ಆರೋಗ್ಯಕರ, ಅಹುದಾ??



ರೂಪ ಮಂಜುನಾಥ ಹೊಳೆನರಸೀಪುರ

ಶಂಖವನ್ನು ಊದುವ ಪದ್ಧತಿಯು ಭಾರತೀಯ ಸಂಸ್ಕೃತಿ ಮತ್ತು ಸನಾತನ ಧರ್ಮದಲ್ಲಿ ಸಾವಿರಾರು ವರ್ಷಗಳ ಸುದೀರ್ಘ ಇತಿಹಾಸವನ್ನು ಹೊಂದಿದೆ. ವೇದಗಳ ಕಾಲದಿಂದಲೂ ಶಂಖಕ್ಕೆ ಪವಿತ್ರ ಹಾಗೂ ಮಹತ್ವದ ಸ್ಥಾನ ನೀಡಲಾಗಿದೆ. ಪ್ರಾಚೀನ ಕಾಲದಲ್ಲಿ ಶಂಖವನ್ನು ಕೇವಲ ಪೂಜೆ-ಪುನಸ್ಕಾರಗಳಿಗೆ ಮಾತ್ರವಲ್ಲದೆ, ಯುದ್ಧದ ಪ್ರಾರಂಭ ಮತ್ತು ಅಂತ್ಯವನ್ನು ಸಾರಲು (ಉದಾಹರಣೆಗೆ ಮಹಾಭಾರತದ ಯುದ್ಧದಲ್ಲಿ ಶ್ರೀಕೃಷ್ಣನ 'ಪಾಂಚಜನ್ಯ' ಶಂಖ), ಶುಭ ಸಮಾರಂಭಗಳ ಸೂಚನೆಗೆ ಹಾಗೂ ರಾಜಮನೆತನದ ಆಜ್ಞೆಗಳನ್ನು ಜನರಿಗೆ ತಿಳಿಸಲು ಬಳಸಲಾಗುತ್ತಿತ್ತು.

ಸಾಮಾನ್ಯವಾಗಿ ಸಮುದ್ರ ತೀರಗಳಲ್ಲಿ ದೊರೆಯುವ ಕಡಲ ಜೀವಿಯ ಗಟ್ಟಿಯಾದ ಕವಚವೇ ಈ ಶಂಖ. ಧಾರ್ಮಿಕವಾಗಿ ಇದನ್ನು 'ಲಕ್ಷ್ಮೀದೇವಿಯ ಸಹೋದರ' (ಸಮುದ್ರ ಮಂಥನದ ವೇಳೆ ಉದ್ಭವಿಸಿದ್ದರಿಂದ) ಎಂದು ಪೂಜಿಸಲಾಗುತ್ತದೆ.

ಸಾಮಾನ್ಯ ಶಂಖವನ್ನು ಎಲ್ಲಿ, ಯಾಕೆ ಮತ್ತು ಹೇಗೆ ಊದುತ್ತಾರೆ?

ದೇವಾಲಯಗಳಲ್ಲಿ ನಿತ್ಯ ಪೂಜೆ ಹಾಗೂ ಆರತಿಯ ಸಮಯದಲ್ಲಿ, ಮನೆಗಳಲ್ಲಿ ನಡೆಯುವ ಧಾರ್ಮಿಕ ವಿಧಿವಿಧಾನಗಳು, ಶುಭ ಸಮಾರಂಭಗಳು, ಯಜ್ಞ-ಯಾಗಾದಿಗಳು ಮತ್ತು ಸಂಧ್ಯಾ ವಂದನೆಯ ಸಮಯದಲ್ಲಿ ಶಂಖವನ್ನು ಊದಲಾಗುತ್ತದೆ.

ಶಂಖದಿಂದ ಹೊರಹೊಮ್ಮುವ ನಾದವು ವಾತಾವರಣದಲ್ಲಿರುವ ನಕಾರಾತ್ಮಕ ಶಕ್ತಿಯನ್ನು (Negative energy) ದೂರವಿಟ್ಟು, ಸಕಾರಾತ್ಮಕ ಶಕ್ತಿಯನ್ನು ಹರಡುತ್ತದೆ ಎಂಬ ನಂಬಿಕೆಯಿದೆ. ಜೊತೆಗೆ, ಇದು ಶುಭ ಕಾರ್ಯಗಳ ಪ್ರಾರಂಭಕ್ಕೆ ಮಂಗಳಕರ ಸಂಕೇತ.

ಶಂಖದ ಸಣ್ಣ ತುದಿಯ ರಂಧ್ರಕ್ಕೆ ತುಟಿಗಳನ್ನು ಸರಿಯಾಗಿ ಒತ್ತಿ ಹಿಡಿದು, ಹೊಟ್ಟೆಯ ಕೆಳಭಾಗದಿಂದ ಶ್ವಾಸಕೋಶದ ಗಾಳಿಯನ್ನು ಬಲವಾಗಿ ಒತ್ತಡದೊಂದಿಗೆ ಹೊರಹಾಕುವ ಮೂಲಕ ಶಂಖನಾದವನ್ನು ಹೊಮ್ಮಿಸಲಾಗುತ್ತದೆ.

ಸಾಂಪ್ರದಾಯಿಕವಾಗಿ ಆರಂಭವಾದ ಈ ಅಭ್ಯಾಸವು, ಇಂದು ತನ್ನ ಅದ್ಭುತ ವೈಜ್ಞಾನಿಕ ಮತ್ತು ಶಾರೀರಿಕ ಪ್ರಯೋಜನಗಳಿಂದಾಗಿಯೂ ಜಗತ್ತಿನ ಗಮನ ಸೆಳೆಯುತ್ತಿದೆ.

ಗಾಳಿಯ ನಾದಕ್ಕೆ ಜೀವ ಕೊಡುವ 'ಶಂಖ': ಪರಂಪರೆಯ ಸದ್ದಿನ ಹಿಂದೆ ವೈದ್ಯಕೀಯ ವಿಜ್ಞಾನ ಕೂಡಾ ಅಡಗಿದೆ!

ಸಂಜೆಯಾಗುತ್ತಿದ್ದಂತೆ ಸಾಲು ಸಾಲು ದೀಪಗಳ ಬೆಳಗು, ಧೂಪದ ಸುವಾಸನೆ... ಇದರ ನಡುವೆ ಒಮ್ಮೆಲೆ ಮೊಳಗುವ 'ಶಂಖನಾದ'! ಆ ನಾದ ಕಿವಿಗೆ ಬಿದ್ದ ತಕ್ಷಣ ಎಂತಹುದೇ ಕಳವಳಗೊಂಡ ಮನಸ್ಸಿನಲ್ಲೂ ಒಮ್ಮೆಲೆ ಶಾಂತಿ ಆವರಿಸುತ್ತದೆ ಅಲ್ಲವೇ?

ಆದರೆ, ಕೇವಲ ಸಮುದ್ರದ ದಂಡೆಯಲ್ಲಿ ಬಿದ್ದಿರುತ್ತಿದ್ದ ಒಂದು ಕಡಲ ಜೀವಿಯ ಖಾಲಿ ಕವಚ, ಇಡೀ ಭಾರತೀಯ ಸಂಸ್ಕೃತಿಯಲ್ಲಿ ಶುಭದ ಸಂಕೇತವಾಗಿದ್ದು ಹೇಗೆ? ಅದರಲ್ಲೂ ಮಹಾಭಾರತದ ಕುರುಕ್ಷೇತ್ರದಲ್ಲಿ 'ಪಾಂಚಜನ್ಯ'ದ ಸದ್ದು ಕೇಳಿ ರಣರಂಗವೇ ನಡುಗಿತ್ತು ಎನ್ನಲಾಗುತ್ತದೆ. ಹಳೆಯ ಕಾಲದ ರಾಜರು ಸಂದೇಶ ಸಾರಲು, ಪೂಜಾರಿಗಳು ಪೂಜೆ ಶುರುಮಾಡಲು, ಕಡಲಮಕ್ಕಳು ಸಮುದ್ರದ ಹಾದಿ ಗುರುತಿಸಲು ಬಳಸುತ್ತಿದ್ದ ಈ ಶಂಖ, ಕೇವಲ ಒಂದು ಧಾರ್ಮಿಕ ವಸ್ತುವಷ್ಟೇ ಅಲ್ಲ. ಅದರ ಪ್ರತಿ ಶಬ್ದದ ಹಿಂದೆಯೂ ಒಂದು ಅಚ್ಚರಿಯ ವಿಜ್ಞಾನವಿದೆ!

**ಶ್ವಾಸಕೋಶಕ್ಕೆ ಒಂದು ನೈಸರ್ಗಿಕ 'ಜಿಮ್'!**

ಶಂಖ ಊದುವುದನ್ನು ಹತ್ತಿರದಿಂದ ನೋಡಿದ್ದೀರಾ? ಅದು ಅಷ್ಟು ಸುಲಭದ ಕೆಲಸವಲ್ಲ. ಹೊಟ್ಟೆಯಾಳದಿಂದ ಗಾಳಿಯನ್ನು ಎಳೆದುಕೊಂಡು, ಇಡೀ ಶ್ವಾಸಕೋಶದ ಬಲವನ್ನೆಲ್ಲಾ ತುಟಿಯ ತುದಿಗೆ ತಂದು ಗಟ್ಟಿಯಾಗಿ ಊದಬೇಕು.

ವೈಜ್ಞಾನಿಕವಾಗಿ ಹೇಳಬೇಕೆಂದರೆ, ನಾವಿಂದು ಅಸ್ತಮಾ ಅಥವಾ ಉಸಿರಾಟದ ಸಮಸ್ಯೆಗೆ ಮಾಡುವ 'ಬ್ರೀಥಿಂಗ್ ಎಕ್ಸರ್‌ಸೈಜ್' (Breathing Exercises) ಇದೆಯಲ್ಲ, ಅದಕ್ಕೆ ನಮ್ಮ ಹಿರಿಯರು ಕಂಡುಕೊಂಡಿದ್ದ ಅತ್ಯಂತ ಸರಳ ರೂಪವೇ ಶಂಖ! ಶಂಖವನ್ನು ಪ್ರತಿದಿನ ಊದುವುದರಿಂದ ಶ್ವಾಸಕೋಶದ ಪ್ರತಿಯೊಂದು ಸಣ್ಣ ಮೂಲೆಗೂ ಆಮ್ಲಜನಕ ತಲುಪುತ್ತದೆ. ಉಸಿರಾಟದ ಸಾಮರ್ಥ್ಯ ಹೆಚ್ಚಿ, ಶ್ವಾಸಕೋಶಕ್ಕೆ ಒಂದು ರೀತಿಯ ಕಟ್ಟುಮಸ್ತಾದ ವ್ಯಾಯಾಮ ಸಿಗುತ್ತದೆ.

**ಮುಖದ ಕಾಂತಿ ಮತ್ತು ಗಂಟಲಿನ ಆರೋಗ್ಯ**

ಶಂಖ ಊದುವಾಗ ಮುಖದ ಪ್ರತಿಯೊಂದು ಸ್ನಾಯುವೂ ಹಿಗ್ಗುತ್ತದೆ, ಗಂಟಲು ಮತ್ತು ಹೊಟ್ಟೆಯ ಭಾಗದಲ್ಲಿ ನೈಸರ್ಗಿಕ ಒತ್ತಡ ಉಂಟಾಗುತ್ತದೆ. ಇದು ಗಂಟಲಿನಲ್ಲಿರುವ ಥೈರಾಯ್ಡ್ ಗ್ರಂಥಿಯನ್ನು ಚುರುಕುಗೊಳಿಸುತ್ತದೆ. ಅಷ್ಟೇ ಏಕೆ, ಮುಖದ ರಕ್ತಸಂಚಾರ ಹೆಚ್ಚಿ ಚರ್ಮಕ್ಕೆ ನೈಸರ್ಗಿಕ ಕಾಂತಿ ಸಿಗುತ್ತದೆ! 'ಫೇಸ್ ಯೋಗ' ಎಂದು ಇಂದಿನ ಜಗತ್ತು ಯಾವುದನ್ನು ಕರೆಯುತ್ತಿದೆಯೋ, ಅದು ಶಂಖ ಊದುವ ಕ್ರಿಯೆಯಲ್ಲಿ ನೈಸರ್ಗಿಕವಾಗಿಯೇ ಅಡಗಿದೆ.

ಮನಸ್ಸನ್ನು 'ರೀಸೆಟ್' ಮಾಡುವ ನಾದದ ಶಕ್ತಿ



ಶಂಖದಿಂದ ಹೊರಹೊಮ್ಮುವ ನಾದ ಕೇವಲ ಸದ್ದಲ್ಲ, ಅದೊಂದು ವಿಶಿಷ್ಟವಾದ ಧ್ವನಿ ತರಂಗ (Sound Wave). ಈ ನಾದದ ಕಂಪನಗಳು ನಮ್ಮ ಮಿದುಳಿನಲ್ಲಿ 'ಆಲ್ಫಾ ತರಂಗಗಳನ್ನು' (Alpha Waves) ಜಾಗೃತಗೊಳಿಸುತ್ತವೆ. ದಿನವಿಡೀ ಕೆಲಸದ ಒತ್ತಡ, ಆತಂಕ ಮತ್ತು ಗೊಂದಲದಲ್ಲಿದ್ದ ಮನಸ್ಸನ್ನು ಕ್ಷಣಾರ್ಧದಲ್ಲಿ ಪ್ರಶಾಂತಗೊಳಿಸುವ ಶಕ್ತಿ ಈ ಧ್ವನಿಗೆ ಇದೆ. ಪ್ರಾಚೀನ ಧ್ವನಿ ಚಿಕಿತ್ಸೆಯಲ್ಲಿ (Sound Therapy) ಶಂಖನಾದಕ್ಕೆ ಪ್ರಮುಖ ಸ್ಥಾನ ನೀಡಿದ್ದಕ್ಕೂ ಇದೇ ಕಾರಣ!

ಹೀಗೆ, ದೇವಸ್ಥಾನದ ಮೂಲೆಯಲ್ಲಿ ಪವಿತ್ರವಾಗಿ ಕುಳಿತಿರುವ ಶಂಖ, ನಮ್ಮ ದೇಹ ಮತ್ತು ಮನಸ್ಸನ್ನು ಆರೋಗ್ಯವಾಗಿಡುವ ಅತ್ಯಂತ ಹಳೆಯ ?ನ್ಯಾಚುರಲ್ ವೆಲ್ನೆಸ್ ಟೂಲ್?!

ದೇಹ ಮತ್ತು ಮನಸ್ಸಿನ ಮೇಲೆ 'ಶಂಖನಾದ' ಬೀರುವ ಅದ್ಭುತ ವೈಜ್ಞಾನಿಕ ಪ್ರಭಾವ!

ಒಮ್ಮೆ ಯೋಚಿಸಿ, ನಾವಿಂದು ಸಣ್ಣಪುಟ್ಟ ಶ್ವಾಸಕೋಶದ ತೊಂದರೆ ಅಥವಾ ಉಸಿರಾಟದ ಸಮಸ್ಯೆಗೆ ವೈದ್ಯರ ಬಳಿ ಹೋದರೆ, ಅವರು ಒಂದು ಪ್ಲಾಸ್ಟಿಕ್ ಉಪಕರಣ (Spirometer) ನೀಡಿ "ಬಲವಾಗಿ ಗಾಳಿ ಊದಿ" ಎಂದು ವ್ಯಾಯಾಮ ಹೇಳಿಕೊಡುತ್ತಾರೆ. ಆದರೆ, ಸಾವಿರಾರು ವರ್ಷಗಳ ಹಿಂದೆಯೇ ನಮ್ಮ ಹಿರಿಯರು ನಮಗೆ ನೀಡಿದ ಅತ್ಯಂತ ನೈಸರ್ಗಿಕ ಜಿಮ್ ಉಪಕರಣ ಎಂದರೆ ಈ ಶಂಖ!

ಶ್ವಾಸಕೋಶಕ್ಕೆ ಸಿಗುವ ನೈಸರ್ಗಿಕ ಚೈತನ್ಯ: ಶಂಖವನ್ನು ಊದಬೇಕಾದರೆ ಹೊಟ್ಟೆಯ ಕೆಳಭಾಗದಿಂದ ಶ್ವಾಸಕೋಶದ ಕೊನೆಯ ಕೊಠಡಿಯವರೆಗೂ ಗಾಳಿಯನ್ನು ತುಂಬಿಕೊಂಡು, ಒಂದೇ ಸಮನೆ ಒತ್ತಡದಿಂದ ಹೊರಹಾಕಬೇಕು. ಹೀಗೆ ಮಾಡಿದಾಗ ಶ್ವಾಸಕೋಶದ ಗಾಳಿ ಸಂಗ್ರಹಣಾ ಸಾಮರ್ಥ್ಯ (Lung capacity) ಹೆಚ್ಚುತ್ತದೆ. ಆಸ್ತಮಾ ಅಥವಾ ನಿರಂತರ ಕೆಮ್ಮಿನಿಂದ ಬಳಲುವವರಿಗೆ ಇದೊಂದು ನೈಸರ್ಗಿಕ ಉಸಿರಾಟದ ಥೆರಪಿಯಂತೆ ಕೆಲಸ ಮಾಡುತ್ತದೆ.

ವಯಸ್ಸಾಗದ ಮುಖದ ಚರ್ಮ ಮತ್ತು ಥೈರಾಯ್ಡ್ ಆರೋಗ್ಯ: ಶಂಖ ಊದುವಾಗ ಮುಖದ ಪ್ರತಿಯೊಂದು ಸ್ನಾಯುವೂ ವಿಸ್ತರಿಸುತ್ತದೆ. ಇದು ಗಂಟಲಿನ ಭಾಗದಲ್ಲಿ ನೈಸರ್ಗಿಕವಾದ ಮಸಾಜ್ ನೀಡುವ ಮೂಲಕ ಅಲ್ಲಿರುವ 'ಥೈರಾಯ್ಡ್ ಗ್ರಂಥಿ'ಯನ್ನು ಚುರುಕುಗೊಳಿಸುತ್ತದೆ. ಜೊತೆಗೆ, ಮುಖದ ಕೋಶಗಳಿಗೆ ರಕ್ತ ಸಂಚಾರ ತೀವ್ರಗೊಂಡು, ಚರ್ಮದ ಸ್ಥಿತಿಸ್ಥಾಪಕತ್ವ ಹೆಚ್ಚುತ್ತದೆ. ಇಂದಿನ ಜಮಾನಾದ 'ಫೇಸ್ ಯೋಗ' ಮಾಡುವ ಕೆಲಸವನ್ನು ಶಂಖದ ನಾದ ದಿನವೂ ಸೈಲೆಂಟ್ ಆಗಿ ಮಾಡಿ ಮುಗಿಸುತ್ತದೆ!

ಕಿಬ್ಬೊಟ್ಟೆ ಮತ್ತು ಪ್ರೊಸ್ಟೇಟ್ ಗ್ರಂಥಿಯ ಬಲವರ್ಧನೆ: ಶಂಖ ಊದುವಾಗ ಹೊಟ್ಟೆಯ ಕೆಳಭಾಗದ (Pelvic floor) ಸ್ನಾಯುಗಳ ಮೇಲೆ ಪ್ರಬಲವಾದ ಒತ್ತಡ ಬೀಳುತ್ತದೆ. ಇದು ಪುರುಷರಲ್ಲಿ ಪ್ರೊಸ್ಟೇಟ್ ಗ್ರಂಥಿಯ ಆರೋಗ್ಯವನ್ನು ಕಾಯ್ದುಕೊಳ್ಳಲು ಮತ್ತು ಮೂತ್ರಕೋಶದ ಮೇಲಿನ ನಿಯಂತ್ರಣವನ್ನು ಉತ್ತಮಪಡಿಸಲು ಅತ್ಯಂತ ಪರಿಣಾಮಕಾರಿ ಎಂದು ವಿಜ್ಞಾನ ಒಪ್ಪಿಕೊಳ್ಳುತ್ತದೆ.

ಮಿದುಳನ್ನು 'ರೀಸೆಟ್' ಮಾಡುವ ಧ್ವನಿ ತರಂಗಗಳು: ಶಂಖದಿಂದ ಹೊರಹೊಮ್ಮುವ ಗಂಭೀರ ನಾದವು ಸಾಮಾನ್ಯ ಶಬ್ದವಲ್ಲ. ಅದರ ಧ್ವನಿ ತರಂಗಗಳು ನಮ್ಮ ಮಿದುಳಿನಲ್ಲಿ 'ಆಲ್ಫಾ ತರಂಗಗಳನ್ನು' (Alpha waves) ಸೃಷ್ಟಿಸುತ್ತವೆ. ದಿನವಿಡೀ ಆತಂಕ, ಕೆಲಸದ ಒತ್ತಡ ಮತ್ತು ಗೊಂದಲದಲ್ಲಿದ್ದ ಮನಸ್ಸು ಶಂಖದ ನಾದ ಕಿವಿಗೆ ಬಿದ್ದ ತಕ್ಷಣ ಪ್ರಶಾಂತಗೊಳ್ಳಲು ಈ ನರಮಂಡಲದ ರಿಯಾಕ್ಷನ್ ಕಾರಣ.

ಹೀಗೆ, ಪೂಜಾ ಕೊಠಡಿಯಲ್ಲಿ ಶಾಂತವಾಗಿ ಕುಳಿತಿರುವ ಶಂಖ, ಕೇವಲ ಧಾರ್ಮಿಕ ಸಂಕೇತವಲ್ಲ; ಅದು ನಮ್ಮ ದೇಹ ಮತ್ತು ಮನಸ್ಸನ್ನು ಒಂದೇ ಏಟಿಗೆ ಟ್ಯೂನ್ ಮಾಡುವ ?ನ್ಯಾಚುರಲ್ ವೆಲ್ನೆಸ್ ಸೈನ್ಸ್?! ಈಗ ನೀವು ಪೂಜೆ ಮಾಡುವಾಗ ಮಾತ್ರವೇ ಶಂಖ ಊದಬೇಕೆಂದೇನೂ ಇಲ್ಲ. ನಿಮ್ಮ ಮುಖ ಸೌಂದರ್ಯ, ಶ್ವಾಸ ಕೋಶ, pelvic floor, ಮೂತ್ರಕೋಶ, ಮನಸ್ಸು, ಎಲ್ಲವೂ ಸ್ವಸ್ಥವಾಗಿರಬೇಕೆಂದರೆ, ಯಾವ ಸಮಯದಲ್ಲಾದರೂ ಶಂಖ ಊದಿ!

ವಂದನೆಗಳು.

---

# ಒಮ್ಮನಸ ಅನುಭೂತಿ

## ಮುದ್ದುರಾಮನ ಅರಿವು ಭಾಗ- 4



ಡಾ. ಪ್ರದೀಪಕುಮಾರ ಹೆಬ್ರಿ
98440 18457

**ತೋರಿಕೆಯ ಸೋಗನ್ನೆ ಶಿವಧ್ಯಾನವೆನ್ನುವುದೆ?**
**ಲೀನತೆಯ ಉತ್ತುಂಗ ಶಿಖರ ಅನುಭಾವ.**
**ಬೀದಿಸರಕಿನ ಜೊತೆಗೆ ಮಾಣಿಕದ ಹೋಲಿಕೆಯೆ?**
**ಎಣಿಕೆ, ಬಿಡುಬಿಡು, ಸಲ್ಲ!- ಮುದ್ದುರಾಮ**

ನಮ್ಮ ಜೀವನವು ಪರಮ ಎಂದೆನಿಸಬೇಕಾದರೆ ಅಗತ್ಯವಾಗಿ ಬೇಕಾದುದು ಸತ್ಸಂಗ. ಸತ್ಸಂಗದಿಂದಲೇ ಮಾನವನ ಬದುಕು ಪವಿತ್ರ ಎನಿಸುವಂಥದ್ದು. ಬದುಕು ಪವಿತ್ರ ಆಗುವುದೆಂದರೆ ಹಣ್ಣಿನ ಮಾಗುವಿಕೆ. ಹುಳಿಯಾದ ಹಣ್ಣು ಸಿಹಿಯಾಗಿ ಮಾರ್ಪಡುವಂಥದ್ದು. ಇದು ಬದುಕಿನನುಭವದ ಸುಸ್ವರ. ಇದರಿಂದ ನಿಶ್ಚಿತವಾಗಿ ಹೊಸಹೊಸತು ಜೀವಲಯ. ನಮ್ಮ ಬದುಕು ಅರಿವಿನ ಉರಿಯಲ್ಲಿ ಕಾದರೆ ಬೆಣ್ಣೆಯ ಮುದ್ದೆ ಘಮಘೃತವು ಆದಂತೆ. ಇದರಿಂದ ಬದುಕಿನಲ್ಲಿ ಎದುರಿಸಲೇ ಬೇಕಾದ ಕಷ್ಟನಷ್ಟಗಳ ಅರಿವು ಮೂಡಿ ಅನುಭಾವ ಎದೆದೀಪ್ತಿ ಎಂದೆನಿಸುತ್ತದೆ.

ಕಪಟ ದೇಶಪ್ರೇಮಿಗಳು, ಕಪಟ ಸನ್ಯಾಸಿಗಳು... ಮೊದಲಾದವರು ನಾಡಿನೆಲ್ಲೆಡೆ ರಾರಾಜಿಸುತ್ತಿದ್ದಾರೆ. ಆದರಿವರ ಬಹಿರಂಗ ವರ್ತನೆಗೂ ಅಂತರಂಗದ ಉಸುರಿಗೂ ಯಾವುದೇ ಸಂಬಂಧವಿಲ್ಲ. ಇವರಿಗೆ ಸ್ವಯಂಲಾಭದ ಆಸೆಯೇ ಹೊರತು ಜನಸಾಮಾನ್ಯರ ನೋವು ನಲಿವುಗಳತ್ತ ಎಂದೂ ಗಮನ ಕೊಡುವುದೇ ಇಲ್ಲ. ಇವರ ಚಿತ್ತದಲ್ಲಿ ಆಸೆಯೇ ವಿನಃ ಸ್ಪಂದನಾ ಭಾವ ಇಲ್ಲವೇ ಇಲ್ಲ. ಸ್ಪಂದನಾಭಾವ ಇರದಿರುವಲ್ಲಿ ಸ್ವಲಾಭದ ಹೊರತಾಗಿ ಬೇರೇನೂ ಬೇಕಿಲ್ಲ. ಇದು ನನದೆನುವ ನಾನತ್ವಕ್ಕೆ ನಿಜಸಾಕ್ಷಿ. ಕೋಗಿಲೆಯ ಮಧುರಗಾನ ಯಾರನ್ನೂ ತೃಪ್ತಿ ಪಡಿಸಲು ಅಲ್ಲ. ಹಾಡದಿದ್ದರೆ ತಡೆಯಲಾಗದ ಕಾರಣದಿಂದ ಹಾಡುತ್ತವೆ. ಯಾರ ಆಲಿಸುವಿಕೆಯ, ಹೊಗಳುವಿಕೆಯ ನಿರೀಕ್ಷೆಯಲ್ಲೂ ಇರುವುದಿಲ್ಲ. ಆದರೆ ನಮ್ಮಲ್ಲಿ 'ನಾನು, ನನ್ನಿಂದ' ಎಂಬ ಅಹಮಿಕೆಯ ಅತಿರೇಕ ಮೂಡಿದರೆ ಮಾನಸಿಕ ನೆಮ್ಮದಿಯ ಪತನ ಆರಂಭ. ಹಾಗಾಗಿ ನಮಗೆ ನಿಜದರಿವ ಪ್ರಜ್ಞೆ ಬೇಕು. ಇದಿದ್ದಾಗಲೇ ಅರಿವು ದಿವ್ಯತೆದೀಪ ಎಂದಾಗಿ ಕಂಗೊಳಿಸುತ್ತದೆ.

ನಮ್ಮೀ ಜಗತ್ತಿನಲ್ಲಿ ' ಸಹಜತೆ ' ಎಂಬುದು ಅಪರೂಪವಾದುದು. ಎಲ್ಲರೂ ವೈಯುಕ್ತಿಕ ಲಾಭದಾಸೆಯಿಂದಲೇ ಸಾರ್ವಜನಿಕ ಬಂಧುತ್ವದ ನಾಟಕ ಆಡುವವರು. ಅವರಿಗಾಗುವ ಲಾಭದ ಹೊರತಾಗಿ ಅವರಿಗೆ ಇನ್ನಾವುದರ ಅಗತ್ಯವೂ ಇಲ್ಲ. ಆದರೆ ಸೊಟ್ಟಗಾದರೆ ದೃಷ್ಟಿ ವಿಷಮವಾಗದೆ ಸೃಷ್ಟಿ? ಪ್ರಶ್ನೆ ಮನದಲ್ಲಿ ಮೂಡಿದರೆ ನಮಗಾಗುವ ಕಷ್ಟ- ನಷ್ಟಗಳ ಅರಿವು ಮೂಡುತ್ತದೆ. ಇದನ್ನರಿತೇ ಕವಿಯರುಹಿದ್ದು, ಚೆಲುವಿರಲಿ ಒಳನೋಟ ಸೌಂದರ್ಯವರ್ಧನೆಗೆ/ ನಯನ ನೋಟದ ನಲಿವು/ ಎಂದು.

ಬಂದು, ಇದ್ದು, ಹೋಗುವ ನಮ್ಮೀ ಬದುಕಿನಲ್ಲಿ ನಾವೆಂದೂ ಕಪಟ ವೇಷಧಾರಿಗಳಾಗಬಾರದು. ಏಕೆಂದರೆ ರಂಜನೆಯ




ವೇಷದಲಿ ಸಹಜತೆಯ ಸುಳಿವಿಲ್ಲ ಎಂದರಿತಂತೆ ಬಾಳ ನಿಜಾರ್ಥದರಿವು. ನಮ್ಮಲ್ಲಿ ಎಲ್ಲವೂ ಇದೆ, ಆದರೆ ಸಹೃದಯರೆ, ಸಚ್ಚಿಂತನೆ, ಸಹಯೋಗ, ಸುವಿವೇಕದ ನಿಜದರಿವು ಇರದಿದ್ದಲ್ಲಿ ಪ್ರಜ್ಞಾವಂತಿಕೆ ಕೇಳುವ ಪ್ರಶ್ನೆಯೇ,' ಬೆಳಕತ್ತ ಮೊಗಮಾಡಿ ಧೀಶಕ್ತಿ ಬೇಡದಿರೆ/ಚೈತನ್ಯವೆಲ್ಲಿಹುದೊ ತಮದ ದೇಹದಲಿ? ಎಂದುಮಾತ್ರ. ಹಾಗಾಗಿ ಬದುಕ ಪ್ರಜ್ವಲತೆ ಎಂದರೆ ಸತ್ವಪುಂಜ. ಆಸೆ, ಆಮಿಷದಿಂದ ತಾಮಸವು ಬದುಕಲ್ಲಿ ತುಂಬುತ್ತದೆ. ಆದರೆ ಸದಾ ನೆನಪಿನಲ್ಲಿ ಇರಬೇಕಾದುದು ನಿಜಪಥವ ಅರಿತವರಿಗಾವ ಭಯವಿಲ್ಲ ಎಂಬುದು ಮಾತ್ರ. ಯಾವುದೋ ವೈಯುಕ್ತಿಕ ಆಸೆ ಆಮಿಶಗಳಿಗೆ ಬಲಿಯಾಗಿ ರಾರಾಜಕತೆಯ ಸರದಾರರಾಗುವ ಬದಲು ಶುದ್ಧತೆಯ ಬದಿಯಲ್ಲಿ ನಿಶ್ಚಿಂತ ಹರುಷವಿದೆ ಎಂಬ ನಿಜವನರಿತು ನಡೆ- ನುಡಿಗಳ ಒಂದಾಗಿಸಿಕೊಂಡು ಆದರ್ಶ ಜೀವನ ಮುನ್ನಡೆಸೋಣ. ಶಿವನೇ ಮೆಚ್ಚಿ ಅಹುದು ಅಹುದು ಎನುವಂತೆ ಬೆಳಕಿನ ಹಾದಿ ಯ ನಿತ್ಯಪಯಣಿಗರಾಗೋಣ.



ಕೆ.ಸಿ.ಶಿವಪ್ಪ

---



ಸ್ನೇಹಾ ಆನಂದ್

ಯಾವ ವ್ಯಕ್ತಿಗೆ ಆಗಲಿ ನನಗೆ ವಯಸ್ಸಾಯಿತು ಎನ್ನುವ ಚಿಂತೆ ಕಾಡುವುದು ಐವತ್ತು ವರ್ಷಗಳು ಮೇಲ್ಪಟ್ಟ ನಂತರ, ಅಲ್ಲಿಯ ತನಕ ಹಾರಾಟ ಜೋರಾಗಿಯೇ ಇರುತ್ತದೆ!

ಆ ಸಮಯದಲ್ಲಿ ಹೊತ್ತ ಜವಾಬ್ದಾರಿಗಳು ಹಾಗು ಆರೋಗ್ಯದ ಚಿಂತೆಗಳು ಬಹುಶಃ ತಮ್ಮ ರೇಖೆಯನ್ನು ಹಣೆಯಲ್ಲಿ ಮೂಡಿಸಿರುತ್ತವೆ, ಮುಖ ಆ ವ್ಯಕ್ತಿಗೆ ಗೊತ್ತಿಲ್ಲದಂತೆ ಸುಕ್ಕಾಗುತ್ತದೆ, ಅಲ್ಲೊಂದು ಇಲ್ಲೊಂದು ಮೂಡಿದ್ದ ಬಿಳಿ ಕೂದಲು ತಲೆ ತುಂಬಾ ಹರಡುತ್ತವೆ, ಯೌವನದಲ್ಲಿ ಅರಳಿದ್ದ ಕಣ್ಣುಗಳು ಸ್ವಲ್ಪ ಆಯಾಸಗೊಳ್ಳುತ್ತವೆ!

ಹೀಗೆ ಒಬ್ಬೊಬ್ಬರಿಗೆ ಒಂದೊಂದು ಬದಲಾವಣೆ ಕಾಣಿಸುತ್ತಾ ಹೋಗುತ್ತದೆ, ನಿದ್ದೆ ಸರಿಯಿಲ್ಲದೇ ಹೋಗುವುದು, ಕಾಲುಗಳು ಸೋತು ಓಡಾಟ, ಕೆಲಸ ಕಡಿಮೆ ಮಾಡಬೇಕು ಎನಿಸುವುದು ಹೀಗೆ ಏನೇನೋ ಲಕ್ಷಣಗಳು ಕಾಣುತ್ತಿವೆ!

ಒಂದು ವೇಳೆ ದೈಹಿಕ, ಮಾನಸಿಕ ಆರೋಗ್ಯ ಸರಿಯಾಗಿದ್ದರೆ ತಕ್ಕಮಟ್ಟಿಗೆ ಅವರ ಸುಂದರತೆ ಕೂಡ ಮಾಸಿರುವುದಿಲ್ಲ!

ಆದರೆ ಯೌವನದ ಫೋಟೋ ತೆಗೆದು ನೋಡಿದಾಗ ಮುಖದಲ್ಲಿ ಕಳೆದು ಹೋದ ಆ ಮುಗ್ಧತೆ, ಆ ಎಳೆತನ ಹಾಗು ಕಣ್ಣಲ್ಲಿರುವ ಆ ಮಿಂಚು ಕಡಿಮೆಯಾಗಿದ್ದು ತಿಳಿಯುತ್ತದೆ ನಮ್ಮ ಮುಖದಲ್ಲಿ, ದೇಹದಲ್ಲಾದ ವ್ಯತ್ಯಾಸದಿಂದ ಇವೆಲ್ಲವೂ ಹೊರಗೆ ಕಂಡು ಬರುತ್ತವೆ!

ದಿನ ನಿತ್ಯದಲ್ಲಾದ ನಿಧಾನವಾಗಿ ಆದ ಬದಲಾವಣೆ ನಮಗೇ ತಿಳಿಯದೇ ವರ್ಷಗಳ ಮೇಲೆ ಹಳೆಯ ಫೋಟೋ ನೋಡಿದಾಗ ತನ್ನಿಂತಾನೇ ಅರಿವಿಗೆ ಬರುತ್ತದೆ! ನಮ್ಮನ್ನು ಎಷ್ಟೋ ವರ್ಷಗಳ ಮೇಲೆ ನೋಡಿದವರು ಇದನ್ನು ಸರಿಯಾಗಿ ಕಂಡು ಹಿಡಿಯುತ್ತಾರೆ ಕೂಡ!

ಆದರೆ ಇದೇ ಸಮಯದಲ್ಲಿ ಮನಸಿನ



# ಆರೋಗ್ಯವಿದ್ದರ ಆಯಸ್ಸು

ಸ್ನೇಹ ಲೋಕ

ಆತಂಕಗಳು ಜಾಸ್ತಿ ಆದರೆ ಅಣ್ಣ, ತಮ್ಮಂದಿರಂತಿರುವ ಬಿಪಿ, ಶುಗರ್ ದೇಹದಲ್ಲಿ ಅಡಗಿ ಕುಳಿತು ಗುರ್ ಎನ್ನುತ್ತವೆ, ಹಾರ್ಮೋನ್ಸ್ ಬದಲಾವಣೆಯಿಂದ ಸ್ಥೂಲಕಾಯ ಹೊಂದಿ ತೆಳ್ಳಗಿದ್ದವರು ದಪ್ಪಗಾಗಬಹುದು, ದಪ್ಪವಾಗಿದ್ದವರು ತೆಳ್ಳಗಾಗಬಹುದು ಕೂಡ! ಏಕೆಂದರೆ ಜೀವನದ ಏಳು ಬೀಳುಗಳು ನಮಗೆ ಗೊತ್ತಿಲ್ಲದಂತೆ ಪರಿಣಾಮ ಬೀರುತ್ತವೆ!

ಇದೆಲ್ಲಾ ಒಂದು ಕಡೆಯ ಕಿರಿಕಿರಿಯಾದರೆ,



ಇನ್ನೊಂದು ಕಡೆಗೆ ಯಾಕೆ ಇಷ್ಟು ದಪ್ಪವಾಗಿದ್ದೀರಿ, ಊಟ ಕಂಟ್ರೋಲ್ ಮಾಡಿ ಎನ್ನುವ ಅಪಹಾಸ್ಯದ ಮಾತುಗಳು, ಇಲ್ಲ ಯಾಕೆ ಇಷ್ಟು ಸೊರಗಿದ್ದೀರಿ ಹುಷಾರಿಲ್ಲವೇ!? ಎನ್ನುವ ಮಾತು ಕೇಳಿ,ಕೇಳಿ ಮನಸ್ಸಿಗೆ ಸಹಜವಾಗಿ ಕಿರಿಕಿರಿ ಹಾಗು ಕಳವಳ ಉಂಟಾಗುತ್ತದೆ! ಸಮಾಜದ ಜನರೂ ಅಷ್ಟೇ ಇನ್ನೊಬ್ಬರ ವೈಯಕ್ತಿಕ ಕಿರಿಕಿರಿಗಳನ್ನು ಹೇಗೋ ತಿಳಿದುಕೊಂಡಿದ್ದರೆ ಅದನ್ನು ಜಾಸ್ತಿ ಮಾಡಲು ನೋಡುತ್ತಾರೆ ಹೊರತು ಅದಕ್ಕೆ ಸಮಾಧಾನ ಕೊಡುವುದಿಲ್ಲ, ಅವರ ನೋವು ಇವರಿಗೆ ಅಪಹಾಸ್ಯಕ್ಕೆ ಒಂದು ವಿಷಯ ಸಿಕ್ಕಂತೆ ಅಷ್ಟೇ!

ಈ ಮನಸ್ಸು ಎನ್ನುವುದು ಒಂದು ಮರ್ಕಟವಿದ್ದಂತೆ, ಈಗ ಇದ್ದ ಹಾಗೆ ಇನ್ನೂ ಸ್ವಲ್ಪ ಹೊತ್ತಿಗೆ ಇರುವುದಿಲ್ಲ, ಸಂಸಾರದ ಚಿಂತೆಗಳು, ವೈಯಕ್ತಿಕ ಆರೋಗ್ಯ, ಮನೆಯ ಜವಾಬ್ದಾರಿ ಹೀಗೆ ನೂರೆಂಟು ಮನಸಿನಲ್ಲಿ ಕೊರೆಯುವ ವಿಷಯಗಳು ಸೇರಿ ದೈಹಿಕ ಆರೋಗ್ಯವನ್ನು ಹದಗೆಡಿಸುತ್ತವೆ!

ಕಾಲ ಬದಲಾದಂತೆ ಆಧುನಿಕತೆ ಜಾಸ್ತಿ ಆದಂತೆ ವ್ಯಕ್ತಿಯ ಆಯಸ್ಸಿನ ಪರಿಮಿತಿಯೂ ನಿಧಾನವಾಗಿ ಕ್ಷೀಣಿಸುತ್ತಾ ಬರುತ್ತಿದೆ,

ಹೀಗಾಗಿ ವಯಸ್ಸು ಐವತ್ತು ದಾಟಿದ ನಂತರ ಇನ್ನುಳಿದ ದಿನಗಳಲ್ಲಿ ನಮ್ಮ ಮನಸ್ಸು, ದೈಹಿಕ ಆರೋಗ್ಯಕ್ಕೆ ಮಾತ್ರ ಗಮನ ಕೊಟ್ಟರೆ ನಮ್ಮ ಜೀವನ ಪರಾಧೀನವಾಗುವುದಿಲ್ಲ!

Published by Mihir Akash K.R Printed by M.S.Shivaprakash on behalf of Mihir Akash K.R. Printed at M.S. Shivaprakash, IDEAL OFFSET PRINTERS, #337, SLJ Temple Street, Old Town Mandya Dist-571401, Karnataka. Published from No 170, Nirvikalpa Road, E&F block, Ramakrishna Nagar, Mysore - 570022, Editor K.N Ravi,